# ಜನತಾ ವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ಸಂಪಾದಕರು : ಎಂ.ಎಸ್. ವಿಕಾಸ್

ದಾವಣಗೆರೆ ಸೋಮವಾರ, ಆಗಸ್ಟ್ 26, 2024

ಸಂಪುಟ : 51 ಸಂಚಿಕೆ : 104 ☎ 08192-254736 91642 99999 RNI No: 27369 ಪುಟ : 6 ರೂ : 5.00 www.janathavani.com janathavani@mac.com


## ಉಳ್ಳವರ ಸಹಕಾರ ಪಡೆಯಿರಿ, ಅಶಕ್ತರಿಗೆ ನೆರವು ನೀಡಿ



**ಜಿಲ್ಲಾ ನೊಳಂಬ ವೀರಶೈವ ಲಿಂಗಾಯತ ಸಂಘದ ಉದ್ಘಾಟನೆ ಹಾಗೂ ಪ್ರತಿಭಾ ಪುರಸ್ಕಾರ ಕಾರ್ಯಕ್ರಮದಲ್ಲಿ ಮಾಜಿ ಸಚಿವ ಜಿ.ಸಿ. ಮಾಧುಸ್ವಾಮಿ ಸಲಹೆ**

ದಾವಣಗೆರೆ, ಆ. 25- ಸಮಾಜದಲ್ಲಿ ಉಳ್ಳವರನ್ನು ಗುರುತಿಸಿ, ಸಂಘಟಿಸಿ ಅವರ ಸಹಕಾರದಿಂದ ಅಶಕ್ತರಿಗೆ ನೆರವು ನೀಡುವ ಕೆಲಸ ಮಾಡಬೇಕು ಎಂದು ಮಾಜಿ ಸಚಿವ ಜಿ.ಸಿ. ಮಾಧುಸ್ವಾಮಿ ಸಲಹೆ ಹೇಳಿದರು.

ಭಾನುವಾರ ನಗರದ ಕುವೆಂಪು ಕನ್ನಡ ಭವನದಲ್ಲಿ ಹಮ್ಮಿಕೊಳ್ಳಲಾಗಿದ್ದ ದಾವಣಗೆರೆ ಜಿಲ್ಲಾ ನೊಳಂಬ ವೀರಶೈವ ಲಿಂಗಾಯತ ಸಂಘ (ರಿ.)ದ ಉದ್ಘಾಟನೆ ಹಾಗೂ ಪ್ರತಿಭಾ ಪುರಸ್ಕಾರ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಯಾರ ವಿರುದ್ಧವೋ ಹೋರಾಡಲು ಅಥವಾ ಯಾರದ್ದೋ ಸಮಾಜದ ಪರ್ಯಾಯವಾಗಿ ಈ ಸಂಘಟನೆ ಎಂದು ತಿಳಿಯಬಾರದು. ಎಲ್ಲಾ ಸಮಾಜದವರೂ ನಮ್ಮ ಬಂಧುಗಳು. ಅವರನ್ನು ಜೊತೆಗೆ ತೆಗೆದುಕೊಂಡು ಹೋಗಬೇಕು ಎಂದರು.

ದೇವರು ಎಲ್ಲರಿಗೂ ಸಮಾನವಾಗಿ ಹಂಚಿರುವುದಿಲ್ಲ. ಸಮಾಜದಲ್ಲಿ ಇದ್ದವರ ಜೊತೆ ಇಲ್ಲದವರೂ ಇರುತ್ತಾರೆ. ಸಮಾಜದವರ ಪ್ರತಿ ಮನೆಗೂ ತೆರಳಿ ಅವರ ಆರ್ಥಿಕ, ಸಾಮಾಜಿಕ ಸ್ಥಿತಿ ಗತಿಯ ಸರ್ವೇ ನಡೆಸಬೇಕು. ಉಳ್ಳವರ ನೆರವು ಪಡೆದು ಬಡವರನ್ನು ಮುಖ್ಯವಾಹಿನಿಗೆ ತರಬೇಕು ಎಂದು ಕಿವಿ ಮಾತು ನೀಡಿದರು.

ಓದು-ಬರಹ ಬರದಿದ್ದರೂ ಹೆತ್ತವರ ತೃಪ್ತಿಗೆ ಮಕ್ಕಳಿಗೆ ಎ ಪ್ಲಸ್ ಗ್ರೇಡ್ ಕೊಟ್ಟರೆ ಮಕ್ಕಳ ಭವಿಷ್ಯವೇನು? ಎಂದು ಪ್ರಶ್ನಿಸಿದ ಅವರು, ಸಭ್ಯತೆ, ವಿನಯತೆ ಹೆಸರಿನಲ್ಲಿ ನಮ್ಮ ಮಕ್ಕಳ ಶಕ್ತಿ ಕುಂದಿಸುತ್ತಿದ್ದೇವೆ. ಪರಾವಲಂಬಿ ಜೀವನದಲ್ಲಿ ಬೆಳೆಯುವಂತಹ ಸ್ಥಿತಿ ನಿರ್ಮಿಸಿದ್ದೇವೆ. ಉತ್ತಮ ಶಿಕ್ಷಣದ ಮೂಲಕ ನಮ್ಮ ಪಾಲು ಪಡೆಯಲು ಸಮರ್ಥವಾಗಿ ಹೋರಾಡುವಂತೆ ಮಕ್ಕಳನ್ನು ಬೆಳೆಸಬೇಕಿದೆ ಎಂದರು.

ದೇಶ ಅಭಿವೃದ್ಧಿ ಹೊಂದಿದೆ ಎಂದು ನಾವೆಲ್ಲಾ ಭಾಷಣ ಮಾಡುತ್ತೇವೆ. ಆದರೆ ನಾವು ಪ್ರಗತಿ ಹೊಂದಿದ ರಾಷ್ಟ್ರಗಳಿಗಿಂತ 20 ವರ್ಷ ಹಿಂದಿದ್ದೇವೆ. ವೈಜ್ಞಾನಿಕ ಸಂಶೋಧನೆಗಳು ಭಾರತದಲ್ಲಿ ಸತ್ತು ಹೋಗಿವೆ. ತಾಂತ್ರಿಕವಾಗಿ ಪ್ರಗತಿ ಹೊಂದುತ್ತಿದ್ದೇವೆ. ಆದರೆ ಸಾಮಾನ್ಯ ವಿಜ್ಞಾನದ ಅರಿವಿಲ್ಲ. ಸಂಶೋಧನೆಗಳನ್ನು ಕೇವಲ ನಕಲು ಮಾಡಲಾಗುತ್ತಿದೆ. ಸಂಶೋಧನೆ ಇಲ್ಲದೆ ತಂತ್ರಜ್ಞಾನ ಸಮೃದ್ಧಿಯಾಗುವುದಿಲ್ಲ ಎಂದು ಹೇಳಿದರು.

ಜಿಲ್ಲಾ ನೊಳಂಬ ವೀರಶೈವ ಲಿಂಗಾಯತ ಸಂಘದ ಕಾರ್ಯದರ್ಶಿ ಡಾ. ಇ. ವಿರೂಪಾಕ್ಷಪ್ಪ ಪ್ರಾಸ್ತಾವಿಕವಾಗಿ ಮಾತನಾಡುತ್ತಾ, ಜಿಲ್ಲೆಯಲ್ಲಿ ಸಮಾಜವನ್ನು ಸಂಘಟಿತಗೊಳಿಸಿ, ಹಿಂದುಳಿದವರ ನ್ನು ಮುಖ್ಯವಾಹಿನಿಗೆ ತರಲು, (4ನೇ ಪುಟಕ್ಕೆ)

## ಸಿಎಂಗೆ ಶ್ರೀಗಳ ಬೆಂಬಲ

### ನೈತಿಕ ಬೆಂಬಲ ಘೋಷಿಸಿದ ದಲಿತ, ಹಿಂದುಳಿದ ವರ್ಗಗಳ ಸ್ವಾಮೀಜಿಗಳು



ಬೆಂಗಳೂರು, ಆ. 25 - ಹಿಂದುಳಿದ ವರ್ಗ ಮತ್ತು ದಲಿತ ಹಾಗೂ ಶೋಷಿತ ಸಮುದಾಯಗಳ ಸ್ವಾಮೀಜಿಗಳ ನಿಯೋಗ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಭೇಟಿ ಮಾಡಿ, ಬೇಷರತ್ ನೈತಿಕ ಬೆಂಬಲ ಘೋಷಿಸಿದೆ.

ಮುಡಾ ಹಗರಣ ಸಂಬಂಧ ಮುಖ್ಯಮಂತ್ರಿ ಸಿದ್ದರಾಮಯ್ಯ ವಿರುದ್ಧ ಪ್ರಾಸಿಕ್ಯೂಷನ್‌ಗೆ ರಾಜ್ಯಪಾಲರು ಅನುಮತಿ ನೀಡಿದ ಹಿನ್ನೆಲೆಯಲ್ಲಿ, ಅವರು ರಾಜೀನಾಮೆ ನೀಡಬೇಕೆಂದು ವಿಪಕ್ಷಗಳು ಒತ್ತಾಯಿಸಿವೆ.

ಈ ಹಿನ್ನೆಲೆಯಲ್ಲಿ ಸಿದ್ದರಾಮಯ್ಯ ಭೇಟಿ ಮಾಡಿರುವ ಸ್ವಾಮೀಜಿಗಳು, ಕಾಂಗ್ರೆಸ್ ಸರ್ಕಾರವನ್ನು ಅಸ್ಥಿರಗೊಳಿಸುವ ಕೇಂದ್ರ ಸರ್ಕಾರ ಮತ್ತು ರಾಜಭವನದ ಷಡ್ಯಂತ್ರಗಳನ್ನು ತೀವ್ರವಾಗಿ ಖಂಡಿಸುತ್ತೇವೆ. ಷಡ್ಯಂತ್ರದ ವಿರುದ್ಧ ಒಕ್ಕೊರಲಿನಿಂದ ಸಿದ್ದರಾಮಯ್ಯ ಬೆಂಬಲಕ್ಕೆ ನಿಲ್ಲುತ್ತೇವೆ ಎಂದು ಘೋಷಿಸಿದ್ದಾರೆ ಎಂದು ಮುಖ್ಯಮಂತ್ರಿ ಕಚೇರಿಯ ಹೇಳಿಕೆಯಲ್ಲಿ ತಿಳಿಸಲಾಗಿದೆ.

ಈ ನಿಯೋಗದಲ್ಲಿ ಕಾಗಿನೆಲೆ ಕನಕಪೀಠದ ಶ್ರೀ ನಿರಂಜನಾನಂದಪುರಿ ಮಹಾಸ್ವಾಮೀಜಿ, ಹೊಸದುರ್ಗದ ಕುಂಚಿಟಿಗ ಮಹಾಸಂಸ್ಥಾನ ಮಠದ ಜಗದ್ಗುರು ಶ್ರೀ ಶಾಂತವೀರ ಮಹಾಸ್ವಾಮೀಜಿ, ಚಿತ್ರದುರ್ಗದ ಭೋವಿ ಗುರುಪೀಠದ ಜಗದ್ಗುರು ಶ್ರೀ ಇಮ್ಮಡಿ ಸಿದ್ದರಾಮೇಶ್ವರ ಸ್ವಾಮೀಜಿ, ಚಿತ್ರದುರ್ಗದ ಮಾದಾರ ಚನ್ನಯ ಗುರುಪೀಠದ ಶ್ರೀ ಬಸವಮೂರ್ತಿ ಮಾದಾರ ಚನ್ನಯ್ಯ ಮಹಾಸ್ವಾಮೀಜಿ, ಮಧುರೆ ಭಗೀರಥ ಪೀಠದ ಜಗದ್ಗುರು ಶ್ರೀ ಪುರುಷೋತ್ತಮಾನಂದಪುರಿ ಮಹಾಸ್ವಾಮೀಜಿ, ಹೊಸದುರ್ಗ ಕನಕ ಗುರುಪೀಠದ ಶ್ರೀ ಈಶ್ವರಾನಂದಪುರಿ ಮಹಾಸ್ವಾಮೀಜಿ, ಶಿವಮೊಗ್ಗದ ನಾರಾಯಣ ಗುರುಪೀಠದ ಶ್ರೀ ರೇಣುಕಾನಂದ ಸ್ವಾಮೀಜಿ, ಚಿತ್ರದುರ್ಗದ ಮಡಿವಾಳ ಗುರುಪೀಠದ ಶ್ರೀ ಬಸವ ಮಾಚಿದೇವ ಮಹಾಸ್ವಾಮೀಜಿ, ತಂಗಡಗಿಯ ಹಡಪದ ಅಪ್ಪಣ್ಣ ಗುರುಪೀಠದ ಶ್ರೀ ಅನ್ನದಾನಿ ಭಾರತಿ ಅಪ್ಪಣ್ಣ ಸ್ವಾಮೀಜಿ, ವಿಜಯನಗರದ ಸರೂರಿನ ಶ್ರೀ ಶಾಂತಮ್ಮಯ್ಯ ಸ್ವಾಮೀಜಿ ಮತ್ತಿತರರಿದ್ದರು.

## ಎಸ್ಸೆಸ್ ಸಹಿ ದುರ್ಬಳಕೆ ಮಾಡಿ ಆಪ್ತ ಸಹಾಯಕರ ಹುದ್ದೆ !

**ಸಚಿವಾಲಯದ ಅಧೀನ ಕಾರ್ಯದರ್ಶಿಯಿಂದ ಎಫ್.ಐ.ಆರ್.**

ಬೆಂಗಳೂರು, ಆ. 25 - ದಾವಣಗೆರೆ ದಕ್ಷಿಣ ವಿಧಾನಸಭಾ ಕ್ಷೇತ್ರದ ಶಾಸಕ ಶಾಮನೂರು ಶಿವಶಂಕರಪ್ಪ ಅವರ ಸಹಿ ಮತ್ತು ಲೆಟರ್ ಹೆಡ್ ದುರ್ಬಳಕೆ ಮಾಡಿಕೊಂಡು ಆಪ್ತ ಸಹಾಯಕರ ಹುದ್ದೆ ಪಡೆದ ದೂರಿನ ಅನ್ವಯ ಎಫ್.ಐ.ಆರ್. ದಾಖಲಿಸಲಾಗಿದೆ.

ರಾಮನಗರ ಜಿಲ್ಲೆ ಮಾಗಡಿ ತಾಲ್ಲೂಕಿನ ಸೋಲೂರು ಮೂಲದ ಕೆ.ಸಿ. ವಿನುತಾ ಅವರನ್ನು ಆಪ್ತ ಸಹಾಯಕರನ್ನಾಗಿ ನೇಮಿಸುವಂತೆ ಶಾಸಕರು ಮನವಿ ಮಾಡಿದ್ದಾರೆ ಎಂದು ಅವರ ಸಹಿ ಇರುವ ಪತ್ರವನ್ನು ವಿಧಾನಸಭಾ ಸಚಿವಾಲಯಕ್ಕೆ ಸಲ್ಲಿಸಲಾಗಿತ್ತು.

ಶಾಸಕರೇ ನೀಡಿರುವ ಪತ್ರವೆಂದು ಸಚಿವಾಲಯ ಭಾವಿಸಿ, ಅವರನ್ನು ಆಪ್ತ ಸಹಾಯಕರನ್ನಾಗಿ ನೇಮಿಸಲಾಗಿತ್ತು. ನಂತರ ಎರಡು, ಮೂರು ತಿಂಗಳ ವೇತನ ಸಹ ಪಡೆಯಲಾಗಿತ್ತು. ಈ ವಿಷಯ ಶಾಸಕರ ಗಮನಕ್ಕೆ ಬಂದ ನಂತರ ಅವರು ವಿಧಾನಸಭಾ ಸಚಿವಾಲಯದ ಗಮನ ಸೆಳೆದಿದ್ದಾರೆ.

ನಂತರ ವಿಧಾನಸಭಾ ಸಚಿವಾಲಯದ ಅಧೀನ ಕಾರ್ಯದರ್ಶಿ ಲಲಿತಾ ನೀಡಿರುವ ದೂರಿನ ಅನ್ವಯ ವಿಧಾನಸೌಧ ಪೊಲೀಸ್ ಠಾಣೆಯಲ್ಲಿ ಎಫ್.ಐ.ಆರ್. ದಾಖಲಿಸಲಾಗಿದೆ.

## ವೀರಶೈವ ಮಹಾಸಭಾ ರಾಜ್ಯಘಟಕದ ಚುನಾವಣೆ : ಸಂದೀಪ್ ಅಣಬೇರು ಆಯ್ಕೆ



**ಎಸ್ಸೆಸ್ ಗುಂಪಿನ ಎಲ್ಲಾ 27 ಜನರು ಜಯ**

ದಾವಣಗೆರೆ, ಆ. 25 - ಅಖಿಲ ಭಾರತ ವೀರಶೈವ ಮಹಾಸಭಾದ ಕರ್ನಾಟಕ ರಾಜ್ಯ ಘಟಕದ ಕಾರ್ಯನಿರ್ವಾಹಕ ಸಮಿತಿ ಸದಸ್ಯರ ಸ್ಥಾನಕ್ಕೆ ಇಂದು ನಡೆದ ಚನಾವಣೆಯಲ್ಲಿ ಮಹಾಸಭಾದ ರಾಷ್ಟ್ರೀಯ ಅಧ್ಯಕ್ಷ ಶಾಮನೂರು ಶಿವಶಂಕರಪ್ಪ ಅವರ ಗುಂಪಿನ ಎಲ್ಲಾ 27 ಜನರು ಆಯ್ಕೆಯಾಗಿದ್ದಾರೆ.

ದಾವಣಗೆರೆ ಜಿಲ್ಲೆಯಿಂದ ಸ್ಪರ್ಧೆ ಮಾಡಿದ್ದ ಏಕೈಕ ಅಭ್ಯರ್ಥಿ ಸಂದೀಪ್ ಅಣಬೇರು ಸೇರಿದಂತೆ, ಅವರ ಜೊತೆ ಸ್ಪರ್ಧಿಸಿದ್ದ ಎಲ್ಲಾ 27 ಜನರು ಚುನಾಯಿತಗೊಂಡಿದ್ದಾರೆ.

ಈರೇಶ್ ಎಸ್.ವಿ. (1145), ಅಂಗಡಿ ಶಂಕರಪ್ಪ (1100), ಸಂದೀಪ್ ಆಣಬೇರು (1072), ಉಮೇಶ್ ಬಣಕಾರ್ (1008),ಕರೇಗೌಡ (916), ಪ್ರವೀಣ್ ಹನುಮಗೆಟ್ಟಿ (864), ಶಶಿಕಾಂತ್ ಬಿ. ಪಾಟೀಲ್ (850), ಪೂರ್ಣೇಶ್ ಮೂರ್ತಿ ಎಂ.ಆರ್. (849), ಚಂದ್ರಶೇಖರ್ ಎಸ್.ಶೆಟ್ಟರ್ (841), ಶಂಭುಲಿಂಗಪ್ಪ ನಿಜಪ್ಪ ಚಕ್ಕಡಿ (838), ಚನ್ನಪ್ಪ ಹೆಚ್.ಕೆ. (836), ಗುರಪ್ಪ ಚನ್ನಬಸಪ್ಪ ಮೆಟಗುಡ್ಡ (824),ನಟರಾಜ ಸಾಗರನಹಳ್ಳಿ (819), ಶರಣಪ್ಪ ಬಸಪ್ಪ ಹ್ಯಾಟಿ (796), ಬಸವರಾಜಪ್ಪ (785),ಗಿರೀಶ್ ಕುಮಾರ್ ಡಿ.ವಿ. (7858), ಸಂತೋಷಕುಮಾರ್ ಪಾಟೀಲ್ (784), ನಾಗರಾಜ್ ಎಂ ಗೌರಿ (783), ಮೋಹನ್ ವೀರಭದ್ರಪ್ಪ ಅಸುಂಡಿ (763), ಹರೀಶ್ ಆರಾಧ್ಯ ಆರ್. (752), ರಾಜಶೇಖರ ಬಸವಣ್ಣೆಪ್ಪ ಸೀರಿ (4ನೇ ಪುಟಕ್ಕೆ)

## ರಾಜಕೀಯೇತರ ಹಿನ್ನೆಲೆ ಯುವಕರ ನೆರವಿಗೆ ಸಂಘಟಿತ ಪ್ರಯತ್ನ: ಮೋದಿ



ನವದೆಹಲಿ, ಆ. 25 - ರಾಜಕೀಯೇತರ ಹಿನ್ನೆಲೆಯ ಯುವಕರು ರಾಜಕೀಯದಲ್ಲಿ ಬೆಳೆಯಲು ಸಂಘಟಿತ ಪ್ರಯತ್ನಗಳು ನಡೆಯಬೇಕಿದೆ ಎಂದು ಪ್ರಧಾನ ಮಂತ್ರಿ ನರೇಂದ್ರ ಮೋದಿ ಕರೆ ನೀಡಿದ್ದಾರೆ.

ಮಾಸಿಕ ಮನ್ ಕಿ ಬಾತ್ ರೇಡಿಯೋ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ರಾಜಕೀಯೇತರ ಹಿನ್ನೆಲೆಯ ಲಕ್ಷ ಜನರು ರಾಜಕೀಯಕ್ಕೆ ಬರಬೇಕು ಎಂದು ಸ್ವಾತಂತ್ರ್ಯ ದಿನಾಚರಣೆಯ ಸಂದರ್ಭದಲ್ಲಿ ಕರೆ ನೀಡಿದ್ದೆ. ವಂಶಾಡಳಿತದ ರಾಜಕೀಯದ ಕಾರಣದಿಂದಾಗಿ ಹೊಸ ಪ್ರತಿಭೆಗಳು ಮುದುಡುತ್ತಿವೆ ಎಂದು ಹಲವಾರು ಯುವಕರು ಪ್ರತಿಕ್ರಿಯೆ ನೀಡಿದ್ದಾರೆ ಎಂದರು.

ಈ ವರ್ಷ ಕೆಂಪು ಕೋಟೆಯಲ್ಲಿ ಮಾತನಾಡುವಾಗ, ರಾಜಕೀಯೇತರ ಕುಟುಂಬಗಳ ಲಕ್ಷ ಯುವಕರು ರಾಜಕೀಯ ವ್ಯವಸ್ಥೆಗೆ ಬರಬೇಕು ಎಂದು ಕರೆ ನೀಡಿದ್ದೆ. ಇದಕ್ಕೆ ಅಪಾರ ಪ್ರತಿಕ್ರಿಯೆ ದೊರೆತಿದೆ. ಹೀಗಾಗಿ ಅಪಾರ ಸಂಖ್ಯೆಯ ಯುವಕರು ರಾಜಕೀಯ ಪ್ರವೇಶಿಸಲು ಕಾತುರರಾಗಿದ್ದಾರೆ ಎಂಬುದು ತಿಳಿದು ಬರುತ್ತದೆ ಎಂದು ಮೋದಿ ಹೇಳಿದರು.

ಯುವಕರು ಸರಿಯಾದ ಅವಕಾಶ ಹಾಗೂ ಮಾರ್ಗದರ್ಶನಕ್ಕಾಗಿ ಕಾಯುತ್ತಿದ್ದಾರೆ. ದೇಶಾದ್ಯಂತದ ಯುವಕರಿಂದ ಈ ಬಗ್ಗೆ ನನಗೆ ಪತ್ರಗಳು ಬಂದಿವೆ. ಜನರು ಹಲವಾರು ಸಲಹೆಗಳನ್ನೂ ನೀಡಿದ್ದಾರೆ ಎಂದು ಹೇಳಿದರು. ರಾಜಕೀಯ ಹಿನ್ನೆಲೆ ಇಲ್ಲದಿದ್ದರೆ ರಾಜಕೀಯಕ್ಕೆ ಬರುವುದು ಕಷ್ಟ ಎಂದು ಯುವ ಪೀಳಿಗೆಯವರು ಹೇಳಿದ್ದಾರೆ ಎಂದು ಮೋದಿ ತಿಳಿಸಿದರು.

ಬೇರು ಮಟ್ಟದಲ್ಲಿ ಉತ್ತಮ ಅನುಭವ ಇದೆ. ನಾವು ಜನರ ಸಮಸ್ಯೆಗಳನ್ನು ಬಗೆಹರಿಸಲು (5ನೇ ಪುಟಕ್ಕೆ)

## ಸೆ.2ಕ್ಕೆ ಪುರಸಭೆ ಅಧ್ಯಕ್ಷರ ಚುನಾವಣೆ

**ಹರಪನಹಳ್ಳಿ**

ಹರಪನಹಳ್ಳಿ, ಆ.25- ಇಲ್ಲಿನ ಪುರಸಭೆಯ ಅಧ್ಯಕ್ಷ, ಉಪಾಧ್ಯಕ್ಷರ ಆಯ್ಕೆಗೆ ಮೀಸಲಾತಿ ವಿಚಾರವಾಗಿ ಧಾರವಾಡ ಉಚ್ಚ ನ್ಯಾಯಾಲಯದ ಪೀಠ ಹೊರಡಿಸಿದ್ದ ತಡೆಯಾಜ್ಞೆ ಪ್ರಕರಣ ಇತ್ಯರ್ಥಗೊಂಡ ಹಿನ್ನೆಲೆಯಲ್ಲಿ ತಹಶೀಲ್ದಾರ್ ಬಿ.ವಿ. ಗಿರೀಶ್ ಬಾಬು ಪುರಸಭೆಯ ಚುನಾವಣೆಯನ್ನು ಸೆ.2ಕ್ಕೆ ನಿಗದಿ ಪಡಿಸಿದ್ದಾರೆ.

ಕಳೆದ ಆ.21ರಂದು ಈ ಚುನಾವಣೆ ನಿಗದಿಯಾಗಿತ್ತು, ಅಂದು ಶಾಸಕರು, ಸಂಸದರು ಸೇರಿದಂತೆ ಎಲ್ಲಾ ಪುರಸಭಾ ಸದಸ್ಯರು ಚುನಾವಣೆ ಜರುಗುವ ಸಭಾಂಗಣಕ್ಕೆ ಹಾಜರಾಗಿದ್ದಾಗ, ನ್ಯಾಯಾಲಯದ ತಡೆಯಾಜ್ಞೆ ಮೇರೆಗೆ ಚುನಾವಣೆಯನ್ನು ರದ್ದುಗೊಳಿಸಿತ್ತು.

ಸಾಮಾನ್ಯ ಮಹಿಳೆ ಇರುವ ಅಧ್ಯಕ್ಷ ಸ್ಥಾನಕ್ಕೆ ಕಾಂಗ್ರೆಸ್ ಪಕ್ಷದಿಂದ 20ನೇ ವಾರ್ಡಿನ ಎಂ. ಪಾತೀಮಾಬಿ ಹಾಗೂ ಬಿಜೆಪಿಯಿಂದ 19ನೇ ವಾರ್ಡಿನ ಕೌಟಿ ಸುಮಾ ನಾಮಪತ್ರ ಸಲ್ಲಿಸಿದ್ದರು. ಪರಿಶಿಷ್ಟ ಜಾತಿಗೆ ಮೀಸಲಾತಿ ಇರುವ ಉಪಾಧ್ಯಕ್ಷ ಸ್ಥಾನಕ್ಕೆ 21ನೇ ವಾರ್ಡಿನ ಕಾಂಗ್ರೆಸ್ ಪಕ್ಷದ ಎಚ್. ಕೊಟ್ರೇಶ್ ಮಾತ್ರ ನಾಮಪತ್ರ ಸಲ್ಲಿಸಿದ್ದರು.

ಪುರಸಭಾ ಸದಸ್ಯ ಟಿ. ವೆಂಕಟೇಶ್ ಮೀಸಲಾತಿ ವಿಚಾರವಾಗಿ ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಿದ್ದಾಗ ನ್ಯಾಯಾಲಯ ತಡೆಯಾಜ್ಞೆ ನೀಡಿತ್ತು.

ಇದೀಗ ಟಿ. ವೆಂಕಟೇಶ್ ಪ್ರಕರಣವನ್ನು ಹಿಂಪಡೆದ ಹಿನ್ನೆಲೆಯಲ್ಲಿ ನ್ಯಾಯಲಯವು ತಡೆಯಾಜ್ಞೆ ಮುಕ್ತಾಯಗೊಳಿಸಿದೆ. ಆದ್ದರಿಂದ ಮುಂದೂಡಿಕೆ ಆಗಿದ್ದ ಚುನಾವಣೆಯ ದಿನಾಂಕವನ್ನು ತಹಶೀಲ್ದಾರ್ ಮರು ನಿಗದಿ ಪಡಿಸಿದ್ದಾರೆ.

## ಹೆಚ್. ಆಂಜನೇಯ, ಡಿ. ಬಸವರಾಜ್ ಹಾವೇರಿ ಜಿಲ್ಲಾ ಕಾಂಗ್ರೆಸ್ ಉಸ್ತುವಾರಿ





ದಾವಣಗೆರೆ, ಆ. 25 -000 ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿಯ ಅಧ್ಯಕ್ಷ ಡಿ. ಕೆ. ಶಿವಕುಮಾರ್ ಅವರು ಕೆಪಿಸಿಸಿ ಪದಾಧಿಕಾರಿಗಳಿಗೆ ಜಿಲ್ಲೆ ಹಾಗೂ ವಿಧಾನಸಭೆ ಕ್ಷೇತ್ರಗಳ ಉಸ್ತುವಾರಿ ಜವಾಬ್ದಾರಿಯನ್ನು ನೀಡಿದ್ದು, ಹಾವೇರಿ ಜಿಲ್ಲೆಯ ಉಸ್ತುವಾರಿ ಜವಾಬ್ದಾರಿಯನ್ನು ಕೆಪಿಸಿಸಿ ಉಪಾಧ್ಯಕ್ಷರೂ ಆಗಿರುವ ಮಾಜಿ ಸಚಿವ ಹೆಚ್. ಆಂಜನೇಯ ಹಾಗೂ ಕೆಪಿಸಿಸಿ ಪ್ರಧಾನ ಕಾರ್ಯದರ್ಶಿ ಡಿ. ಬಸವರಾಜ್ ಅವರಿಗೆ ವಹಿಸಿದ್ದಾರೆ.

ಹೆಚ್. ಆಂಜನೇಯ ಅವರಿಗೆ ಹಾವೇರಿ ಜಿಲ್ಲಾ ಉಸ್ತುವಾರಿ, ಡಿ. ಬಸವರಾಜ್ ಅವರಿಗೆ ಹಾವೇರಿ ಜಿಲ್ಲೆಯ ಶಿಗ್ಗಾಂವ್, ಹಾವೇರಿ ಮತ್ತು ಬ್ಯಾಡಗಿ ಕ್ಷೇತ್ರದ ಜವಾಬ್ದಾರಿಯನ್ನು ವಹಿಸಲಾಗಿದೆ.

## ಕರ್ತವ್ಯನಿರತ ವೈದ್ಯರ ಮೇಲೆ ಹಲ್ಲೆ: ಓರ್ವ ವಶಕ್ಕೆ

ದಾವಣಗೆರೆ, ಆ.25- ಕರ್ತವ್ಯನಿರತ ವೈದ್ಯರ ಮೇಲೆ ಹಲ್ಲೆ ನಡೆಸಿದ ಆರೋಪದ ಮೇರೆಗೆ ಬಡಾವಣೆ ಠಾಣೆ ಪೊಲೀಸರು ಶನಿವಾರ ಓರ್ವನನ್ನು ಬಂಧಿಸಿದ್ದಾರೆ.

ದಾವಣಗೆರೆಯ ರವಿಕುಮಾರ್ ಬಂಧಿತ ಆರೋಪಿಯಾಗಿದ್ದು, ಈತನನ್ನು ನ್ಯಾಯಾಧೀಶರ ಎದುರು ಹಾಜರುಪಡಿಸಿ, ಕಾರಾಗೃಹಕ್ಕೆ ಕಳುಹಿಸಲಾಗಿದೆ.

ಡಾ. ಸನ್ನಿಧಿ ನಾಯ್ಕ, ಡಾ. ಡಿ.ಎಸ್.ನಿಶಾಂತ್ ಹಾಗೂ ಡಾ.ಅಂಕುಶ್ ಅವರು ಜೆಜೆಎಂ ವೈದ್ಯಕೀಯ ಕಾಲೇಜಿನಲ್ಲಿ ವೈದ್ಯಕೀಯ ಸ್ನಾತಕೋತ್ತರ ಪದವಿ ವ್ಯಾಸಂಗ ಮಾಡುತ್ತಿದ್ದಾರೆ. ಶುಕ್ರವಾರ ರಾತ್ರಿ ಪಾಳಿಯಲ್ಲಿ ಬಾಪೂಜಿ ಮಕ್ಕಳ ಆಸ್ಪತ್ರೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದಾಗ ಹಲ್ಲೆ ನಡೆದಿದೆ.

ಆರೋಪಿ ರವಿಕುಮಾರ್ ಅನಾರೋಗ್ಯದಿಂದ ಬಳಲುತ್ತಿದ್ದ ಪುತ್ರಿ ತಾನ್ವಿ (4) ಹಾಗೂ ಪತ್ನಿ ಉಷಾ ಅವರೊಂದಿಗೆ ಶುಕ್ರವಾರ ಮಧ್ಯರಾತ್ರಿ ಆಸ್ಪತ್ರೆಗೆ ಬಂದಿದ್ದರು. ಬಾಲಕಿಯ ಆರೋಗ್ಯ ಪರೀಕ್ಷಿಸಿ ತೀವ್ರ ನಿಗಾ ಘಟಕಕ್ಕೆ (ಐಸಿಯು) ದಾಖಲಿಸಲಾಗಿತ್ತು. ಕೆಲ ಸಮಯದ (5ನೇ ಪುಟಕ್ಕೆ)

## ದುಶ್ಚಟ, ವ್ಯಸನ ಮುಕ್ತವಾಗಲು ಕಂಕಣ ತೊಡುವುದೇ ರಕ್ಷಾಬಂಧನ

### ರಕ್ಷಾಬಂಧನ, ಶ್ರೀಕೃಷ್ಣ ಜನ್ಮಾಷ್ಟಮಿ ಹಾಗೂ ಅಭಿನಂದನಾ ಕಾರ್ಯಕ್ರಮದಲ್ಲಿ ರಾಜಯೋಗಿನಿ ಬ್ರಹ್ಮಾಕುಮಾರಿ ಲೀಲಾಜಿ



ದಾವಣಗೆರೆ, ಆ. 25 - ದುಶ್ಚಟಗಳು ಹಾಗೂ ವ್ಯಸನಗಳಿಂದ ಮುಕ್ತವಾಗಲು ಕಂಕಣ ತೊಡುವುದೇ ರಕ್ಷಾಬಂಧನ ಎಂದು ಈಶ್ವರೀಯ ವಿಶ್ವವಿದ್ಯಾಲಯದ ಸಂಚಾಲಕರಾದ ರಾಜಯೋಗಿನಿ ಬ್ರಹ್ಮಾಕುಮಾರಿ ಲೀಲಾಜಿ ಪ್ರತಿಪಾದಿಸಿದರು.

ಪ್ರಜಾಪಿತ ಬ್ರಹ್ಮಾಕುಮಾರಿ ಈಶ್ವರೀಯ ವಿಶ್ವವಿದ್ಯಾಲಯದ ವತಿಯಿಂದ ನಗರದ ಶಿವಧ್ಯಾನ ಮಂದಿರದಲ್ಲಿ ಇಂದು ಆಯೋಜಿಸಲಾಗಿದ್ದ ರಕ್ಷಾಬಂಧನ, ಶ್ರೀಕೃಷ್ಣ ಜನ್ಮಾಷ್ಟಮಿ ಹಾಗೂ ಅಭಿನಂದನಾ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ರಕ್ಷಾ ಬಂಧನವು ಸಹೋದರ ಹಾಗೂ ಸಹೋದರಿಯರ ನಡುವಿನ ನಿರ್ಮಲ ಪ್ರೀತಿಯ ಹಬ್ಬವಾಗಿದೆ. ಅಲ್ಲದೇ, ಪರಮಾತ್ಮನ ರಕ್ಷಣೆ, ಆಶೀರ್ವಾದ ಹಾಗೂ ವರದಾನ ಎಲ್ಲರಿಗೂ ಸಿಗಲಿ ಎಂದು ರಕ್ಷಾಬಂಧನ ಆಚರಿಸಲಾಗುತ್ತದೆ. ರಕ್ಷಾಬಂಧನದ ಕಂಕಣ ಕಟ್ಟಿಸಿಕೊಳ್ಳುವವರು ವಚನ ಬದ್ಧರಾಗುತ್ತಾರೆ ಎಂದರು.

ಅಂತರಂಗದ ಚೈತನ್ಯ ಹಾಗೂ ಆತ್ಮಜ್ಯೋತಿಯನ್ನು ನೆನಪು ಮಾಡಿಕೊಳ್ಳುವ, ಯಾರಿಗೂ ನೋವು ನೀಡದೆ ಹೂವಿನ ಪರಿಮಳದಂತಿರುವ ಹಾಗೂ ದೈವೀ ಗುಣ ಹೊಂದುವುದರ ಸಂಕೇತ ರಕ್ಷಾಬಂಧನದಲ್ಲಿದೆ ಎಂದೂ ಅವರು ತಿಳಿಸಿದರು.

ಸಹೋದರ ಭಾವ ಕೇವಲ ಒಡಹುಟ್ಟಿದವರಿಗೆ ಸೀಮಿತವಲ್ಲ. ಮಹಾಭಾರತದಲ್ಲಿ ಕಂಸ ತನ್ನ ಸಹೋದರಿ ದೇವಕಿಯನ್ನೇ ಹಿಂಸಿಸಿದ್ದ. ಶ್ರೀಕೃಷ್ಣ ತನ್ನ ಸ್ವಂತ ತಂಗಿಯಲ್ಲದ ದ್ರೌಪದಿಗೆ ಅಕ್ಷಯ ವಸ್ತ್ರ ನೀಡಿ ನೆರವಾಗಿದ್ದ ಎಂದು ಲೀಲಾಜಿ ಹೇಳಿದರು.

ಬಂಧನ ಯಾರಿಗೂ ಇಷ್ಟವಾಗುವುದಿಲ್ಲ. ಪ್ರಾಪಂಚಿಕ ಬಂಧನದಿಂದ ಮುಕ್ತವಾಗಲು ಎಲ್ಲರೂ ಬಯಸುತ್ತಾರೆ. ಆದರೂ, ಸಂಯಮ ಹಾಗೂ ನಿಯಮಗಳ ಬಂಧನ ಅತ್ಯಗತ್ಯ. ಇಂತಹ ಬಂಧನಕ್ಕೆ ಧರ್ಮ ಎಂದು ಕರೆಯಲಾಗುತ್ತದೆ ಎಂದವರು ತಿಳಿಸಿದರು.

ಕೇವಲ ಕುರುಕ್ಷೇತ್ರದಲ್ಲಿ ಮಾತ್ರ ಮಹಾಭಾರತದ ಯುದ್ಧ ಸಂಭವಿಸಿತ್ತು ಎಂದು ಭಾವಿಸಬಾರದು. ಪ್ರತಿಯೊಬ್ಬರ ಮನಸ್ಸಿನಲ್ಲಿ ಪ್ರತಿದಿನ ಸದ್ಗುಣ ಹಾಗೂ ದುರ್ಗುಣಗಳ ನಡುವೆ ಯುದ್ಧ ನಡೆಯುತ್ತದೆ. ಪಾಂಡವರಂತೆ ಸದ್ಗುಣಗಳನ್ನು ಬೆಳೆಸಿಕೊಂಡಾಗ, ನಮ್ಮ ಮನಸ್ಸಿನಲ್ಲಿ ನಡೆಯುವ ಯುದ್ಧದಲ್ಲಿ ಒಳ್ಳೆಯ ವಿಚಾರಗಳೇ ಸದಾ ಗೆಲ್ಲುತ್ತವೆ ಎಂದರು.

ಹಿರಿಯ ಪತ್ರಕರ್ತ ಬಿ.ಎನ್. ಮಲ್ಲೇಶ್ ಮಾತನಾಡಿ, ಕಣ್ಣುಗಳಿಗೆ ನೈತಿಕತೆಯ ಪರದೆ ಹಾಕಿಕೊಂಡಾಗ ಸಮಾಜದಲ್ಲಿ ಒಳ್ಳೆಯವರಾಗಿ ನಡೆದುಕೊಳ್ಳಲು ಸಾಧ್ಯ ಎಂದರು.

ಸಂಸಾರದ ಬಂಧನದಲ್ಲಿ ನಾವೆಲ್ಲ ಇದ್ದೇವೆ. ಆದರೂ, ಸಹೋದರತ್ವ, ಸ್ನೇಹ ಹಾಗೂ ಅಧ್ಯಾತ್ಮಗಳಂತಹ ಗುಣಗಳು ನಮ್ಮನ್ನು ಬಂಧಮುಕ್ತಗೊಳಿಸುತ್ತವೆ ಎಂದರು.

ಪ್ರಾಸ್ತಾವಿಕವಾಗಿ ಮಾತನಾಡಿದ ಸಂಸ್ಥೆಯ ನಿಟ್ಟುವಳ್ಳಿ ಶಾಖೆ ಸಂಚಾಲಕರಾದ ಬ್ರಹ್ಮಾಕುಮಾರಿ ರಾಜೇಶ್ವರಿ, ಬ್ರಹ್ಮಾಕುಮಾರಿ ಸಂಸ್ಥೆಯು ಅಧ್ಯಾತ್ಮಿಕ ಜ್ಞಾನವನ್ನು ಶಿಕ್ಷಣ ರೂಪದಲ್ಲಿ ನೀಡುತ್ತಿದೆ. ಜ್ಞಾನ, ಯೋಗ, ಧಾರಣೆ ಹಾಗೂ ಸೇವೆಗಳನ್ನು ಕಲಿಸುತ್ತಿದೆ ಎಂದು ತಿಳಿಸಿದರು.

ಸಂಸ್ಥೆಯ ಕಡೂರಿನ ಸಂಚಾಲಕರಾದ ರಾಜಯೋಗಿನಿ ಬ್ರಹ್ಮಾಕುಮಾರಿ ಜ್ಞಾನೇಶ್ವರಿ, ಅವರು ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು.

ಬಾಪೂಜಿ ವಿದ್ಯಾಸಂಸ್ಥೆ ನಿರ್ದೇಶಕ ಡಾ. ಸಂಪನ್ನ ಮುತಾಲಿಕ್, ದೂಡಾ ಅಧ್ಯಕ್ಷ ದಿನೇಶ್ ಕೆ. ಶೆಟ್ಟಿ, ದಂತ ವೈದ್ಯ ಡಾ. ಎಂ.ಸಿ. ಶಶಿಕಾಂತ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ರವಿಚಂದ್ರ ಅವರುಗಳು ಮುಖ್ಯ (5ನೇ ಪುಟಕ್ಕೆ)

## ಗುಜರಾತ್‌ನಲ್ಲಿ ಧಾರಾಕಾರ ಮಳೆ, ನೂರಾರು ಜನರು ಸ್ಥಳಾಂತರ

ಅಹಮದಾಬಾದ್, ಆ. 25 - ದಕ್ಷಿಣ ಗುಜರಾತ್‌ನಲ್ಲಿ ಶನಿವಾರ ಹಾಗೂ ಭಾನುವಾರ ಧಾರಾಕಾರ ಮಳೆಯಾಗಿದ್ದು, ವಲ್ಸದ್ ಹಾಗೂ ನವ್ಸಾರಿ ಜಿಲ್ಲೆಗಳ ನೂರಾರು ಜನರನ್ನು ಸ್ಥಳಾಂತರಗೊಳಿಸಲಾಗಿದೆ ಎಂದು ಅಧಿಕಾರಿಗಳು ಹೇಳಿದ್ದರು. ಕಳೆದ 48 ಗಂಟೆಗಳಲ್ಲಿ ಸುರಿದ ಧಾರಾಕಾರ ಮಳೆಯಿಂದಾಗಿ ತಗ್ಗು ಪ್ರದೇಶಗಳಲ್ಲಿ ನೀರು ನುಗ್ಗಿತ್ತು. ಇದರಿಂದಾಗಿ ಸಾಮಾನ್ಯ (5ನೇ ಪುಟಕ್ಕೆ)


TVS Training & Services

Job Details

- Post: RELATIONSHIP MANAGER (Grade: Senior Officer)
- Age Criteria: Below 25years 6 months (Male & Female)
- Qualification: Any Graduates (BE/B.Tech & MBA are not eligible)

DATE: 29.08.2024 | TIME: 10.00 A.M.

Interview Venue:

GM Institute of Technology

4th Main Rd, PB Rd, Davanagere

ICICI Bank

Build your Banking career through PGPRM

Complete 21 days training and join ICICI Bank (on-roll)

Register: https://tinyurl.com/ICICIBANKRM

WhatsApp / Contact: 7338877806

# ಅ.5ರಿಂದ ಮುರುಘಾ ಮಠದಲ್ಲಿ 'ಶರಣ ಸಂಸ್ಕೃತಿ ಉತ್ಸವ'



ಚಿತ್ರದುರ್ಗ, ಆ.25- ಶ್ರೀ ಮುರುಘರಾಜೇಂದ್ರ ಬೃಹನ್ಮಠದಿಂದ 'ಶರಣ ಸಂಸ್ಕೃತಿ ಉತ್ಸವ' ಬರುವ ಅಕ್ಟೋಬರ್ 5ರಿಂದ 13ರ ವರೆಗೆ 9 ದಿನಗಳ ಕಾಲ ನಡೆಯಲಿದೆ ಎಂದು ಶ್ರೀಮಠದ ಆಡಳಿತ ಮಂಡಳಿ ಅಧ್ಯಕ್ಷ ಶಿವಯೋಗಿ ಸಿ. ಕಳಸದ ತಿಳಿಸಿದರು.

ಇಲ್ಲಿನ ಶ್ರೀಮಠದಲ್ಲಿ ನಿನ್ನೆ ನಡೆದ 'ಶರಣ ಸಂಸ್ಕೃತಿ ಉತ್ಸವ'ದ ಪೂರ್ವ ಸಿದ್ಧತಾ ಸಭೆಯಲ್ಲಿ ಕಾರ್ಯಕ್ರಮದ ರೂಪುರೇಷೆಗಳನ್ನು ಚರ್ಚಿಸಿದರು.

ಉತ್ಸವ ಸಮಿತಿಯ ಗೌರವಾಧ್ಯಕ್ಷರಾಗಿ ಶ್ರೀ ರುದ್ರೇಶ್ವರ ವಿರಕ್ತಮಠದ ಮಹಾಂತ ರುದ್ರೇಶ್ವರ ಶ್ರೀಗಳು, ಗೌರವ ಉಪಾಧ್ಯಕ್ಷರಾಗಿ ರಾವಂದೂರು ಮುರುಘಾಮಠದ ಮೋಕ್ಷಪತಿ ಶ್ರೀಗಳು ಹಾಗೂ ಗೌರವ ಕಾರ್ಯಾಧ್ಯಕ್ಷರಾಗಿ ಜಿಲ್ಲಾ ಉಸ್ತುವಾರಿ ಸಚಿವ ಡಿ.ಸುಧಾಕರ್, ಸಂಸದ ಗೋವಿಂದ ಕಾರಜೋಳ ಆಯ್ಕೆ ಆಗಿದ್ದಾರೆ.

ಉತ್ಸವ ಸಮಿತಿಯ ಅಧ್ಯಕ್ಷರಾಗಿ ಶಾಸಕ ಕೆ.ಸಿ. ವೀರೇಂದ್ರ ಪಪ್ಪಿ ಆಯ್ಕೆ ಮಾಡಿದ್ದು, ಉತ್ಸವವನ್ನು ಅರ್ಥಪೂರ್ಣ ಹಾಗೂ ಸರಳವಾಗಿ ಆಯೋಜಿಸಲಾಗುವುದು. ಮತ್ತು ಶ್ರೀಮಠದ ಪರಂಪರೆಯಂತೆ ಎಲ್ಲಾ ಗೋಷ್ಠಿಗಳನ್ನು ಏರ್ಪಡಿಸಲಾಗುವುದು ಎಂದು ತಿಳಿಸಿದರು.

ಡಾ. ಬಸವಕುಮಾರ ಸ್ವಾಮಿಗಳು ಮಾತನಾಡಿ, ಈ ವರ್ಷಕ್ಕೆ ಪೀಠದ ಲಿಂಗೈಕ್ಯ ಶ್ರೀ ಜಯದೇವ ಜಗದ್ಗುರುಗಳ ಜಯಂತಿ 150 ವರ್ಷಗಳಾಗಲಿದೆ. 52 ವರ್ಷಗಳ ಕಾಲ ಶ್ರೀಮಠದ ಪೀಠ ಅಲಂಕರಿಸಿದ ಶ್ರೀಗಳ 100ನೇ ಜಯಂತಿ ದಾವಣಗೆರೆಯಲ್ಲಿ ಮಲ್ಲಿಕಾರ್ಜುನ ಶ್ರೀಗಳು ಆಚರಿಸುತ್ತಾರೆ. ಜಯದೇವ ಶ್ರೀಗಳನ್ನು ಕುರಿತು ಅರ್ಥಪೂರ್ಣವಾಗಿ 150 ಸ್ಥಳಗಳಲ್ಲಿ ಕಾರ್ಯಕ್ರಮಗಳನ್ನು ಆಯೋಜಿಸಲಾಗುವುದು ಎಂದರು.

ಬಸವಮೂರ್ತಿ ಮಾದಾರ ಚೆನ್ನಯ್ಯ ಶ್ರೀಗಳು ಮಾತನಾಡಿ, ಮಧ್ಯ ಕರ್ನಾಟಕದ ನಾಡ ಹಬ್ಬವನ್ನು ಅರ್ಥಪೂರ್ಣವಾಗಿ ಆಚರಿಸಬೇಕು. ಈ ಬಾರಿ ಪುರುಷ ಮತ್ತು ಮಹಿಳಾ ಕ್ರೀಡಾ ಕೂಟವನ್ನು ಶ್ರೀಗಳ 150ನೇ ವರ್ಷದ ಜಯಂತಿ ಅಂಗವಾಗಿ ಜಯದೇವ ಶ್ರೀಗಳ ಹೆಸರಿನಲ್ಲಿ ಆಯೋಜಿಸಲಾಗುವುದು ಎಂದರು.

ಸಂಸದ ಗೋವಿಂದ ಎಂ. ಕಾರಜೋಳ ಮಾತನಾಡಿ, ಶ್ರೀಮಠವು ಜಾತಿ, ಮತ ಮತ್ತು ಲಿಂಗ ಭೇದವಿಲ್ಲದೆ ಬಸವಾದಿ ಶರಣರ ಆಶಯಗಳನ್ನು ಅನುಷ್ಠಾನಕ್ಕೆ ತರುತ್ತಿದೆ. ಶೂದ್ರರಿಗೆ ಶಿಕ್ಷಣ ಕೊಡಲು ಸಾಧ್ಯವಾಗದ ಸಂದರ್ಭದಲ್ಲಿ ಬೃಹನ್ಮಠವು ಅಂತಹ ಅವಕಾಶವನ್ನು ಮಾಡಿಕೊಟ್ಟಿದೆ ಎಂದು ಶ್ಲಾಘಿಸಿದರು.

ಶರಣ ಸಂಸ್ಕೃತಿ ಉತ್ಸವದಲ್ಲಿ ಗತವೈಭವದ ಚಿಂತನೆಗಳು ನಡೆಯಲಿ. ಪ್ರತಿ ದಿನವೂ ಕಾರ್ಯಕ್ರಮದಲ್ಲಿ ನಾನು ಪಾಲ್ಗೊಳ್ಳುತ್ತೇನೆ ಎಂದು ತಿಳಿಸಿದರು.

ವಚನಾನಂದ ಶ್ರೀಗಳು ಮಾತನಾಡಿ, ಶ್ರೀಮಠಕ್ಕೆ ನಾಡಿನಾದ್ಯಂತ ಶಾಖಾಮಠಗಳು ಮತ್ತು ಹಾಸ್ಟೆಲ್‌ಗಳಿವೆ. ಇದು ವರ್ಷದ ಕಾರ್ಯಕ್ರಮದ ಪಟ್ಟಿಗೆ ಸೇರಬೇಕು. ಜಯದೇವ ಶ್ರೀಗಳ ಹೆಸರಿನ ಅಂಚೆ ಚೀಟಿ, ನಾಣ್ಯ ಬಿಡುಗಡೆಯಾಗಲು ಕ್ರಮ ವಹಿಸಬೇಕು ಎಂದು ಹೇಳಿದರು.

ಮೋಕ್ಷರುದ್ರಸ್ವಾಮಿ, ರುದ್ರಾಣಿ ಗಂಗಾಧರ್, ಕೆಇಬಿ ಷಣ್ಮುಖಪ್ಪ, ಅನೀಸ್, ಮಂಜುನಾಥ ದಾಳಿಂಬೆ, ಪಿ. ವೀರೇಂದ್ರ ಕುಮಾರ್, ವೀರಶೈವ ಸಮಾಜ, ಅಖಿಲ ಭಾರತ ವೀರಶೈವ ಮಹಾಸಭೆ ಹಾಗೂ ಇತರೆ ಸಮಾಜಗಳ ಮುಖಂಡರು, ಶಾಲಾ-ಕಾಲೇಜುಗಳ ಮುಖ್ಯಸ್ಥರು ಇದ್ದರು.



## ಉಕ್ಕಡಗಾತ್ರಿ : 20 ಜೋಡಿ ಸಾಮೂಹಿಕ ವಿವಾಹ

ಮಲೇಬೆನ್ನೂರು, ಆ.25- ಸುಕ್ಷೇತ್ರ ಉಕ್ಕಡಗಾತ್ರಿಯಲ್ಲಿ ಪವಾಡ ಪುರುಷ ಶ್ರೀ ಗುರು ಕರಿಬಸವೇಶ್ವರ ಅಜ್ಜಯ್ಯನ ಗದ್ದಿಗೆಯ ನೂತನ ಕಟ್ಟಡಗಳ ಲೋಕಾರ್ಪಣೆ ಅಂಗವಾಗಿ ಶುಕ್ರವಾರ ಹಮ್ಮಿಕೊಂಡಿದ್ದ ಸರ್ವ ಧರ್ಮ ಸಾಮೂಹಿಕ ವಿವಾಹ ಮಹೋತ್ಸವದಲ್ಲಿ 20 ಜೋಡಿ ವಧು-ವರರು ದಾಂಪತ್ಯ ಜೀವನಕ್ಕೆ ಕಾಲಿಟ್ಟರು. ನಂತರ ನವ ವಧು-ವರರಿಗೆ ಗದ್ದಿಗೆ ಟ್ರಸ್ಟ್ ಕಮಿಟಿ ವತಿಯಿಂದ ಹೊಲಿಗೆ ಯಂತ್ರಗಳನ್ನು ಉಡುಗೊರೆಯಾಗಿ ವಿತರಿಸಲಾಯಿತು.

## ಲೈಂಗಿಕ ಪೀಡನೆ, ಸಿದ್ದಿಕಿ ರಾಜೀನಾಮೆ

ತಿರುವನಂತಪುರಂ, ಆ. 25 - ಲೈಂಗಿಕ ಪೀಡನೆ ಆರೋಪದ ಹಿನ್ನೆಲೆಯಲ್ಲಿ ಮಲಯಾಳಂ ಚಲನಚಿತ್ರ ಕಲಾವಿದರ ಒಕ್ಕೂಟದ ಪ್ರಧಾನ ಕಾರ್ಯದರ್ಶಿ ಸ್ಥಾನಕ್ಕೆ ನಟ ಸಿದ್ದಿಕಿ ರಾಜೀನಾಮೆ ನೀಡಿದ್ದಾರೆ.

ಮಲಯಾಳಂ ಚಿತ್ರರಂಗದಲ್ಲಿ ಮಹಿಳೆಯರ ವ್ಯಾಪಕ ಮೇಲೆ ದೌರ್ಜನ್ಯ ನಡೆಯುತ್ತಿರುವ ಬಗ್ಗೆ ನ್ಯಾಯಮೂರ್ತಿ ಹೇಮಾ ಸಮಿತಿ ನೀಡಿದ್ದ ವರದಿ ಇತ್ತೀಚೆಗೆ ಬಹಿರಂಗವಾಗಿತ್ತು. ನಂತರದಲ್ಲಿ ನಟಿಯರು ಎದುರಿಸಿದ ಶೋಷಣೆ ಕುರಿತು ವ್ಯಾಪಕ ಚರ್ಚೆಗಳು ನಡೆಯುತ್ತಿವೆ.

ಹಲವು ನಟಿಯರು ತಾವು ಎದುರಿಸಿದ ಸಮಸ್ಯೆಗಳ ಕುರಿತು ಬಹಿರಂಗವಾಗಿ ಮಾತನಾಡುತ್ತಿದ್ದಾರೆ.

## ಹೈನುಗಾರಿಕೆ ಪ್ರೋತ್ಸಾಹಕ್ಕೆ ಬಡ್ಡಿ ಸಹಾಯ ಧನ ಯೋಜನೆ

ದಾವಣಗೆರೆ, ಜು. 25 - ರೈತ ಮಹಿಳೆಯರಿಗೆ ಹೈನುಗಾರಿಕೆಯಲ್ಲಿ ಪ್ರೋತ್ಸಾಹಿಸಲು ಹಸು, ಎಮ್ಮೆ ಖರೀದಿಗೆ ಪಡೆಯುವ ಸಾಲದ ಮೇಲಿನ ಬಡ್ಡಿಯನ್ನು ಸಕಾಲದಲ್ಲಿ ಮರುಪಾವತಿಸುವ ಮಹಿಳಾ ಫಲಾನುಭವಿಗಳಿಗೆ (ಪ್ರತಿ ಜೂನ್-30, ಸೆಪ್ಟೆಂಬರ್-30, ಡಿಸೆಂಬರ್-30, ಮಾರ್ಚ್ 31) ಸರ್ಕಾರದಿಂದ ಶೇ.9ರ ಪ್ರತಿ ತ್ರೈಮಾಸಿಕಕ್ಕೆ ಬಡ್ಡಿ ಸಹಾಯ ಧನ ನೀಡುವ ಯೋಜನೆ ಜಾರಿಯಲ್ಲಿದೆ.

ದಾವಣಗೆರೆ ಜಿಲ್ಲೆಯ ತಾಲ್ಲೂಕುಗಳಿಗೆ ಮರು ಹಂಚಿಕೆ ಮಾಡಲಾದ ಗುರಿಗಳಂತೆ ಅರ್ಹ ಫಲಾನುಭವಿಗಳು ಹೆಚ್ಚಿನ ಮಾಹಿತಿಗೆ ಆಯಾ ತಾಲ್ಲೂಕು ಮುಖ್ಯ ಪಶು ವೈದ್ಯಾಧಿಕಾರಿಗಳು ಹಾಗೂ ಸ್ಥಳೀಯ ಪಶು ವೈದ್ಯಾಧಿಕಾರಿಗಳನ್ನು ಸಂಪರ್ಕಿಸಬಹುದು.

ಚನ್ನಗಿರಿ ತಾಲ್ಲೂಕು ಪಶು ಆಸ್ಪತ್ರೆಯ ಮುಖ್ಯ ಪಶು ವೈದ್ಯಾಧಿಕಾರಿ ಮೊ.ಸಂ 9880961745, ದಾವಣಗೆರೆ ತಾಲ್ಲೂಕು ಮೊ.ಸಂಖ್ಯೆ 93535 67572, ಹರಿಹರ ತಾಲ್ಲೂಕು ಮೊ.ಸಂ 9900369113, ಹೊನ್ನಾಳಿ ತಾಲ್ಲೂಕು ಮೊ.ಸಂ 9480506320, ಜಗಳೂರು ತಾಲ್ಲೂಕು ಮೊ.ಸಂ 9901641942, ನ್ಯಾಮತಿ ತಾಲ್ಲೂಕು ಮೊ.ಸಂ 9632916405.

## ಜಿಲ್ಲೆಗೆ ಇಂದು ಉಸ್ತುವಾರಿ ಕಾರ್ಯದರ್ಶಿಗಳ ಭೇಟಿ

ಸರ್ಕಾರದ ಕಾರ್ಯದರ್ಶಿ, ತೋಟಗಾರಿಕೆ ಮತ್ತು ರೇಷ್ಮೆ ಇಲಾಖೆ, ಮಹಿಳೆಯರ ಮತ್ತು ಮಕ್ಕಳ ಅಭಿವೃದ್ಧಿ, ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖೆ ಹಾಗೂ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿ ಡಾ. ಶಮ್ಲಾ ಇಕ್ಬಾಲ್ ಅವರು ಇಂದು ಸೋಮವಾರ ಜಿಲ್ಲೆಗೆ ಭೇಟಿ ನೀಡಲಿದ್ದಾರೆ. ಇಂದು ಮಧ್ಯಾಹ್ನ 12ಕ್ಕೆ ಜಿಲ್ಲಾ ಪಂಚಾಯತ್ ಸಭಾಂಗಣದಲ್ಲಿ ಪ್ರಗತಿ ಪರಿಶೀಲನಾ ಸಭೆ ನಡೆಸಲಿದ್ದಾರೆ ಎಂದು ಜಿ.ಪಂ. ಸಿಇಒ ಸುರೇಶ್ ಬಿ.ಇಟ್ನಾಳ್ ತಿಳಿಸಿದ್ದಾರೆ.

## ಕೃಷ್ಣಾರ್ಪಣಮಸ್ತು

ನೀಲ ಮೇಘಶಾಮ
ನಿನ್ನೊಡಲು ಪ್ರೀತಿಯ ಧಾಮ
ಯಾದವ ಕುಲಕೆ ನೀ ನವನೀತ
ವಾಸುಕಿ ವಾಸುದೇವನ ಸುತ

ಮನುಕುಲ ರಕ್ಷಣೆಗೆ ಕಾಳಿಂಗ ಮರ್ದನ
ಆದಿಶೇಷನ ಮುಡಿಯಲ್ಲಿ ಬಾಲಮುರುಳಿಯ
ನರ್ತನ
ಪ್ರತಿ ನುಡಿಯು ಮನುಕುಲಕೆ ಸಂಕೀರ್ತನ
ಕೊಳಲ ನಾದಕೆ ಭಾವಗಳ ಸಮ್ಮಿಲನ

ಧರ್ಮ ಸ್ಥಾಪನೆಯ ಸಾರಥಿ
ರಾಧೆಯ ಅನಂತ ಪ್ರೇಮಕೆ ಅಧಿಪತಿ
ನಡೆ ನುಡಿಯಲ್ಲೂ ಪ್ರೇಮದ ಹಣತೆ
ಬೋಧಿಸಿದ ಗೀತೆಯೇ ಭಗವದ್ಗೀತೆ

ಅಗುಳು ಅಕ್ಷಯವಾಯಿತು ನಿನ್ನೊಲುಮೆಯಿಂದ
ಕುಚೇಲನು ಕುಬೇರನೆನಿಸಿದ ನಿನ್ನ
ಹಿರಿಮೆಯಿಂದ
ಬಿದ್ದ ನವಿಲು ಗರಿಯೊಂದು ಕಿರೀಟವಾಯಿತು
ಬಿದಿರು ಕೊಳಲಾಗಿ ಕೊಳಲು ಸ್ವರವಾಯಿತು
ನಿನ್ನುಸಿರಿನಿಂದ

ಎಲ್ಲರನ್ನು ಆಡಿಸುವ ಅವಧೂತನು
ಬೇಡುವುದೇನಿದೆ ನೀನೇ ಪಿತನು
ಅಣು ಅಣುವಿನಲ್ಲೂ ಅವಿತ ಅನಂತನು
ಕಣ ಕಣದಲ್ಲೂ ಬೆರೆತ ಕೃಷ್ಣನು.

**- ಬಸವರಾಜ. ಕರುವಿನ ಬಸವನಾಳು**

## ಜೈಲಿನಿಂದಲೇ ದರ್ಶನ್ ವಿಡಿಯೋ ಕರೆ ಬಯಲು



ಬೆಂಗಳೂರು, ಆ. 25 - ರೇಣುಕಸ್ವಾಮಿ ಕೊಲೆ ಕೇಸಿನಲ್ಲಿ ಜೈಲಿನಲ್ಲಿರುವ ನಟ ದರ್ಶನ್ ಜೈಲಿನಲ್ಲಿದ್ದುಕೊಂಡೇ ಹೊರಗಿನವರ ಜೊತೆಗೆ ವಿಡಿಯೋ ಕಾಲ್‌ನಲ್ಲಿ ಮಾತನಾಡಿರುವುದಾಗಿ ಹೇಳಲಾಗುವ ವಿಡಿಯೋ ವೈರಲ್ ಆಗಿದೆ. ಅಲ್ಲದೇ, ನಟ ದರ್ಶನ್ ಜೈಲಿನಲ್ಲಿ ರೌಡಿ ವಿಲ್ಸನ್ ಗಾರ್ಡನ್ ನಾಗನೊಂದಿಗೆ ಇರುವ ಚಿತ್ರ ಸಹ ವೈರಲ್ ಆಗಿತ್ತು. ಇದರ ಬೆನ್ನಲ್ಲೇ ವಿಡಿಯೋ ಕಾಲ್ ಮಾಡಿರುವ ವಿಡಿಯೋ ಸಹ ಬೆಳಕಿಗೆ ಬಂದಿದೆ. ಇದರಿಂದಾಗಿ ಜೈಲಿನಲ್ಲಿ ನಟ ದರ್ಶನ್‌ಗೆ ಐಷಾರಾಮಿ ಸೌಲಭ್ಯ ಕಲ್ಪಿಸಲಾಗುತ್ತಿದೆ ಎಂಬ ಶಂಕೆಗಳು ವ್ಯಕ್ತವಾಗುತ್ತಿವೆ. ಈ ಬಗ್ಗೆ ತನಿಖೆ ನಡೆಸಿ ವರದಿ ನೀಡುವಂತೆ ಡಿ.ಜಿ.ಪಿ. ಮಾಲಿನಿ ಕೃಷ್ಣಮೂರ್ತಿ ಅವರು ಆದೇಶಿಸಿದ್ದಾರೆ.

## ಹರಪನಹಳ್ಳಿಯಲ್ಲಿ ಇಂದು ಟಿಎಪಿಸಿಎಂಎಸ್ ಮಹಾಸಭೆ

ಇಂದು ಬೆಳಿಗ್ಗೆ 11 ಕ್ಕೆ ಟಿ.ಎ.ಪಿ.ಸಿ.ಎಂ.ಎಸ್ ನ ಆವರಣದಲ್ಲಿ 98ನೇ ವಾರ್ಷಿಕ ಮಹಾಸಭೆಯನ್ನು ಸಂಘದ ಅಧ್ಯಕ್ಷ ಹೆಚ್. ನೇತ್ರಾವತಿ ಇವರ ಅಧ್ಯಕ್ಷತೆಯಲ್ಲಿ ಕರೆಯಲಾಗಿದೆ ಎಂದು ಸಂಘದ ಅಧ್ಯಕ್ಷರಾದ ಹೆಚ್. ನೇತ್ರಾವತಿ ಹಾಗೂ ಕಾರ್ಯದರ್ಶಿ ಹೆಚ್. ತಿರುಪತಿ ತಿಳಿಸಿದ್ದಾರೆ.

# ಶಾಲೆಗಳಲ್ಲಿ ಆಯುರ್ವಿದ್ಯಾ ಕಾರ್ಯಕ್ರಮ

## ಆರೋಗ್ಯ ಸುಧಾರಣೆಯಲ್ಲಿ ಆಯುಷ್ ಪದ್ದತಿ ಅಳವಡಿಕೆಗೆ ಜಾಗೃತಿ



ದಾವಣಗೆರೆ, ಆ. 25 - ರಾಷ್ಟ್ರೀಯ ಆಯುಷ್ ಅಭಿಯಾನದಡಿಯಲ್ಲಿ ಜಿಲ್ಲಾ ಆಯುಷ್ ಇಲಾಖೆ ಮತ್ತು ಶಾಲಾ ಶಿಕ್ಷಣ ಇಲಾಖೆ, ಇವರ ಸಂಯುಕ್ತಾಶ್ರಯದಲ್ಲಿ ಹಳೆ ಕಡ್ಲೇಬಾಳು ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಹಮ್ಮಿಕೊಳ್ಳಲಾಗಿದ್ದ ತಾಲ್ಲೂಕು ಹಾಗೂ ಜಿಲ್ಲಾ ಮಟ್ಟದ ಆಯುರ್ವಿದ್ಯಾ ಶಾಲಾ ಮಕ್ಕಳಿಗೆ ಆಯುಷ್ ಪದ್ಧತಿಗಳ ಮೂಲಕ ಆರೋಗ್ಯ ಜೀವನ ಶೈಲಿಯ ಶಿಕ್ಷಣ ಉದ್ಘಾಟನೆ ಕಾರ್ಯಕ್ರಮ ನಡೆಯಿತು.

ಜಿಲ್ಲಾ ಆಯುಷ್ ಅಧಿಕಾರಿ ಡಾ. ಯೋಗೇಂದ್ರಕುಮಾರ್. ಬಿ.ಯು. ಅವರು ಆಯುರ್ವಿದ್ಯಾಕ್ಕೆ ಚಾಲನೆ ನೀಡಿ ಮಾತನಾಡಿದರು. ರಾಜ್ಯದ 5 ಜಿಲ್ಲೆಗಳಿಗೆ ಈ ಕಾರ್ಯಕ್ರಮ ನಿಗದಿಪಡಿಸಿದ್ದು, ಜಿಲ್ಲೆಯ ಆಯ್ದ 60 ಶಾಲೆಗಳಲ್ಲಿ ಆಯುರ್ವಿಧ್ಯೇಯ ಮಕ್ಕಳಲ್ಲಿ ಜಾಗೃತಿ ಮೂಡಿಸಲು ಆಯೋಜಿಸಲಾಗುವುದು. ಮತ್ತು ಆಯುಷ್ ವೈದ್ಯರು ಮತ್ತು ಆಯುರ್ವಿದ್ಯಾ ಕಾರ್ಯಕ್ರಮದ ವೈದ್ಯರನ್ನೊಳಗೊಂಡ ತಂಡವು ಶಾಲೆಗಳಿಗೆ ಭೇಟಿ ನೀಡಿ ಆಯುಷ್ ವೈದ್ಯ ಪದ್ದತಿಗಳ ಬಗ್ಗೆ ಜಾಗೃತಿ ಮೂಡಿಸಿ, ನಂತರ ಕರ ಪತ್ರ ವಿತರಣೆ ಹಾಗೂ ಔಷಧಿ ಸಸ್ಯಗಳ ವಿತರಣೆಯನ್ನು ನೆರವೇರಿಸಲಾಗುವುದು ಎಂದು ತಿಳಿಸಿದರು.

ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದ ಡಾ. ಕಿಶೋರಿ ಕೆ.ಎಸ್. ರವರು ಔಷಧಿ ಸಸ್ಯಗಳ ಮಾಹಿತಿ ನೀಡಿದರು. ಆಯುರ್ವಿದ್ಯಾ ವೈದ್ಯ ಡಾ. ಸಿ.ಕೆ. ವಿನುತಾ ರವರು ವಿದ್ಯಾರ್ಥಿಗಳ ದಿನಚರಿ, ಆಹಾರ ಮತ್ತು ಆರೋಗ್ಯದ ವಿಷಯ ಕುರಿತು ಉಪನ್ಯಾಸ ನೀಡಿದರು. ನಂತರ ರಸಪ್ರಶ್ನೆ ಕಾರ್ಯಕ್ರಮ ಆಯೋಜಿಸಿ ಪ್ರಥಮ, ದ್ವಿತೀಯ ಮತ್ತು ತೃತೀಯ ಬಹುಮಾನಗಳನ್ನು ವಿತರಿಸಿ ಮಕ್ಕಳಲ್ಲಿ ಆಯುಷ್ ವೈದ್ಯ ಪದ್ದತಿಗಳ ಬಗ್ಗೆ ಹೆಚ್ಚಿನ ಆಸಕ್ತಿ ಮೂಡಿಸಲಾಯಿತು.

ಶಾಲೆಯ ಶಿಕ್ಷಕ ಜೆ. ಸುರೇಶ್ ಅಧ್ಯಕ್ಷತೆ ವಹಿಸಿದ್ದರು. ಡಾ. ಸಿದ್ದೇಶ್ ಈ. ಬಿಸನಳ್ಳಿ ರವರು ಆಯುಷ್ ಪರಿಚಯ ಕುರಿತು ತಿಳಿಸಿದರು.

## ವಾಲ್ಮೀಕಿ ಅಭಿವೃದ್ಧಿ ನಿಗಮಕ್ಕೆ ಹೆಚ್ಚುವರಿ ಅನುದಾನ : ಸಿಎಂ ಸಿದ್ದರಾಮಯ್ಯ



ಮಲೇಬೆನ್ನೂರು, ಆ. 25- ಮಹರ್ಷಿ ಶ್ರೀ ವಾಲ್ಮೀಕಿ ಅಭಿವೃದ್ಧಿ ನಿಗಮಕ್ಕೆ ಹೆಚ್ಚುವರಿ ಅನುದಾನ ನೀಡುವಂತೆ ರಾಜನಹಳ್ಳಿಯ ವಾಲ್ಮೀಕಿ ಗುರುಪೀಠದ ಶ್ರೀ ವಾಲ್ಮೀಕಿ ಪ್ರಸನ್ನಾನಂದ ಸ್ವಾಮೀಜಿ ನೇತೃತ್ವದಲ್ಲಿ ಗುರುವಾರ ವಿಧಾನಸೌಧದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯನವರಿಗೆ ಅವರಿಗೆ ಮನವಿ ಮಾಡಲಾಯಿತು. ಶ್ರೀಗಳ ಮನವಿಗೆ ತಕ್ಷಣ ಸ್ಪಂದಿಸಿದ ಸಿದ್ದರಾಮಯ್ಯ ಅವರು, ಕೂಡಲೇ ಅನುದಾನ ಬಿಡುಗಡೆ ಮಾಡುವಂತೆ ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಚನೆ ನೀಡಿದರು. ಲೋಕೋಪಯೋಗಿ ಇಲಾಖೆ ಸಚಿವರಾದ ಸತೀಶ್ ಜಾರಕಿಹೊಳಿ, ಶಾಸಕರಾದ ಕಂಪ್ಲಿ ಗಣೇಶ್, ಹಂಪಯ್ಯ ಸಾವುಕಾರ್, ಕೆಪಿಸಿಸಿ ಪ್ರಧಾನ ಕಾರ್ಯದರ್ಶಿ ಟಿ.ಈಶ್ವರ್, ಮುಖಂಡ ಹೊದಿಗೆರೆ ರಮೇಶ್, ನಿಗಮದ ನಿವೃತ್ತ ಎಂಡಿ ಮೃತ್ಯುಂಜಯಪ್ಪ ಸೇರಿದಂತೆ ಸಮಾಜದ ಎಲ್ಲಾ ಶಾಸಕರು, ಹಿರಿಯ ಅಧಿಕಾರಿಗಳು ಈ ನಿಯೋಗದಲ್ಲಿದ್ದರು.

## ನಗರದ ಶ್ರೀರಾಮ ದೇವಸ್ಥಾನದಲ್ಲಿ ಯಕ್ಷಪಕ್ಷ



ದಾವಣಗೆರೆ, ಆ. 25 - ಘಾಟಕ್ ಯಕ್ಷ ಸಂಸ್ಕೃತಿ ಟ್ರಸ್ಟ್ ವತಿಯಿಂದ ನಗರದ ಪಿ.ಜೆ ಬಡಾವಣೆಯ ಶ್ರೀರಾಮ ದೇವಸ್ಥಾನದಲ್ಲಿ ಕಳೆದ ವಾರ ನಡೆದ 'ಯಕ್ಷ ಪಕ್ಷ' ಕಾರ್ಯಕ್ರಮವು ಸಭಿಕರನ್ನು ಆಕರ್ಷಕವಾಗಿ ಸೆಳೆಯುವ ಮೂಲಕ ಯಶಸ್ವಿಯಾಗಿ ನಡೆಯಿತು.

## ಮಾಗನೂರು ಬಸಪ್ಪ ಕಾಲೇಜು ಜಿಲ್ಲಾಮಟ್ಟಕ್ಕೆ ಆಯ್ಕೆ



ದಾವಣಗೆರೆ, ಆ. 25 - ಶಾಲಾ ಶಿಕ್ಷಣ ಇಲಾಖೆಯ ಪದವಿ ಪೂರ್ವ ಕಾಲೇಜುಗಳ ತಾಲ್ಲೂಕು ಮಟ್ಟದ ಕ್ರೀಡೆಗಳು ನಡೆಯುತ್ತಿದ್ದು,ಈಚೆಗೆ ನಡೆದ ಬಾಲಕರ ಟೆನ್ನಿ ಕಾಯ್ಟ್ ಪಂದ್ಯದಲ್ಲಿ ಮಾಗನೂರು ಬಸಪ್ಪ ಕಾಲೇಜಿನ ಬಾಲಕರ ತಂಡವು ಪ್ರಥಮ ಸ್ಥಾನ ಪಡೆದು ಜಿಲ್ಲಾ ಮಟ್ಟಕ್ಕೆ ಆಯ್ಕೆಯಾಗಿರುತ್ತದೆ. ಮಾಗನೂರು ಬಸಪ್ಪ ಪಬ್ಲಿಕ್ ಟ್ರಸ್ಟ್‌ನ ಗೌರವ ಕಾರ್ಯದರ್ಶಿ ಸಂಗಮೇಶ್ವರ ಗೌಡರು, ಕಾಲೇಜಿನ ನಿರ್ದೇಶಕ ಡಾ. ಜಿ.ಎನ್.ಹೆಚ್ ಕುಮಾರ್, ಪ್ರಾಚಾರ್ಯ ಡಾ. ಪ್ರಸಾದ್ ಬಂಗೇರ ಎಸ್. ವಿಜೇತ ವಿದ್ಯಾರ್ಥಿಗಳಿಗೆ ಅಭಿನಂದಿಸಿದ್ದಾರೆ.

## ಬೀರೇನಹಳ್ಳಿ : ಸರ್ಕಾರಿ ಶಾಲಾ ಮಕ್ಕಳಿಗೆ ಬ್ಯಾಗ್ ವಿತರಣೆ



ದಾವಣಗೆರೆ, ಆ.25- ವಿಂಡ್ ಎನರ್ಜಿ ಉದ್ಯಮಿ ವಿಜಯ್ ಗುಂಜಾಲ್ ಅವರ ಜನ್ಮದಿನದ ಪ್ರಯುಕ್ತ ಹಿರಿಯೂರು ತಾಲ್ಲೂಕಿನ ಬೀರೇನಹಳ್ಳಿ ಗ್ರಾಮದ ಸರ್ಕಾರಿ ಪ್ರೌಢಶಾಲೆಯ ಶಿಕ್ಷಕರು, ವಿದ್ಯಾರ್ಥಿಗಳು ಮತ್ತು ಸಿಬ್ಬಂದಿಗೆ ಗುಣ ಮಟ್ಟದ ಬ್ಯಾಗ್ ಹಾಗೂ ಕ್ರೀಡಾ ಸಾಮಗ್ರಿಗಳನ್ನು ವಿತರಿಸಿದರು. ಕೆಪಿಸಿಸಿ ಪ್ರಧಾನ ಕಾರ್ಯದರ್ಶಿ ಡಿ. ಬಸವರಾಜ್ ಮತ್ತು ಇತರರು ಮುಖ್ಯ ಅತಿಥಿಗಳಾಗಿ ಭಾಗವಹಿದ್ದರು.

## ಹಳೇಬಾತಿ : ಗಣೇಶನ ಪ್ರತಿಷ್ಠಾಪನೆಗೆ ಗಜಸ್ಥಂಭ ಪೂಜೆ



ಹಳೇಬಾತಿ, ಆ. 25 - ಗ್ರಾಮದ ತರಳುಬಾಳು ಯುವಕ ಸಂಘದಿಂದ ಗಣೇಶನ ಪ್ರತಿಷ್ಠಾಪನೆಗೆ ಗಜಸ್ಥಂಭ ಪೂಜೆ ನೆರವೇರಿಸಲಾಯಿತು. ಲೋಕಿಕೆರೆ ನಾಗರಾಜ್, ಹಾಲೇಶ್, ರಾಜಪ್ಪ, ಶಿವಕುಮಾರ್, ಸಿದ್ದೇಶ್, ಅಶೋಕ್, ಹೇಮಂತ್, ಸಂಜು, ಹನುಮಂತ, ಶಂಕರ್ ಮೂರ್ತಿ, ರಾಜು, ನವೀನ್, ಯುವರಾಜ್, ಮಾದೇವ್, ಸುರೇಶ್, ಪ್ರಕಾಶ್, ನಿಂಗರಾಜ್ ಮುಂತಾದವರು ಉಪಸ್ಥಿತರಿದ್ದರು.

## ಕಾಶೀಪುರದ ಚಂದ್ರಕಲಾ ನಿಧನ



ದಾವಣಗೆರೆ ತಾಲ್ಲೂಕು ಕಾಶೀಪುರ ಗ್ರಾಮದ ಕೆ.ದೇವೇಂದ್ರಪ್ಪನವರ ಧರ್ಮಪತ್ನಿ **ಚಂದ್ರಕಲಾ ಡಿ. (52)** ಇವರು ದಿನಾಂಕ 25.08.2024ರ ಮಧ್ಯಾಹ್ನ 3.26ಕ್ಕೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ.

ಪತಿ, ಓರ್ವ ಪುತ್ರ ಹಾಗೂ ಅಪಾರ ಬಂಧುಗಳನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ಸ್ವಗ್ರಾಮ ಕಾಶೀಪುರದಲ್ಲಿ ದಿನಾಂಕ 26.08.2024ರ ಮಧ್ಯಾಹ್ನ 12.30ಕ್ಕೆ ನೆರವೇರಿಸಲಾಗುವುದು.

**- ದುಃಖತಪ್ತ ಕುಟುಂಬ ವರ್ಗ, ಮೊ: 9164620865, 9902855928**

## ರಾಣೇಬೆನ್ನೂರಿನಲ್ಲಿ ಇಂದು ಅನ್ನ ಸಂತರ್ಪಣೆ

ಚೋಳಮರಡೇಶ್ವರ ನಗರದ ಶ್ರೀ ಬಸವ-ಈಶ್ವರ ದೇವಸ್ಥಾನದಲ್ಲಿ ಇಂದು ಮಹಾರುದ್ರಾಭಿಷೇಕ ಹಾಗೂ ಅನ್ನ ಸಂತರ್ಪಣೆ ಕಾರ್ಯಕ್ರಮ ನಡೆಯಲಿದೆ.

## ಶ್ರೀಮತಿ ಜಿ. ಶಾಂತಮ್ಮ ನಿಧನ



ಹರಪನಹಳ್ಳಿ ತಾಲ್ಲೂಕು ರಾಗಿಮಸಲವಾಡ ಗ್ರಾಮದ ವಾಸಿ ಶೇಖರ ಗೌಡ್ರು ರಾಗಿ ಮಸಲವಾಡದವರ ಧರ್ಮಪತ್ನಿ ಶ್ರೀಮತಿ ಜಿ. ಶಾಂತಮ್ಮ (63) ರವರು ದಿನಾಂಕ 25.8.2024ರ ರಾತ್ರಿ 10 ಗಂಟೆಗೆ ನಿಧನರಾದರು. ಪತಿ, ಓರ್ವ ಪುತ್ರ, ಮೂವರು ಪುತ್ರಿಯರು, ಮೊಮ್ಮಕ್ಕಳು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು 26.8.2024ರ ಸೋಮವಾರ ಮಧ್ಯಾಹ್ನ 3 ಗಂಟೆಗೆ ರಾಗಿಮಸಲವಾಡ ಗ್ರಾಮದ ಮೃತರ ಜಮೀನಿನಲ್ಲಿ ನೆರವೇರಲಿದೆ.

# ರೈತರು ತೊಗರಿ ಬೆಳೆಗೆ ಕೃಷಿ ಡ್ರೋನ್ ಬಳಕೆ ಮಾಡಿ

**ಬೇಸಾಯ ತಜ್ಞ ಬಿ.ಓ. ಮಲ್ಲಿಕಾರ್ಜುನ್**

ಚನ್ನಗಿರಿ, ಆ. 25 - ದ್ವಿದಳ ಧಾನ್ಯಗಳ ಉತ್ಪಾದನೆ ಹಾಗೂ ಉತ್ಪಾದಕತೆಯನ್ನು ಹೆಚ್ಚಿಸುವ ನಿಟ್ಟಿನಲ್ಲಿ ಅಧಿಕ ಇಳುವರಿ ಕೊಡುವ ತಳಿಗಳ ಪರಿಚಯದ ಜೊತೆಗೆ ಆಧುನಿಕ ತಂತ್ರಜ್ಞಾನವಾದ ಕೃಷಿ ಡ್ರೋನ್ ಬಳಕೆಯನ್ನು ರೈತರಿಗೆ ಪರಿಚಯಿಸಬೇಕು ಎಂದು ಬೇಸಾಯ ತಜ್ಞ ಬಿ.ಓ. ಮಲ್ಲಿಕಾರ್ಜುನ್ ಹೇಳಿದರು.

ತಾಲ್ಲೂಕಿನ ಮಾದಾಪುರ ಗ್ರಾಮದಲ್ಲಿ ಐ.ಸಿ.ಎ.ಆರ್. ತರಳಬಾಳು ಕೃಷಿ ವಿಜ್ಞಾನ ಕೇಂದ್ರ, ದಾವಣಗೆರೆ ಹಾಗೂ ಕೃಷಿ ಇಲಾಖೆ, ಚನ್ನಗಿರಿ ಇವರ ಸಹಯೋಗದಲ್ಲಿ ನಡೆದ ಕೃಷಿ ಡ್ರೋನ್ ಮೂಲಕ ತೊಗರಿ ಬೆಳೆಗೆ ಸಿಂಪರಣೆ ಹಾಗೂ ತರಬೇತಿ ಕಾರ್ಯಕ್ರಮವನ್ನು ಉದ್ದೇಶಿಸಿ ಅವರು ಮಾತನಾಡಿದರು.

ರೈತರಿಗೆ ಡ್ರೋನ್ ಬಳಕೆಯನ್ನು ಪರಿಚಯಿಸಿ ತೊಗರಿಯಲ್ಲಿ ಪಲ್ಸ್ ಮ್ಯಾಜಿಕ್ ಎಕರೆಗೆ 2 ಕೆ.ಜಿ. ಯಂತೆ ಪೋಷಕಾಂಶಗಳ ಸಿಂಪರಣೆ ಮಾಡಬೇಕು. ಡ್ರೋನ್ ಮುಖಾಂತರ ಬೆಳೆಗಳಿಗೆ ಪೋಷಕಾಂಶಗಳ ಸಿಂಪಡನೆಯನ್ನು ಹೇಗೆ ಮಾಡಬೇಕೆಂಬುದನ್ನು ತೋರಿಸುವುದರಿಂದ ರೈತರಿಗೆ ಅನುಕೂಲಕರವಾಗುತ್ತದೆ. ಕೃಷಿಯಲ್ಲಿ ಡ್ರೋನ್ ಬಳಸಿ ಸಿಂಪಡನೆ ಮಾಡುವುದರಿಂದ ನಿಖರತೆ ಹೆಚ್ಚಿಸಿ, ಉತ್ಪಾದನಾ ವೆಚ್ಚವನ್ನು ಕಡಿಮೆ ಮಾಡಬಹುದು ಎಂದು ತಿಳಿಸಿದರು.

ಐ.ಸಿ.ಎ.ಆರ್. ತರಳಬಾಳು ಕೃಷಿ ವಿಜ್ಞಾನ ಕೇಂದ್ರದ ಸಸ್ಯ ಸಂರಕ್ಷಣಾ ತಜ್ಞ ಡಾ. ಟಿ.ಜಿ. ಅವಿನಾಶ್ ಮಾತನಾಡಿ, ತೊಗರಿಯಲ್ಲಿ ಕುಡಿ ಚಿವುಟುವುದರಿಂದ ಹರೆ ಕೊಂಬುಗಳು ಜಾಸ್ತಿಯಾಗಿ ಇಳುವರಿಯನ್ನು ಹೆಚ್ಚಿಸಬಹುದು ಎಂದು ಕುಡಿ ಚಿವುಟುವುದನ್ನು ಪದ್ಧತಿ ಪಾತ್ಯಕ್ಷತೆ ಮೂಲಕ ತೋರಿಸಿದರು.

ಸಹಾಯಕ ಕೃಷಿ ನಿರ್ದೇಶಕ ಅರುಣ್ ಮಾತನಾಡಿ, ಕೃಷಿ ಇಲಾಖೆಯಲ್ಲಿನ ಸೌಲಭ್ಯಗಳ ಮಾಹಿತಿ ನೀಡಿ, ಮುಂದಿನ ದಿನಗಳಲ್ಲಿ ಕೂಲಿ ಆಳುಗಳ ಸಮಸ್ಯೆಗೆ ಡ್ರೋನ್ ಪರಿಹಾರವಾಗುತ್ತದೆ ಎಂದು ಹೇಳಿದರು.

ಸುಮಾರು 25 ಎಕರೆ ತೊಗರಿ ಬೆಳೆಗೆ ಕೃಷಿ ಡ್ರೋನ್ ಮೂಲಕ ಪೋಷಕಾಂಶಗಳ ಸಿಂಪಡನೆ ಮಾಡಿ, ಕಾರ್ಯಕ್ರಮ ಯಶಸ್ವಿಗೊಳಿಸಲಾಯಿತು.

ಕೃಷಿ ವಿಜ್ಞಾನ ಕೇಂದ್ರದ ವಿಸ್ತರಣಾ ತಜ್ಞ ಜೆ. ರಘುರಾಜ, ಕೃಷಿ ಅಧಿಕಾರಿ ಮೆಹತಾಬ್ ಆಲಿ, ಆತ್ಮಯೋಜನೆ ಅಧಿಕಾರಿ ಎಂ. ಪವನ ಮತ್ತಿತರರು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

# ಬದುಕಿನ ಹೆಜ್ಜೆಗಳು ಸರಿದಾರಿಯಲ್ಲಿರಲಿ

## ಹಿರೇಕಲ್ಮಠದ ಡಾ.ಒಡೆಯರ್ ಚನ್ನಮಲ್ಲಿಕಾರ್ಜುನ ಶ್ರೀಗಳು



ಬಸವಾಪಟ್ಟಣ, ಆ. 25 - 'ಲೋಕಾ ಸಮಸ್ತ ಸುಖಿನೋ ಭವಂತು' ಎಂಬ ಭಾವವನ್ನು ಸರ್ವರು ತಮ್ಮ ಬಾಳಿನಲ್ಲಿ ಅಳವಡಿಸಿಕೊಂಡಾಗ ಮಾತ್ರ ಜೀವನದ ಮೌಲ್ಯಗಳು ವಿಕಸಿಸಬಲ್ಲವು. ಬದುಕು ಬದಲಾಗಬೇಕಾದರೆ ನಮ್ಮ ಜೀವನದ ಹೆಜ್ಜೆಗಳ ದಾರಿಯು ಉತ್ತಮ ರೀತಿಯಲ್ಲಿ ಬದಲಾಗಬೇಕು ಎಂದು ಹೊನ್ನಾಳಿ ಹಿರೇಕಲ್ಮಠದ ಡಾ.ಒಡೆಯರ್ ಚನ್ನಮಲ್ಲಿಕಾರ್ಜುನ ಶಿವಾಚಾರ್ಯ ಮಹಾಸ್ವಾಮೀಜಿ ತಿಳಿಸಿದರು.

ಬಸವಾಪಟ್ಟಣ ಗ್ರಾಮದಲ್ಲಿ 12 ಕೋಟಿ ರೂಗಳ ವೆಚ್ಚದಲ್ಲಿ ನೂತನವಾಗಿ ನಿರ್ಮಿಸಿರುವ ಶ್ರೀ ವಿಶ್ವೇಶ್ವರ ಶಿವಾಚಾರ್ಯ ಹಾಲಸ್ವಾಮಿ ಸಮುದಾಯ ಭವನದ ಲೋಕಾರ್ಪಣೆ ಹಾಗೂ ಲಿಂಗೈಕ್ಯ ಶ್ರೀಗಳ 4 ನೇ ವರ್ಷದ ಪುಣ್ಯಾರಾಧನೆ ಕಾರ್ಯಕ್ರಮದ ಸಾನಿಧ್ಯ ವಹಿಸಿ ಶ್ರೀಗಳು ಮಾತನಾಡಿದರು.

ಮನುಷ್ಯನ ಟೀಕೆಗಳು ಸಾಯುತ್ತವೆ, ಮಾಡಿದ ಕೆಲಸಗಳು ಮಾತ್ರ ಶಾಶ್ವತವಾಗಿ ಉಳಿಯಬಲ್ಲವು. ಸಾಮಾನ್ಯವಾಗಿ ಕೆಲಸವನ್ನು ಅತ್ಯುತ್ತಮವಾಗಿ ಮಾಡುವ ಮೂಲಕ ಅದರಿಂದ ಶ್ರೇಷ್ಠ ಪ್ರತಿಫಲವನ್ನು ಪಡೆಯಬಹುದು. ಅದಕ್ಕೆ ಉತ್ತಮವಾದ ನಿದರ್ಶನ ಈ ಹಾಲಸ್ವಾಮಿ ಸಮುದಾಯ ಭವನ ಎಂದು ವಿಶ್ಲೇಷಿಸಿದರು.

ಚನ್ನಗಿರಿಯ ಕೇದಾರಲಿಂಗ ಶಿವಶಾಂತವೀರ ಶ್ರೀಗಳು ಮಾತನಾಡಿ ಆಧುನಿಕತೆ ಬೆಳೆದಂತೆ ನಮ್ಮ ಸಾಮಾಜಿಕ ಮೌಲ್ಯಗಳು ಕುಸಿಯುತ್ತಿರುವ ಸಂದರ್ಭದಲ್ಲಿ ಪ್ರತಿಯೊಬ್ಬರೂ ಬದುಕಿನಲ್ಲಿ ಉತ್ತಮ ಗುಣ ಮತ್ತು ಮೌಲ್ಯಗಳನ್ನು ಬೆಳೆಸಿಕೊಳ್ಳುವ ಮೂಲಕ ಆರೋಗ್ಯಕರ ಸಮಾಜ ನಿರ್ಮಾಣ ಮಾಡಬೇಕಾಗಿದ್ದು, ನಮ್ಮ ಬದುಕಿನಲ್ಲಿ ಭಕ್ತಿ, ಶ್ರದ್ಧೆ ಮತ್ತು ಕಾಯಕ ತತ್ವಗಳನ್ನು ಬೆಳೆಸಿಕೊಂಡು ಆದರ್ಶ ಸಮಾಜವನ್ನು ನಿರ್ಮಿಸಲು ಮುಂದಾಗುವಂತೆ ತಿಳಿಸಿದರು.

ಗವಿಮಠದ ಶ್ರೀ ಶಿವಕುಮಾರ ಹಾಲಸ್ವಾಮೀಜಿ ಅಧ್ಯಕ್ಷತೆ ವಹಿಸಿದ್ದರು. ಶಾಸಕ ಬಸವಂತಪ್ಪ, ಮಾಜಿ ಸಚಿವ ರೇಣುಕಾಚಾರ್ಯ, ಗ್ರಾ.ಪಂ.ಅಧ್ಯಕ್ಷ ಬಿ.ಜಿ.ಸಚಿನ್, ಕಸಾಪ ಅಧ್ಯಕ್ಷ ಎಲ್.ಜಿ. ಮಧುಕುಮಾರ್, ಕಾಂಗ್ರೆಸ್ ಮುಖಂಡ ಬಿ.ಜಿ. ನಾಗರಾಜ್, ಗವಿಮಠದ ಸಂಚಾಲಕ ಕೆ.ಎಂ. ವೀರಯ್ಯ, ಉಪಾಧ್ಯಕ್ಷ ಕೆ. ರುದ್ರಪ್ಪ, ರೈತ ಮುಖಂಡ ತೇಜಸ್ವಿ ಪಟೇಲ್, ನಿವೃತ್ತ ಸಿಟಿಓ ಅನ್ವರ್ ಪಾಷಾ, ಶಿಕ್ಷಕ ಎಂ.ಬಿ. ನಾಗರಾಜ್, ಗ್ರಾ.ಪಂ. ಉಪಾಧ್ಯಕ್ಷೆ ಕುಸುಮ ಬಸವರಾಜ್, ಸದಸ್ಯರಾದ ಡಿ.ಆರ್. ಹಾಲೇಶ್, ಎಂ.ಎಸ್. ರಮೇಶ್, ರಫೀಕ್ ಅಹಮದ್, ಶೋಭಾ , ಮರಗಾಲ್ ಜಯಣ್ಣ, ಕೋಗಲೂರು ಜಗದೀಶ್‌ಗೌಡ, ಹರಲೀಪುರ ಸತೀಶ್ ಪಟೇಲ್, ಸೇವಾದಳದ ಜಿಲ್ಲಾ ಸಂಘಟಕ ಪಕ್ಕೀರಗೌಡ, ಎಂ. ಬಸವಲಿಂಗಯ್ಯ, ಕೆ.ಎಂ. ಅಜ್ಜಯ್ಯ, ಮಂಜುನಾಥ್ ಪೂಜಾರ್, ಬಿ.ಕೆ. ಕುಮಾರಸ್ವಾಮಿ, ಕೆ.ಶಾಂತರಾಜ್ ಮತ್ತಿತರರು ಇದ್ದರು.

# ಉತ್ತಮ ಸಮಾಜ ಸೇವೆಗೆ ಹಿರಿಯ ನಾಗರಿಕರಿಂದ ಅರ್ಜಿ

ದಾವಣಗೆರೆ, ಆ.11- ಜಿಲ್ಲಾ ವಿಕಲ ಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆಯಿಂದ ಶಿಕ್ಷಣ, ಸಾಹಿತ್ಯ, ಕಲೆ, ಕಾನೂನು, ಪ್ರತಿಭೆ, ಕ್ರೀಡೆ ಮತ್ತು ಹಿರಿಯ ನಾಗರಿಕರ ಸೇವಾ ಕ್ಷೇತ್ರಗಳಲ್ಲಿ ಗಣನೀಯ ಸೇವೆ ಸಲ್ಲಿಸಿದ ಹಿರಿಯ ನಾಗರಿಕರಿಗೆ 6 ವೈಯಕ್ತಿಕ ಹಾಗೂ ಹಿರಿಯ ನಾಗರಿಕರ ಕ್ಷೇತ್ರದಲ್ಲಿ ಉತ್ತಮವಾಗಿ ಕಾರ್ಯನಿರ್ವಹಿಸುತ್ತಿರುವ 1 ಸಂಸ್ಥೆಗೆ ಪ್ರಶಸ್ತಿ ನೀಡಲು ಅರ್ಜಿ ಆಹ್ವಾನಿಸಲಾಗಿದೆ. ಅರ್ಹರು ಇದೇ ದಿನಾಂಕ 31 ರೊಳಗೆ ಹಿರಿಯ ನಾಗರಿಕರ ಸಬಲೀಕರಣ ಅಧಿಕಾರಿಗಳ ಕಚೇರಿ, ಕುವೆಂಪು ನಗರ, 14ನೇ ಮುಖ್ಯ ರಸ್ತೆ, ಶಂಕರಲೀಲಾ ಗ್ಯಾಸ್ ಏಜೆನ್ಸಿ ಹತ್ತಿರ, ಎಂ.ಸಿ.ಸಿ ಬಿ.ಬ್ಲಾಕ್ ಇಲ್ಲಿ ಅರ್ಜಿ ಪಡೆಯ ಬಹುದು. ಮಾಹಿತಿಗಾಗಿ ಜಿಲ್ಲಾ ವಿಕಲಚೇತನರ ಸಹಾಯವಾಣಿ (08192-263939, 7483968224) ನಿವೃತ್ತ ನೌಕರರ ಸಂಘ ಕಾರ್ಯದರ್ಶಿ ಗುರುಮೂರ್ತಿ (9844143827) ಹಿರಿಯ ನಾಗರಿಕರ ಹಗಲು ಯೋಗಕ್ಷೇಮ ಕೇಂದ್ರ (9148672498) ಸಂಪರ್ಕಿಸಿ.

# ವಿದ್ಯಾಭ್ಯಾಸವೇ ವಿದ್ಯಾರ್ಥಿಗಳ ಸಾಧನೆಯಾಗಬೇಕು

ದಾವಣಗೆರೆ, ಆ. 25 - ಭಾರತ ಜನ ಸಂಖ್ಯೆ, ಯುವ ಸಂಪತ್ತು, ಅರ್ಥೈಸುವಿಕೆಯಲ್ಲಿ ಜಗತ್ತಿಗೆ ಮೊದಲ ಸ್ಥಾನದಲ್ಲಿದೆ. ಇದನ್ನು ಕಾಪಾಡಿಕೊಳ್ಳುವ ನಿಟ್ಟಿನಲ್ಲಿ ಯುವ ಸಂಪತ್ತು ಸದ್ಬಳಕೆಯಾಗಬೇಕು, ಇದಕ್ಕಾಗಿ ವಿದ್ಯಾರ್ಥಿಗಳು ದುಶ್ಚಟಗಳಿಂದ ದೂರ ಉಳಿದು ಕಲಿಯುವ ಶಿಕ್ಷಣ ಜೀವನಕ್ಕೆ ಮಾರ್ಗಸೂಚಿ ಮತ್ತು ಸದುಪಯೋಗವಾಗ ಬೇಕೆಂದು ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಮಹಾವೀರ ಮ. ಕರೆಣ್ಣ ವರ ತಿಳಿಸಿದರು.

ದಾವಣಗೆರೆ ತಾಲ್ಲೂಕಿನ ಆನಗೋಡು ಜಿ. ಚನ್ನಪ್ಪ ಪದವಿ ಪೂರ್ವ ಕಾಲೇಜಿನಲ್ಲಿ ಮದ್ಯಪಾನ ಸಂಯಮ ಮಂಡಳಿ, ಜಿಲ್ಲಾಡಳಿತ, ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರ, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ, ಮಾತೃಶ್ರೀ ನಗರ ಮತ್ತು ಗ್ರಾಮೀಣಾಭಿವೃದ್ಧಿ ಸಂಸ್ಥೆ, (ದಾವಣಗೆರೆ) ಇವರ ಸಂಯುಕ್ತಾಶ್ರಯದಲ್ಲಿ ನಿನ್ನೆ ಏರ್ಪಡಿಸಲಾದ ಕಲಿಕಾಸಕ್ತಿ ಮತ್ತು ದುಶ್ಚಟಗಳಿಂದ ದೂರ ಉಳಿಯುವ ಕುರಿತು ಏರ್ಪಡಿಸಲಾದ ವಿಚಾರ ಸಂಕಿರಣ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ವಿದ್ಯಾರ್ಥಿಗಳಿಗೆ ಪ್ರಾಥಮಿಕ, ಮಾಧ್ಯಮಿಕ, ಪ್ರೌಢಶಾಲೆ ಹಾಗೂ ಪದವಿ ಪೂರ್ವ ಶಿಕ್ಷಣದ ಹಂತಗಳಲ್ಲಿ ಕಲಿಕಾಸಕ್ತಿ ಮೂಡಿಸುವುದು ಬಹಳ ಅಗತ್ಯವಾಗಿರುತ್ತದೆ.

ಇದರಿಂದ ಮಕ್ಕಳಲ್ಲಿನ ಶೈಕ್ಷಣಿಕ ಪ್ರಗತಿ ಹೆಚ್ಚಿಸಲು ಹೆಚ್ಚಿನ ಸಹಕಾರಿಯಾಗಲಿದೆ. ವಿವಿಧ ಹಂತದ ತರಗತಿಗಳ ಪಠ್ಯಕ್ರಮಗಳು ಸಾಮಾಜಿಕ, ಆರ್ಥಿಕ, ವೈಜ್ಞಾನಿಕ ಬದಲಾವಣೆ ಆದಂತೆ ಪರಿಷ್ಕರಣೆಗೆ ಒಳಗಾಗಲಿದ್ದು ಇದು ನಿರಂತರ ಪ್ರಕ್ರಿಯೆಯಾಗಿರುತ್ತದೆ. ವಿದ್ಯಾರ್ಥಿಗಳು ಕೇವಲ ಅಂಕ ಗಳಿಕೆಗಷ್ಟೆ ಸೀಮಿತವಾಗಿ ವ್ಯಾಸಂಗ ಮಾಡದೆ, ವಿಷಯ ಅರ್ಥೈಸಿ ಕೊಂಡು ಜೀವನಕ್ಕೆ ಉಪಯೋಗವಾಗುವ ನಿಟ್ಟಿನಲ್ಲಿ ಓದಬೇಕು ಎಂದರು.

ವಿದ್ಯಾರ್ಥಿಗಳಿಗೆ ಹಿಂದೆ ಗುರು, ಮುಂದೆ ಗುರಿ ಇರಬೇಕೆಂಬಂತೆ ವಿದ್ಯಾರ್ಥಿ ಜೀವನವಿರಬೇಕು, ಇದರಿಂದ ಯಾವುದೇ ದುಶ್ಚಟಗಳಿಗೆ ಬಲಿಯಾಗುವುದಿಲ್ಲ. ಮದ್ಯ, ಧೂಮಪಾನ, ಮಾದಕ ವಸ್ತುಗಳ ಸೇವನೆಯಷ್ಟೇ ದುಶ್ಚಟವಲ್ಲ, ಅನಾವಶ್ಯಕ ಮೊಬೈಲ್ ಬಳಕೆ, ಸುಳ್ಳು ಹೇಳುವುದು, ಪೋಷಕರಿಗೆ ನಿಲುಕಲಾರದ ದುಬಾರಿ ವಸ್ತುಗಳು ಬೇಕೆಂದು ಒತ್ತಾಯ ಮಾಡುವುದು, ಇವೆಲ್ಲವೂ ಮಕ್ಕಳಿಂದ ದೂರವಾಗಿ ಪೋಷಕರ ಅಪೇಕ್ಷೆಗನುಗುಣವಾಗಿ ನಡೆದುಕೊಂಡು ಚನ್ನಾಗಿ ಓದುವ ಮೂಲಕ ತಂದೆ, ತಾಯಿಯ ಋಣ ತೀರಿಸಬೇಕೆಂದು ಶಪಥ ಮಾಡಬೇಕೆಂದು ವಿದ್ಯಾರ್ಥಿಗಳ ಕುರಿತು ಮಾತನಾಡಿದರು.

ಕಾಲೇಜಿನ ಪ್ರಾಂಶುಪಾಲ ಕಾವೇರಿ ಗೌಡರ್ ಅಧ್ಯಕ್ಷತೆ ವಹಿಸಿದ್ದರು. ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಹಿರಿಯ ಸಹಾಯಕ ನಿರ್ದೇಶಕ ಬಿ. ಧನಂಜಯ ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದರು.

ಇತಿಹಾಸ ಉಪನ್ಯಾಸಕರ ಹೆಚ್.ಪಿ. ಯಶವಂತ್ ಕುಮಾರ್, ಮಾತೃಶ್ರೀ ಸಂಸ್ಥೆ ಅಧ್ಯಕ್ಷ ಕಿರಣ್ ಎ.ಎಲ್. ಕಲಿಕಾಸಕ್ತಿ ಕುರಿತಂತೆ ಮಾತನಾಡಿದರು. ವಿದ್ಯಾರ್ಥಿ ನವೀತಾ ಸ್ವಾಗತಿಸಿದರು, ಮಾತೃಶ್ರೀ ಸಂಸ್ಥೆ ಲಕ್ಷ್ಮಿ .ಪಿ ನಿರೂಪಿಸಿದರು. ಉಪನ್ಯಾಸಕ ಡಾ. ಅಜ್ಜಯ್ಯ ವಂದಿಸಿದರು.



ಆನಗೋಡಿನ ಕಾರ್ಯಕ್ರಮದಲ್ಲಿ ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಮಹಾವೀರ ಮ. ಕರೆಣ್ಣವರ

# ಕೊಮಾರನಹಳ್ಳಿಯಲ್ಲಿ ಶಂಕರಲಿಂಗ ಭಗವಾನ್ ಸರಸ್ವತಿಗಳ 144 ನೇ ಜಯಂತಿ



ಮಲೇಬೆನ್ನೂರು, ಆ.25- ಸಮೀಪದ ಕೊಮಾರನಹಳ್ಳಿ ಗ್ರಾಮದಲ್ಲಿರುವ ಶ್ರೀ ರಂಗನಾಥಾಶ್ರಮದಲ್ಲಿ ಬುಧವಾರ ಶಂಕರಲಿಂಗ ಭಗವಾನ್ ಸರಸ್ವತಿಗಳ 144 ನೇ ಜಯಂತಿ ಅಂಗವಾಗಿ ಮತ್ತು ಲೋಕಕಲ್ಯಾಣಾರ್ಥವಾಗಿ ಟ್ರಸ್ಟ್ ನವರು ಲಲಿತಾ ಹೋಮ ಮಾಡಿದರು.

# ಇಸ್ಕಾನ್ : ನಗರದಲ್ಲಿ ಇಂದು ಶ್ರೀ ಕೃಷ್ಣ ಜನ್ಮಾಷ್ಟಮಿ

ಅಂತರರಾಷ್ಟ್ರೀಯ ಕೃಷ್ಣ ಭಾವನಾಮೃತ ಸಂಘ (ಇಸ್ಕಾನ್) ದಾವಣಗೆರೆ ಘಟಕದ ವತಿಯಿಂದ ಇಂದು ಮತ್ತು ನಾಳೆ ಶ್ರೀ ಕೃಷ್ಣ ಜನ್ಮಾಷ್ಟಮಿ ಮಹೋತ್ಸವ ಹಮ್ಮಿಕೊಳ್ಳಲಾಗಿದೆ ಎಂದು ಇಸ್ಕಾನ್ ಮುಖ್ಯಸ್ಥ ಅವಧೂತ ಚಂದ್ರದಾಸ ಅವರು ತಿಳಿಸಿದರು.

ವಿನೋಬನಗರದ ಅರ್ಬನ್ ಬ್ಯಾಂಕ್ ಸಮುದಾಯ ಭವನದಲ್ಲಿ ಇಂದು ಸಂಜೆ 5 ರಿಂದ ರಾತ್ರಿ 12ರವರೆಗೆ ಮಂಗಳಾರತಿ, ಭಜನೆ, ಅಭಿಷೇಕ, ನೃತ್ಯ ರೂಪಕ, ಪ್ರವಚನ, ಮಹಾಮಂಗಳಾರತಿ ನಂತರ ಪ್ರಸಾದ ಇರಲಿದೆ ಎಂದರು. ನಾಳೆ ಮಂಗಳವಾರ ಬೆಳಿಗ್ಗೆ 10.30ರಿಂದ ಮಧ್ಯಾಹ್ನ 1 ಗಂಟೆವರೆಗೆ ಶ್ರೀ ಪ್ರಭುಪಾದರ ವ್ಯಾಸ ಪೂಜಾ ಮಹೋತ್ಸವ ನಡೆಯಲಿದೆ.

# ನಗರದಲ್ಲಿ ಇಂದು ಕರಿಬಸಜ್ಜಯ್ಯ ಸ್ವಾಮಿಗೆ ಮಹಾ ರುದ್ರಾಭಿಷೇಕ

ಲೇಬರ್ ಕಾಲೋನಿಯ ಶ್ರೀ ಕರಿಬಸಜ್ಜಯ್ಯ ದೇವಸ್ಥಾನದಲ್ಲಿ ಇಂದು ಬೆಳಿಗ್ಗೆ 7.30ಕ್ಕೆ ಕಡೆ ಶ್ರಾವಣ ನಿಮಿತ್ತ ಸ್ವಾಮಿಗೆ ಮಹಾ ರುದ್ರಾಭಿಷೇಕ, ಮಹಾ ಮಂಗಳಾರತಿ ಹಾಗೂ ಪ್ರಸಾದ ವಿನಿಯೋಗ ಕಾರ್ಯಕ್ರಮ ನಡೆಯಲಿದೆ ಎಂದು ದೇವಸ್ಥಾನದ ಸೇವಾ ಸಮಿತಿ ಅಧ್ಯಕ್ಷ ಲೋಕೇಶಪ್ಪ ತಿಳಿಸಿದ್ದಾರೆ.

# ಮಕ್ಕಳಲ್ಲಿ ದೇಶಾಭಿಮಾನ ಮೂಡಿಸುವ ಕಾರ್ಯ ಶಿಕ್ಷಕರಿಂದಾಗಲಿ

ಹರಿಹರ, ಆ.25- ಮಕ್ಕಳಿಗೆ ಬಾಲ್ಯದಲ್ಲಿಯೇ ದೇಶಾಭಿಮಾನ ಮೂಡಿಸುವ ಕಾರ್ಯವು ಶಿಕ್ಷಕರು ಮತ್ತು ಪಾಲಕರಿಂದ ಆಗಬೇಕಿದೆ ಎಂದು ನಿವೃತ್ತ ಯೋಧ ಕ್ಯಾಪ್ಟನ್ ಪ್ರಕಾಶ್ ಟಿ. ಲಮಾಣಿ ಸಲಹೆ ನೀಡಿದರು.

ನಗರದ ಗಾಂಧಿ ಮೈದಾನ ಕ್ರೀಡಾ ಇಲಾಖೆಯ ಸಂಕೀರ್ಣದ ಮುಂಭಾಗದ ಗ್ರಾಮ ದೇವತೆ ಎಗ್ ಫ್ರೈಡ್ ರೈಸ್ ಮತ್ತು ಚಿಕನ್ ಪಕೋಡ ವ್ಯಾಪಾರಸ್ಥರ ಸಂಘದಿಂದ ಆಯೋಜಿಸಿದ್ದ 78ನೇ ಸ್ವಾತಂತ್ರ ದಿನಾಚರಣೆ ಕಾರ್ಯಕ್ರಮದಲ್ಲಿ ಧ್ವಜಾರೋಹಣ ನೆರವೇರಿಸಿ ಅವರು ಮಾತನಾಡಿದರು.

17 ವರ್ಷಗಳ ಕಾಲ ಮಿಲಿಟರಿಯಲ್ಲಿ ಕೆಲಸ ಮಾಡಿದ ಆತ್ಮತೃಪ್ತಿ ನನಗಿದೆ. 2020ರಲ್ಲಿ ಲಡಾಖ್‌ನ ಗಡಿಯಲ್ಲಿ ಚೀನಾ ಮತ್ತು ಭಾರತೀಯ ಪಡೆಗಳು ಮುಖಾಮುಖಿ ಮತ್ತು ಚಕಮಕಿ ತೊಡಗಿದ ಸಂದರ್ಭದಲ್ಲಿ ಯೋಧರು ಹೋರಾಟ ಮಾಡಿದ ಕ್ಷಣ ನೆನಪಿಸಿಕೊಂಡ ಅವರು, ಬಲಿಷ್ಠ ಭಾರತ ನಿರ್ಮಾಣಕ್ಕೆ ಪ್ರತಿಯೊಬ್ಬ ಯುವಕರು ಯೋಧನಂತೆ ಕೆಲಸ ಮಾಡಬೇಕು ಎಂದರು.



ಹರಿಹರದ ಕಾರ್ಯಕ್ರಮದಲ್ಲಿ ಯೋಧ ಪ್ರಕಾಶ್ ಟಿ. ಲಮಾಣಿ ಸಲಹೆ

ಮಹಿಳೆಯರು ದೇಶ ಸೇವೆಯಲ್ಲಿ ತೊಡಗುವ ಮೂಲಕ ಭಾರತಾಂಬೆಯ ರಕ್ಷಣೆಗಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ. ಅದೇ ರೀತಿ ಮನೆಯಲ್ಲಿರುವ ಮಹಿಳೆಯರು ತಮ್ಮ ಮಕ್ಕಳಿಗೆ ದೇಶಾಭಿಮಾನ ಬೆಳೆಸುವ ಮೂಲಕ ದೇಶ ಸೇವೆ ಮಾಡಬೇಕಿದೆ ಎಂದು ಹೇಳಿದರು.

ಹಿರಿಯ ಪತ್ರಕರ್ತ ಶೇಖರಗೌಡ ಪಾಟೀಲ್ ಮಾತನಾಡಿ, ಅನೇಕರ ಬಲಿದಾನ ಮತ್ತು ಹೋರಾಟದ ಮೂಲಕ ಪಡೆದ ಸ್ವಾತಂತ್ರ್ಯವನ್ನು ಇಂದು ಸಂತೋಷದಿಂದ ಆಚರಿಸುತ್ತಿದ್ದೇವೆ.

ಸ್ವಾತಂತ್ರ್ಯ ಹೋರಾಟಕ್ಕಾಗಿ ಶ್ರಮಿಸಿದವರನ್ನು ಸ್ಮರಿಸುವ ಕಾರ್ಯ ನಿರಂತರವಾಗಿ ನಡೆಯಬೇಕು. ಈ ಮೂಲಕ ಇಂದಿನ ಯುವ ಪೀಳಿಗೆಗೆ ದೇಶಾಭಿಮಾನ ಮೂಡಿಸಬೇಕಿದೆ ಎಂದರು.

ಪತ್ರಕರ್ತ ಜಿ.ಕೆ ಪಂಚಾಕ್ಷರಿ ಮಾತನಾಡಿ, ಫುಟ್ಪಾತ್ ವ್ಯಾಪಾರಿಗಳು ತಾವು ತಯಾರಿಸುವ ಆಹಾರದಲ್ಲಿ ಯಾವುದೇ ರೀತಿ ಆರೋಗ್ಯದ ಮೇಲೆ ಪರಿಣಾಮ ಬೀರುವಂತಹ ಟೆಸ್ಟಿಂಗ್ ಪೌಡರ್ ಬಳಸಬಾರದು.

ಈಗಾಗಲೇ ಸರ್ಕಾರವು ಕಲರ್ ಮೇಸ್ಟ್ರಿಟ್ಟ ಟೆಸ್ಟಿಂಗ್ ಪೌಡರ್ ಬಳಸಿದಂತೆ ಆದೇಶ ಮಾಡಿದ್ದು, ಸರ್ಕಾರದ ಆದೇಶವನ್ನು ಕಟ್ಟು ನಿಟ್ಟಾಗಿ ಪಾಲಿಸಿ, ಜನರ ಆರೋಗ್ಯ ಕಾಪಾಡುವ ಜವಾಬ್ದಾರಿ ನಿಮ್ಮ ಮೇಲಿದೆ ಎಂದರು.

ಇದೇ ವೇಳೆ ನಿವೃತ್ತ ಯೋಧ ಪ್ರಕಾಶ್ ಟಿ. ಲಮಾಣಿ ಹಾಗೂ ಅಗ್ನಿಶಾಮಕ ದಳದ ಪ್ರಭಾರಿ ಪಿಎಸ್‌ಐ ಸಂಜೀವಪ್ಪ ಅವರನ್ನು ಸಂಘದ ಸದಸ್ಯರಿಂದ ಸನ್ಮಾನಿಸಲಾಯಿತು.

ಈ ಸಂದರ್ಭದಲ್ಲಿ ಆಕಾರ್ ಆರ್ಟ್ಸ್ ಅಧ್ಯಕ್ಷ ರಾಮು, ಫುಟ್ಪಾತ್ ವ್ಯಾಪಾರಿಗಳಾದ ಕೆ. ರಘು, ರಾಘವೇಂದ್ರ ಐರಣಿ, ಹನುಮಂತಪ್ಪ ಕೆಂಚಗುಂಡಿ, ಅಲ್ತಾಫ್, ಈಶ್ವರ್, ರಮೇಶ್ ಭಂಡಾರಿ, ಕೃಷ್ಣಪ್ಪ ಐರಣಿ, ವಿಕ್ಕಿ, ಗುಡ್ಡಪ್ಪ, ಶ್ರೀನಿವಾಸ್ ಚಾಕ್ಳಿ, ಅಕ್ಕಮ್ಮ ರಮೇಶ್ ಹಿಂಡಿ ಇತರರಿದ್ದರು.



# ವೆಂಕಟೇಶ್ವರ ಸ್ವಾಮಿಯ ಕಲ್ಯಾಣ ಮಹೋತ್ಸವ

**ಹರಿಹರ**

ಹರಿಹರ, ಆ. 25 - ನಗರದ ಹೊಸಭರಂಪುರ ಬಡಾವಣೆಯ ಶ್ರೀ 108 ಲಿಂಗೇಶ್ವರ ದೇವಸ್ಥಾನ ಹಿಂಬದಿಯಲ್ಲಿರುವ ಶ್ರೀ ಲಕ್ಷ್ಮಿ ವೆಂಕಟೇಶ್ವರ ದೇವಸ್ಥಾನದಲ್ಲಿ ವೆಂಕಟೇಶ್ವರ ಸ್ವಾಮಿಯ ಕಲ್ಯಾಣ ಮಹೋತ್ಸವ ಅಂಗವಾಗಿ ಬೆಳಗ್ಗೆ ಲಕ್ಷ್ಮಿ ವೆಂಕಟೇಶ್ವರ ಸ್ವಾಮಿಗೆ ಅಭಿಷೇಕ, ಅಲಂಕಾರ, ಹೋಮ, ಹವನ, ಪೂರ್ಣಾವುತಿ ಕಲ್ಯಾಣೋತ್ಸವದ ನಂತರ ರಥೋತ್ಸವ ಮಹಾಮಂಗಳಾರತಿ ಪ್ರಸಾದ ವಿನಿಯೋಗ ನಡೆಯಿತು. ಶ್ರೀ ರಾಘವೇಂದ್ರ ಸ್ವಾಮಿ ಮಠದ ಪ್ರಧಾನ ಅರ್ಚಕ ವರಹಾಚಾರ್, ಲಕ್ಷ್ಮಿ ವೆಂಕಟೇಶ್ವರ ದೇವಸ್ಥಾನ ಸಮಿತಿಯ ಮುಖಂಡ ವೈ ಲಕ್ಷ್ಮಣ ರವರ ನೇತೃತ್ವದಲ್ಲಿ ನಡೆದ ಹೋಮ, ಹವನ, ಪೂಜೆಯನ್ನು ಆರೋಗ್ಯ ಇಲಾಖೆ ಶಿರಸ್ತೇದಾರ ಶಿವಕುಮಾರ್ ರೂಪಾ ಹಾಗೂ ವರ್ತಕ ಗಿರೀಶ್ ಮೀನಾ ಭೂತೆ ದಂಪತಿಗಳು ಹೋಮ, ಹವನ, ಪೂಜೆಯನ್ನು ನೆರವೇರಿಸಿದರು.

# ಕಾರ್ಮಿಕರಲ್ಲಿ ಕಾಕಾ ಪಾಟೀಲ - ಮಹದೇವಪ್ಪ ಭೇದ ಸರಿಯೇ ?

## ಸೆಸ್ ವಸೂಲಿ ಮಾಡಿ ಅಸಂಘಟಿತ ಕಾರ್ಮಿಕರನ್ನು ವಿಭಜಿಸುತ್ತಿರುವ ಸರ್ಕಾರ

'ಕಾಕಾ ಪಾಟೀಲ ನಿನಗೂ ಫ್ರೀ ಮಹಾದೇವಪ್ಪ ನಿನಗೂ ಫ್ರೀ' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಆಡಿದ ಮಾತುಗಳು ಕಳೆದ ವರ್ಷ ವಿಧಾನಸಭಾ ಚುನಾವಣಾ ಪ್ರಚಾರದ ವೇಳೆ ಹಾಗೂ ಚುನಾವಣೆಯ ನಂತರವೂ ಜನರ ಬಾಯಲ್ಲಿ ನಲಿದಾಡುತ್ತಿದ್ದವು. ಐಎಎಸ್ ಅಧಿಕಾರಿಯಾಗಿ ರಲಿ ಬಡ ಮಹಿಳೆಯೇ ಆಗಿರಲಿ ಸರ್ಕಾರಿ ಬಸ್‌ನಲ್ಲಿ ಉಚಿತವಾಗಿ ಪ್ರಯಾಣ ಮಾಡಲು ಅವಕಾಶ ಕಲ್ಪಿಸಲಾಗಿದೆ. ಈ ರೀತಿಯ ಕೆಲ ಗ್ಯಾರಂಟಿ ಯೋಜನೆಗಳನ್ನು ಎಪಿಎಲ್ - ಬಿಪಿಎಲ್ ಭೇದವಿಲ್ಲದೆ ಕೊಡಲಾಗುತ್ತಿದೆ.

ಇಂತಹ ಸರ್ವ ವ್ಯಾಪಿ ಸರ್ವಸ್ಪರ್ಶಿ ಯೋಜನೆಗಳನ್ನು ಜಾರಿಗೆ ತರುತ್ತಿರುವ ಕಾಲದಲ್ಲಿ ಅಸಂಘಟಿತ ಕಾರ್ಮಿಕರಿಗೆ ಮಾತ್ರ ಭೇದ ಮಾಡಲು ಸರ್ಕಾರ ಮುಂದಾಗಿರುವುದು ಸರಿಯೇ ? ಎಂಬ ಪ್ರಶ್ನೆ ಮೂಡುತ್ತದೆ.

ಕಟ್ಟಡ ಕಾರ್ಮಿಕರು ಅಸಂಘಟಿತ ವಲಯಕ್ಕೆ ಸೇರಿದವರಾಗಿದ್ದರೂ ಸಹ ಅವರಿಗಾಗಿ ಪ್ರತ್ಯೇಕ ಮಂಡಳಿ ರಚಿಸಿ, ಕೆಲ ಹೆಚ್ಚುವರಿ ಸೌಲಭ್ಯಗಳನ್ನು ನೀಡಲಾಗುತ್ತಿದೆ. ಇದರ ಮುಂದುವರೆದ ಭಾಗವಾಗಿ ಚಲನಚಿತ್ರ ಹಾಗೂ ರಂಗಭೂಮಿ ಮತ್ತಿತರ ಕಲಾವಿದರಿಗೆ ಹೆಚ್ಚುವರಿ ಸೌಲಭ್ಯ ಕಲ್ಪಿಸುವ ಪ್ರಸ್ತಾವನೆ ಇದೆ. ಗಿಗ್ ಕಾರ್ಮಿಕರಿಗೂ ಸೌಲಭ್ಯಗಳನ್ನು ವಿಸ್ತರಿಸಲು ಯೋಜಿಸಲಾಗುತ್ತಿದೆ. ಈ ಕುರಿತ ಕರಡು ಮಸೂದೆಯನ್ನು ರೂಪಿಸಲಾಗಿದೆ.



ಎಲ್ಲಾ ಕಾರ್ಮಿಕರಿಗೂ ಗೌರವಯುತವಾಗಿ ಬದುಕಲು ಸಾಧ್ಯವಾಗುವಂತಹ ಸೌಲಭ್ಯಗಳನ್ನು ಕಲ್ಪಿಸಲು ಸರ್ಕಾರಗಳು ಮುಂದಾಗ ಬೇಕಿದೆ. ಉನ್ನತ ಹುದ್ದೆಯಲ್ಲಿರುವವರು ಹಾಗೂ ಹೆಚ್ಚಿನ ಆದಾಯ ಹೊಂದಿರುವವರು ಮಹಿಳೆಯರೆಂಬ ಕಾರಣಕ್ಕಾಗಿ ಉಚಿತ ಪ್ರಯಾಣದ ಸೌಲಭ್ಯ ನೀಡಲು ಸರ್ಕಾರಕ್ಕೆ ಸಾಧ್ಯವಾಗಬಹುದಾದರೆ, ಗೃಹಿಣಿಯರಿಗೆ ತಿಂಗಳಿಗೆ 2000 ರೂ. ಕೊಡಲು ಸಾಮರ್ಥ್ಯ ಇರಬೇಕಾದರೆ ಅಸಂಘಟಿತ ವಲಯದ ಕಾರ್ಮಿಕರಿಗೆ ಸೌಲಭ್ಯ ನಿರಾಕರಿಸುವುದು ಸರಿಯೇ?

ಈ ವಲಯದ ಸಂಬಂಧಿಸಿದವರಿಂದ ಸೆಸ್ ವಸೂಲಿ ಮಾಡಲು ವ್ಯವಸ್ಥೆ ಮಾಡಲಾಗಿದ್ದು, ಈ ಸೆಸ್ ಮೂಲಕ ಕಾರ್ಮಿಕರಿಗೆ ಹೆಚ್ಚಿನ ಸೌಲಭ್ಯ ಕಲ್ಪಿಸಲಾಗುತ್ತಿದೆ. ಆದರೆ, ಅಸಂಘಟಿತ ವಲಯದ ಬಡವರಲ್ಲಿ ಭೇದ ಮಾಡುವುದು ಎಷ್ಟರಮಟ್ಟಿಗೆ ಸರಿ.

ಇತ್ತೀಚೆಗಷ್ಟೇ ಸುಪ್ರೀಂ ಕೋರ್ಟ್ ಒಳ ಮೀಸಲಾತಿ ಪರ ತೀರ್ಪೊಂದನ್ನು ನೀಡಿತ್ತು. ಪರಿಶಿಷ್ಟ ಜಾತಿ ಹಾಗೂ ಪಂಗಡಗಳಲ್ಲಿ ಭೇದ ಮಾಡಬಾರದು ಎಂದು ಸಮಾಜದ ಒಂದು ವರ್ಗ ಆಕ್ಷೇಪಿಸಿದೆ. ಈ ತೀರ್ಪಿನ ವಿರುದ್ಧ ಕೆಲ ಸಂಘಟನೆಗಳು ಭಾರತ ಬಂದ್‌ಗೂ ಕರೆ ನೀಡಿದ್ದವು.

ಇಂತಹ ಸಂದರ್ಭದಲ್ಲಿ ಅತ್ಯಂತ ಕಡು ಬಡವರಾಗಿರುವ ಅಸಂಘಟಿತ ಕಾರ್ಮಿಕರನ್ನು ಬೇರೆ ಬೇರೆಯಾಗಿ ನೋಡುವುದು ನ್ಯಾಯೋಚಿ ತವೇ? ಅಲ್ಲದೆ ಕಟ್ಟಡ ಕಾರ್ಮಿಕರೆಂದು ಗುರುತಿಸಿಕೊಂಡಲ್ಲಿ ಹೆಚ್ಚುವರಿ ಸೌಲಭ್ಯಗಳು ಸಿಗುವ ಕಾರಣ ಇತರೆ ವಲಯಗಳ ಸಾಕಷ್ಟು ಕಾರ್ಮಿಕರು ನಾವೂ ಸಹ ಕಟ್ಟಡ ಕಾರ್ಮಿಕರು ಎಂದು ನೋಂದಾಯಿಸಿ ಕೊಂಡಿದ್ದಾರೆ. ಇವರಲ್ಲಿ ನಿಜವಾದ ಕಟ್ಟಡ ಕಾರ್ಮಿಕರು ಯಾರು ಎಂಬುದನ್ನು ಪತ್ತೆ ಮಾಡಲು ಕಾರ್ಮಿಕ ಇಲಾಖೆಯ ಅಧಿಕಾರಿಗಳು ಗೂಢಚಾರಿಕೆಯ ರೀತಿಯಲ್ಲಿ ಪರಿಶೀಲನೆ ನಡೆಸಬೇಕಾಗಿ ಬಂದಿರುವುದು ವಿಪರ್ಯಾಸ.

ಸರ್ಕಾರ ಕಲಾವಿದರು ಮತ್ತು ಗಿಗ್ ಕಾರ್ಮಿಕರಿಗೆ ಮಂಡಳಿಗಳನ್ನು ಸ್ಥಾಪಿಸಲು ಮುಂದಾದಲ್ಲಿ, ಇತರೆ ವರ್ಗದವರೂ ಸಹ ತಮಗೂ ಮಂಡಳಿ ಬೇಕು ಎಂಬ ಬೇಡಿಕೆ ಮುಂದಿಡುವ ಸಾಧ್ಯತೆ ಇದೆ. ಇಂತಹ ಮಂಡಳಿಗಳನ್ನು ರಚಿಸುತ್ತಾ ಹೋದಲ್ಲಿ ಒಂದಿಷ್ಟು ಅಧಿಕಾರಿಗಳಿಗೆ ಕೆಲಸ ಹಾಗೂ ಇನ್ನೊಂದಿಷ್ಟು ರಾಜಕಾರಣಿಗಳಿಗೆ ಗಂಜಿ ಕೇಂದ್ರದ ಆಶಯ ಆಗಬಹುದು.

ಇಷ್ಟೆಲ್ಲಾ ಪುರಾಣಗಳನ್ನು ಮಾಡುವ ಬದಲು ಎಲ್ಲಾ ಕಾರ್ಮಿಕರಿಗೂ ಗೌರವಯುತ ವಾಗಿ ಬದುಕಲು ಸಾಧ್ಯವಾಗುವಂತಹ ಸೌಲಭ್ಯ ಗಳನ್ನು ಕಲ್ಪಿಸಲು ಸರ್ಕಾರಗಳು ಮುಂದಾಗ ಬೇಕಿದೆ. ಉನ್ನತ ಹುದ್ದೆಯಲ್ಲಿರು ವವರು ಹಾಗೂ ಹೆಚ್ಚಿನ ಆದಾಯ ಹೊಂದಿರು ವವರು ಮಹಿಳೆ ಎಂಬ ಕಾರಣಕ್ಕಾಗಿ ಉಚಿತ ಪ್ರಯಾಣದ ಸೌಲಭ್ಯ ನೀಡಲು ಸರ್ಕಾರಕ್ಕೆ ಸಾಧ್ಯವಾಗಬಹು ದಾದರೆ, ಗೃಹಿಣಿಯರಿಗೆ ತಿಂಗಳಿಗೆ 2000 ರೂ. ಕೊಡಲು ಸಾಮರ್ಥ್ಯ ಇರಬೇಕಾದರೆ ಅಸಂಘಟಿತ ವಲಯದ ಕಾರ್ಮಿಕರಿಗೆ ಸೌಲಭ್ಯ ನಿರಾಕರಿಸುವುದು ಸರಿಯೇ?

ಸೆಸ್ ಲಭ್ಯವಿರುವ ವಲಯಗಳಿಗೆ ಒಂದು ಸೌಲಭ್ಯ ಇರುವವರಿಗೆ ಮತ್ತೊಂದು ಸೌಲಭ್ಯ ಎಂದು ಹೇಳಿದರೆ ಸರ್ಕಾರವೇ ಒಂದು ಕಣ್ಣಿಗೆ ಬೆಣ್ಣೆ ಒಂದು ಕಣ್ಣಿಗೆ ಸುಣ್ಣ ಎಂಬ ನೀತಿ ಪಾಲಿಸಿ ದಂತಾಗುತ್ತದೆ. ಸಂವಿಧಾನದ ಆಶಯಗಳನ್ನು ಕಡೆಗಣಿಸಿದಂತಾಗುತ್ತದೆ.

ಗ್ಯಾರಂಟಿ ಸೌಲಭ್ಯಗಳನ್ನು ವಿತರಿಸುವಾಗ ಕಾಕಾ ಪಾಟೀಲ ಹಾಗೂ ಮಹದೇವಪ್ಪ ಒಂದೇ ತಟ್ಟೆಯಲ್ಲಿ ಇಟ್ಟು ತೂಗಬಹುದಾದರೆ, ಅಸಂಘಟಿತ ಕಾರ್ಮಿಕರ ವಿಷಯ ಬಂದಾಗ ಕಾಕಾ ಪಾಟೀಲ್ ಹಾಗೂ ಮಹದೇವಪ್ಪ ನಡುವೆ ಭೇದ ಮಾಡುವುದು ಸರಿಯೇ?

**- ಬಿ.ಜಿ. ಪ್ರವೀಣ್ ಕುಮಾರ್**
ದಾವಣಗೆರೆ.

# ಗಂಗನರಸಿಯಲ್ಲಿ ಇಂದು

ಹರಿಹರ ತಾಲ್ಲೂಕಿನ ಗಂಗನರಸಿ ಗ್ರಾಮದ ಶ್ರೀ ಗೋಣಿ ಬಸವೇಶ್ವರ ಹೊರ ಮಠದಲ್ಲಿ ಕಡೇ ಸೋಮವಾರ ಪ್ರಯುಕ್ತ ವಿಶೇಷ ಕಾರ್ಯಕ್ರಮಗಳು ನಡೆಯಲಿವೆ. ಬೆಳಿಗ್ಗೆ 11 ಗಂಟೆಗೆ ಶ್ರೀ ಗೋಣಿ ಬಸವೇಶ್ವರ ಹಾಗೂ ನಾಗದೇವತಾ ಸ್ವಾಮಿಗಳಿಗೆ ವಿಶೇಷ ಪೂಜೆ, ಅಭಿಷೇಕ, ಮಹಾಮಂಗಳಾರತಿ ನಡೆಯುವುದು. ನಂತರ 11.30 ಕ್ಕೆ ಮಹಾ ಪ್ರಸಾದ ಸೇವೆ ಜರುಗುವುದು. ಹರಿಹರ ತಾ. ದೀಟೂರು ಗ್ರಾಮದ ನಿವೃತ್ತ ಉಪ ಕುಲಪತಿ ಡಾ. ಹೆಚ್. ಮಹೇಶ್ವರಪ್ಪ, ಮಕ್ಕಳು ಹಾಗೂ ಸಹೋದರರು ಪ್ರಸಾದ ವ್ಯವಸ್ಥೆ ಏರ್ಪಡಿಸಿದ್ದಾರೆ. ಶ್ರೀ ಗೋಣಿ ಬಸವೇಶ್ವರ ಸ್ವಾಮಿ ಹೊರಮಠ ಹಾಗೂ ಶ್ರೀ ಹನುಮಂತ ದೇವರ ಜೀರ್ಣೋದ್ಧಾರ ಸಮಿತಿ ಆಶ್ರಯ ದಲ್ಲಿ ಕಾರ್ಯಕ್ರಮಗಳು ನಡೆಯಲಿವೆ.

# ನಗರದಲ್ಲಿ ಇಂದು ಶ್ರೀ ಕೃಷ್ಣ ಜಯಂತಿ

ಜಿಲ್ಲಾ ಡಳಿತದ ವತಿಯಿಂದ ಇಂದು ಬೆಳಗ್ಗೆ 11ಕ್ಕೆ ಜಿಲ್ಲಾಡಳಿತ ಭವನ ದಲ್ಲಿ ಶ್ರೀಕೃಷ್ಣ ಜಯಂತಿ ಆಯೋ ಜಿಸಲಾಗಿದೆ ಎಂದು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕ ರವಿಚಂದ್ರ ತಿಳಿಸಿದ್ದಾರೆ.

**ಘನ 2ನೇ ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಧೀಶರು ಮತ್ತು ಜೆಎಂಎಫ್‌ಸಿ ನ್ಯಾಯಾಲಯ, ದಾವಣಗೆರೆ.**

**ಆರ್.ಎ. ನಂ.1/2024**

**ಅಪೀಲುದಾರರು :** ಜಿ.ಡಿ. ಮಾನವಿ ಮತ್ತು ಒಬ್ಬರು ವಿರುದ್ಧ
**ಎದುರುದಾರರು :** ಆರ್. ಕಾಶೀನಾಥ್ ಮತ್ತು ಒಬ್ಬರು

1ನೇ ಎದುರದಾರ ಆರ್. ಕಾಶೀನಾಥ್ ಬಿನ್ ರಾಮದಾಸ್, ವಯಸ್ಸು 71 ವರ್ಷ, #2074/9, ಈಶ್ವರ ಕೃಪ, 2ನೇ ಕ್ರಾಸ್ ಎಂ.ಸಿ.ಸಿ. 'ಎ' ಬ್ಲಾಕ್ ಚರ್ಚ್ ರಸ್ತೆ, ಗಾಯತ್ರಿ ಹೋಟೆಲ್ ಎದುರು, ದಾವಣಗೆರೆ - 577002

**ಮೂಲ ಅಪೀಲ್ ನೋಟೀಸ್ 1ನೇ ಎದುರುದಾರನಿಗೆ ಸಾರ್ವಜನಿಕ ಪ್ರಕಟಣೆ ಮೂಲಕ**

ಮೇಲ್ಕಂಡ ನ್ಯಾಯಾಲಯದಿಂದ ಅಪೀಲುದಾರನ ಪರ ನಿಮಗೆ ನೋಟೀಸ್ ನ್ಯಾಯಾಲಯದ ಮೂಲಕ ಮತ್ತು ನೋಂದಾಯಿತ ಅಂಚೆ ಮೂಲಕ ಕಳುಹಿಸಿದಾಗ್ಯೂ ಜಾರಿಯಾಗದ ಕಾರಣ ಈ ಸಾರ್ವಜನಿಕ ಪ್ರಕಟಣೆ ಮೂಲಕ ತಿಳಿಸುವುದೇನೆಂದರೆ, ನೀವಾಗಲೀ ಅಥವಾ ನಿಮ್ಮ ವಕೀಲರ ಮೂಲಕವಾಗಲೀ 24.09.2024ರಂದು 11.00 ಗಂಟೆಗೆ ಹಾಜರಾಗಿ ತಕರಾರು ಸಲ್ಲಿಸುವುದು. ತಪ್ಪಿದಲ್ಲಿ ನಿಮ್ಮ ಗೈರು ಹಾಜರಾತಿಯಲ್ಲಿ ಮೇಲ್ಕಂಡ ಅಪೀಲನ್ನು ಸೂಕ್ತ ಕಂಡ ರೀತಿಯಲ್ಲಿ ವಿಲೇಪಡಿಸಲಾಗುವುದು ತಿಳಿಯಿರಿ.

ಈ ನೋಟೀಸನ್ನು ದಿನಾಂಕ 14.08.2024ರಂದು ಈ ನ್ಯಾಯಾಲಯದ ಮೊಹರು ಮತ್ತು ದಸ್ಕತ್ತಿನೊಂದಿಗೆ ನೀಡಲಾಯಿತು.

**ಡಾ. ರೇವಣ್ಣ ಬಳ್ಳಾರಿ**
ಎಂ.ಎ., ಎಲ್.ಎಲ್.ಬಿ., ಸಿ.ಸಿ.ಲಾ,
ನ್ಯಾಯವಾದಿ, 421, ವಾಲಿ ಬಿಲ್ಡಿಂಗ್,
ಲಾಯರ್ ರಸ್ತೆ, ಕೆ.ಬಿ. ಬಡಾವಣೆ,
ದಾವಣಗೆರೆ -577002,
**ಮೊ. ನಂ. : 94483 39322, 96323 22652**

ನ್ಯಾಯಾಲಯದ ಆದೇಶದ ಮೇರೆಗೆ
**ಮುಖ್ಯ ಲಿಪಿಕ ಅಧಿಕಾರಿ,**
ಕೌಟುಂಬಿಕ ನ್ಯಾಯಾಲಯ,
ದಾವಣಗೆರೆ

# 'ಕೃಷ್ಣ' ಎಂಬ ಒಂದು ಭವ್ಯ ಶಕ್ತಿ



"ಧರ್ಮ ಸಂಸ್ಥಾಪನಾರ್ಥಾಯ ಸಂಭವಾಮಿ ಯುಗೇಯುಗೇ" ಎಂದು ಹೇಳಿರುವ ಕೃಷ್ಣ, ಅಧರ್ಮಿಗಳನ್ನು ಒಬ್ಬೊಬ್ಬರನ್ನಾಗಿ ಕೊಲ್ಲುತ್ತಾನೆ. ಪ್ರತಿಯೊಂಬ್ಬ ರಾಕ್ಷಸನನ್ನು ಕೊಲ್ಲುವಾಗಲೂ ತನ್ನ ಅಚಿಂತ್ಯ ಶಕ್ತಿಗಳ ಪ್ರದರ್ಶನವನ್ನು ಮಾಡುತ್ತಾನೆ. ಕೊಕ್ಕರೆಯಂತೆ ಬಂದವನ ಕೊಕ್ಕು ಹಿಡಿದು ಸೀಳಿದರೆ, ಬಿರುಗಾಳಿಯಂತೆ ಬಂದವನಿಗೆ ಅತ್ಯಂತ ಭಾರವಾಗಿ ಬೀಳಿಸುತ್ತಾನೆ. ತನ್ನ ಪುಟ್ಟ ಕಾಲಲ್ಲಿ ಒದ್ದು ಬಂಡಿಯನ್ನೇ ಪುಡಿ ಪುಡಿ ಮಾಡುತ್ತಾನೆ. ಇವೆಲ್ಲಾ ಆ ಪರಮಾತ್ಮನಲ್ಲಿರುವಂತಹ ಅಣಿಮಾದಿ ಅಷ್ಟ ಸಿದ್ಧಿಗಳ ಪ್ರದರ್ಶನ ಎಂದರೆ ತಪ್ಪಾಗಲಾರದು. ದುಷ್ಟ ಬುದ್ಧಿಯನ್ನು ಬಿಡಿ, ಇಲ್ಲದಿದ್ದರೆ ನೀವು ಸರ್ವನಾಶವಾಗುತ್ತೀರಾ ಎಂಬ ವಿಶಿಷ್ಟವಾದಂತಹ ತತ್ವವನ್ನು ತನ್ನ ಈ ಕಾರ್ಯಗಳಿಂದ ತೋರಿಸಿದ್ದಾನೆ.

**ಇಂದು ಶ್ರೀ ಕೃಷ್ಣ ಜನ್ಮಾಷ್ಟಮಿ**

ಪರಮಾತ್ಮ ಎಂದೇ ಕರೆಸಿಕೊಳ್ಳುವ ಆ ಶ್ರೀ ಕೃಷ್ಣ ಪರಮಾತ್ಮ ಭಗವದ್ಗೀತೆಯಲ್ಲಿ 15ನೇ ಅಧ್ಯಾಯ ಪುರುಷೋತ್ತಮ ಯೋಗದಲ್ಲಿ , ಎರಡು ರೀತಿಯ ಜೀವಿಗಳನ್ನು ಪರಿಚಯಿಸುತ್ತಾನೆ. ಕ್ಷರ ಮತ್ತು ಅಕ್ಷರ. ಕ್ಷರ ಎಂದರೆ ನಾಶವಾಗುವ ಜೀವಿಗಳು ಎಂದರೆ ನಮ್ಮ ದೇಹ ಈ ಮಣ್ಣು ನೀರು ಮತ್ತು ಬೆಂಕಿಯಿಂದ ಆಗಿರುವಂತಹ ಎಲ್ಲ ಪದಾರ್ಥಗಳು ನಾಶ ಹೊಂದುತ್ತವೆ. ಅಕ್ಷರ ಎಂದರೆ ನಾಶವಾಗದ ಆತ್ಮ ಸ್ವರೂಪ. ಇವೆರಡನ್ನು ವಿವರಿಸಿದ ನಂತರ ತಾನು ಕ್ಷರ ಮತ್ತು ಅಕ್ಷರ ಎರಡಕ್ಕೂ ಮೀರಿದಂತಹವನು. ಪರಮಾತ್ಮ ಎಂದು ಹೇಳಿಕೊಳ್ಳುತ್ತಾನೆ. ಎಲ್ಲ ವೇದಗಳು ತನ್ನನ್ನೇ ಕೊಂಡಾಡುವುದು. ತಾನು ಸೃಷ್ಟಿ, ಸ್ಥಿತಿ, ಲಯಗಳಿಗೆ ಕಾರಣಕರ್ತನು ಮತ್ತು ತಾನು ಸೃಷ್ಟಿಸಿದ ಪ್ರಪಂಚದೊಳಗೆ ವ್ಯಾಪ್ತನಾಗಿ ಅದಕ್ಕೆ ಚೈತನ್ಯವನ್ನು ತುಂಬುವಂತಹ ಶಕ್ತಿ ಎಂದು ಹೇಳಿಕೊಳ್ಳುತ್ತಾನೆ .

ವೈಜ್ಞಾನಿಕವಾಗಿ ನಾವು ನೋಡಿದಾಗ ಕೃಷ್ಣ ಅಥವಾ ಪರಮಾತ್ಮ ಎಂದರೆ ಎಲ್ಲವನ್ನೂ ಮಾಡುವ ಸಾಮರ್ಥ್ಯವಿರುವ ಶಕ್ತಿ. ನಾವು ಇದನ್ನು ನಮ್ಮ ವಿದ್ಯುತ್‌ಗೆ ಹೋಲಿಸಿಕೊಳ್ಳಬಹುದು. ಒಂದು ವಿದ್ಯುತ್ತಿನಿಂದ ಚಲಿಸುವ ಯಂತ್ರ ಯಾವುದೇ ಇರಲಿ, ವಿದ್ಯುತ್ ಇಲ್ಲದಿರುವಾಗ ಅದು ನಿಶ್ಚೇತನವಾಗಿ ಜಡವಾಗಿ ನಿಂತಿರುತ್ತದೆ, ಯಾವಾಗ ಅದರಲ್ಲಿ ವಿದ್ಯುತ್ ಶಕ್ತಿ ಚಾಲನೆ ಆಗುತ್ತದೋ ಅದು ತಿರುಗುತ್ತದೆ ಮುಂದಕ್ಕೆ ಚಲಿಸುತ್ತದೆ ನಾವು ಊಹಿಸಲಿಕ್ಕಾಗದ ಎಲ್ಲವನ್ನು ಮಾಡುತ್ತದೆ. ಅದೇ ಆ ಶಕ್ತಿ ಅದರಿಂದ ಹೊರಬಂದಾಗ, ನಿಶ್ಶಕ್ತವಾಗಿ ನಿಂತುಬಿಡುತ್ತದೆ.

ನಮ್ಮ ದೇಹ ಆತ್ಮಶಕ್ತಿಯು ಹೊರಹೋದಾಗ, ನಿಶ್ಚೈತನ್ಯದಿಂದ ನಿಲ್ಲುವುದರ ಜೊತೆಗೆ, ಕೊಳೆತು ಹೋಗುತ್ತದೆ ಮತ್ತು ತಾನು ಸೃಷ್ಟಿಯಾಗಿರುವ ಮಣ್ಣಿನಲ್ಲಿ ಬೆರೆತು ಹೋಗುತ್ತದೆ. ನಾವು ವೈಜ್ಞಾನಿಕವಾಗಿ ನೋಡಿದರೆ ಕಾರ್ಬನ್ ಹೈಡ್ರೋಜನ್ ಮತ್ತು ಆಕ್ಸಿಜನ್ ಇವುಗಳ ಸೇರ್ಪಡೆಯಿಂದ ಎಲ್ಲಾ ದೇಹದೊಳಗಿನ ಪದಾರ್ಥಗಳ ಸೃಷ್ಟಿಯಾಗುತ್ತದೆ. ಕೊಳೆಯುವಾಗ ಇದು ಮತ್ತೆ ತನ್ನ ಮೂಲ ಸ್ಥಿತಿಗೆ ಎಂದರೆ ಕಾರ್ಬನ್ ಹೈಡ್ರೋಜನ್ ಆಕ್ಸಿಜನ್ ಆಗಿ ಬೇರ್ಪಟ್ಟು ಜಗತ್ತನ್ನು ಸೇರಿಬಿಡುತ್ತದೆ. ನಾವು ಸೃಷ್ಟಿ ಮಾಡಿರುವ ಪ್ಲಾಸ್ಟಿಕ್ ನಂತೆ ಪ್ರಕೃತಿಯ ನಾಶಕ್ಕೆ ಕಾರಣವಾಗದೆ, ಪ್ರಕೃತಿಯ ಪುನರ್ ಸೃಷ್ಟಿಗೆ ಚೈತನ್ಯಗಳಾಗಿ ಮರುಬಳಕೆ ಆಗುತ್ತದೆ.

ಪರಮಾತ್ಮನಾದ ಶ್ರೀ ಕೃಷ್ಣನು ಅಪ್ರಾಕೃತ ಎಂದು ಹೇಳುತ್ತಾರೆ. ಪ್ರಾಕೃತವಾದ ವಸ್ತು ಎಂದರೆ ಪ್ರಕೃತಿಯಿಂದ ಸೃಷ್ಟಿ ಯಾದದ್ದು ಎಂದರೆ ನಾವು ಮೊದಲೇ ಹೇಳಿದಂತೆ ಮಣ್ಣು ನೀರು ಬೆಂಕಿಯಿಂದ ಆಗುವಂತಹ ಪದಾರ್ಥಗಳು. ಪರಮಾತ್ಮ ಹೀಗೆ ಇಲ್ಲದಿರುವುದರಿಂದ, ಅವನಿಗೆ ದೇಹದ ಅಂಗಾಂಗಗಳು ಅದೇ ಕೆಲಸಗಳನ್ನು ಮಾಡಬೇಕೆಂದೇನಿಲ್ಲ, ಅವನು ಕಣ್ಣಿನಿಂದಲೇ ಕೊಲ್ಲಬಹುದು. ಕಿವಿಯಿಂದಲೇ ಉಣ್ಣಬಹುದು, ಇಂತಹ ಶಕ್ತಿಯನ್ನು ನಾವು ಪ್ರೀತಿಸಲು ಮುದ್ದಾಡಲು ಮನಸ್ಸಿನಲ್ಲಿ ಇಟ್ಟುಕೊಂಡು ಧ್ಯಾನಿಸಲು ಸಾಧ್ಯವೇ? ಕಣ್ಣಿನಿಂದ ನೋಡಲಾಗದ ಗಾಳಿಯನ್ನು ನಾವು ಹೇಗೆ ಹೃದಯಕ್ಕೆ ಹತ್ತಿರವಾಗಿಟ್ಟುಕೊಂಡು ಪೂಜಿಸುವುದು ಕಷ್ಟವೋ ಹಾಗೆ ಭಗವಂತನು ನಮ್ಮಿಂದ ಬಹಳ ದೂರವಾಗಿ ಬಿಡುತ್ತಾನೆ. ಆದರೆ, ಭಗವಂತ ಕೇವಲ ಹೊರಗಿನ ಪ್ರಪಂಚದಲ್ಲಿಲ್ಲ. ಪ್ರತಿಯೊಂದು ಜೀವಿಯ ಒಳಗಿದ್ದು ಅದರ ಎಲ್ಲ ಚಟುವಟಿಕೆಗಳಿಗೆ ಕಾರಣನಾಗಿದ್ದಾನೆ.

ಇಂತಹ ಪರಮಾತ್ಮನನ್ನು ನಾವು ಆರಾಧಿಸಲು ಸುಲಭವಾಗಲಿ ಎನ್ನುವ ಉದ್ದೇಶದಿಂದಲೇ ಅವನು ಸುಂದರವಾದ ಅವತಾರಗಳಲ್ಲಿ ಧರೆಗಿಳಿದು ಬಂದಿದ್ದಾನೆ. ಅನೇಕ ಲೀಲೆಗಳನ್ನು ಮಾಡಿ ಜನರ ಮನವನ್ನು ಸೂರೆಗೊಂಡಿದ್ದಾನೆ. ಅಂತಹ ಪರಮಾತ್ಮನ ಬಹಳ ವಿಶಿಷ್ಟವಾದ, ನಮಗೆ ಬಹಳ ಹತ್ತಿರವಾದ ಅವತಾರವೇ ಶ್ರೀ ಕೃಷ್ಣನ ಅವತಾರ.

ಈ ಅವತಾರದಲ್ಲಿ ಮುದ್ದಾದ ಮಗುವಾಗಿ ಬಂದು, ನಮ್ಮ ಅಂತರಂಗದಲ್ಲಿರುವ ವಾತ್ಸಲ್ಯ ಭಾವವನ್ನು ಉಕ್ಕಿಸುತ್ತಾನೆ, ನಾವು ನೋಡಿದ ಪ್ರತಿಯೊಂದು ಮಗುವಿನಲ್ಲೂ ತನ್ನ ರೂಪವನ್ನು ತೋರಿಸುತ್ತಾನೆ. ಪ್ರತಿ ತಾಯಿಗೂ ತನ್ನ ಮಗನು ಮುದ್ದುಕೃಷ್ಣನಲ್ಲವೇ? ಪ್ರತಿ ಅಜ್ಜಿಗೂ ತನ್ನ ಮೊಮ್ಮಗು ಸಾಕ್ಷಾತ್ ಕೃಷ್ಣನೆ ? ಅಲ್ಲವೇ? ತಂದೆ, ತಾತಂದಿರಿಗೂ ಕೂಡ ಆ ಮುದ್ದು ಮಗುವನ್ನು ಬಿಟ್ಟಿರಲು ಸಾಧ್ಯವೇ?

ತಾನು ಮಗುವಲ್ಲ ಭಗವಂತ ಎಂದು ತೋರಿಸಲು ಶಂಕಚಕ್ರ ಗಧಾ ಪದ್ಮವನ್ನು ಹಿಡಿದು ದೇವಕಿಯ ಮುಂದೆ ಪ್ರಾಧುರ್ಭಾವಾಗುತ್ತಾನೆ, ಎಲ್ಲ ಬೀಗಗಳನ್ನು ಒಡೆದು ರಾಕ್ಷಸರಿಗೆ ನಿದ್ದೆ ಬರಿಸಿ, ಯಮುನೆಯು ದಾರಿ ಬಿಡುವಂತೆ ಮಾಡಿ, ಪೂತನಿಯನ್ನು ಸಂಹರಿಸಿ , ಯಶೋಧೆಗೆ ಬಾಯಲ್ಲಿ ಬ್ರಹ್ಮಾಂಡವನ್ನೇ ತೋರಿಸುತ್ತಾನೆ.

ಆದರೂ ಮರುಕ್ಷಣವೇ ಆಕೆಯ ಮನದಲ್ಲಿ "ನನ್ನ ಮಗು ನನ್ನ ಮಗು" ಎಂಬ ಮಮಕಾರವನ್ನು ಹುಟ್ಟಿಸಿ, ಮಾಯಾ ಮೋಹದ ಪರದೆಯನ್ನು ಹಾಕುತ್ತಾನೆ .

ಹಂಚಿ ತಿನ್ನಿ ಎಂದು ತೋರಿಸಲೆಂದೇ ಬೆಣ್ಣೆಯನ್ನು ಕದಿಯುತ್ತಾನೆ, ಎಲ್ಲ ಗ್ವಾಲ ಬಾಲರಿಗೂ, ಹಂಚುತ್ತಾನೆ ಅಷ್ಟೇ ಅಲ್ಲ, ಅಲ್ಲಿದ್ದ ಪ್ರಾಣಿಗಳು, ಬೆಕ್ಕು, ನಾಯಿ ಮುಂತಾದವುಗಳಿಗೂ ಕೊಡುತ್ತಾನೆ. ನೀವೂ ಕೊಡಿ, ಸ್ವಾರ್ಥದಿಂದ ಎಲ್ಲ ನನಗೇ ಎಂದು ಕೂಡಿಟ್ಟರೆ, ಅದನ್ನು ಕದಿಯುತ್ತಾರೆ, ನಾಶ ಮಾಡುತ್ತಾರೆ ಎನ್ನುತ್ತಾನೆ.ಇಲ್ಲಿ ಬೆಣ್ಣೆ ಸಂಪತ್ತಿನ ಪ್ರತೀಕ.

ಭಗವಂತ ನಮ್ಮನ್ನು ಸದಾ ಪರೀಕ್ಷೆ ಮಾಡುತ್ತಿರುತ್ತಾನೆ. ನಿನಗೆ ನಾನು ಬೇಕೋ ಅಥವಾ ನಿನ್ನ ಇಂದ್ರಿಯಗಳನ್ನು ತೃಪ್ತಿಪಡಿಸುವ ವಸ್ತುಗಳು ಬೇಕೋ ಎಂದು! ಅಳುವ ಮಗುವಿಗೆ ಆಟದ ಸಾಮಾನನ್ನು ಕೊಟ್ಟರೆ, ಹೇಗೆ ತನ್ನ ತಾಯಿಯನ್ನು ಮರೆತು ಆಟದ ಸಾಮಾನಿನಲ್ಲಿ ಮುಳುಗಿ ಹೋಗುತ್ತದೋ! ಹಾಗೆಯೇ ಭಗವಂತನೇ ಬೇಕು ಎಂದು ಹಠ ಹಿಡಿದು ಬೇರೆ ಪದಾರ್ಥಗಳಿಂದ ನಮ್ಮ ಮನಸ್ಸನ್ನು ದೂರ ಮಾಡದಿದ್ದರೆ, ಮರೀಚಿಕೆಯಂತೆ ಪರಮಾತ್ಮ ಎಂದಿಗೂ ಸಿಗುವುದಿಲ್ಲ. ಕ್ಷಿತಿಜದಂತೆ ಹತ್ತಿರದಲ್ಲೇ ಇರುವಂತೆ ಭಾಸವಾದರೂ, ಬಹಳ ದೂರವಾಗಿ ಬಿಡುತ್ತಾನೆ. ಅವನನ್ನೇ ಧ್ಯಾನಿಸಿ, ಅಂತರಂಗದ ಕಣ್ಣನ್ನು ತೆಗೆದಾಗ ಮಾತ್ರ ಅವನನ್ನು ತಿಳಿದುಕೊಳ್ಳಬಹುದು, ಅವನನ್ನು ಕಾಣಬಹುದು ಆನಂದದ ಅತಿರೇಕಕ್ಕೆ ಏರಬಹುದು.

ಕಂಸನನ್ನು ಕೊಂದರೂ ಅವನು ಸಿಂಹಾಸನವನ್ನು ಏರಲಿಲ್ಲ! ತನ್ನ ತಾತನನ್ನು ರಾಜನನ್ನಾಗಿ ಮಾಡಿದ. ಧರ್ಮವನ್ನು ಸಂಸ್ಥಾಪಿಸಿದ. ಧರ್ಮಿಷ್ಠರಾದ ಧರ್ಮರಾಯನನ್ನು ಪೊರೆದ. ಅಧರ್ಮಿಗಳಾದ ದುರ್ಯೋಧನಾದಿಗಳನ್ನು ಸಂಹರಿಸಿದ. ನಾನು ಯಾವಾಗಲೂ ಧರ್ಮದ ಪಕ್ಷದಲ್ಲಿ ಇರುತ್ತೇನೆ ಎಂಬುದನ್ನು ಮತ್ತೆ ಮತ್ತೆ ಸಾರಿದ. ಆದ್ದರಿಂದ "ನೀವು ಸತ್ಯ ಧರ್ಮ ಮಾರ್ಗದಲ್ಲಿ ನಡೆಯಿರಿ. ನಾನು ನಿಮ್ಮ ಜೊತೆ ಇರುತ್ತೇನೆ ಜಯ ನಿಮ್ಮದಾಗುತ್ತದೆ" ಎಂದು ಹೇಳಿದ್ದಾನೆ.

ಪ್ರಕೃತಿಯನ್ನು ಪೂಜಿಸಿ ಸಂರಕ್ಷಿಸಿ ಎಂದು ಸಾರಲು ಗೋವರ್ಧನ ಗಿರಿಗೆ ಪೂಜೆಯನ್ನು ಮಾಡಿಸಿದ್ದಾನೆ.

"ನಿಮ್ಮ ಭಾರವನ್ನೆಲ್ಲ ನನಗೆ ಬಿಡಿ". ಎಂದು ಹೇಳಲು ಭಾರವಾದ ಗೋವರ್ಧನವನ್ನು ಎತ್ತಿ ಮಳೆಯಿಂದ ಸಂರಕ್ಷಿಸಿದ್ದಾನೆ. ಇಲ್ಲಿ ಮಳೆ ಕಷ್ಟಗಳ ಪ್ರತೀಕವಾದರೆ, ಗೋವರ್ಧನ ಗಿರಿ ಭಗವಂತನ ಆಶ್ರಯ, ಅದರ ಕೆಳಗೆ ನಿಂತಂತಹ ಗೊಲ್ಲರು, ಏಳು ದಿನ ಹಸಿವೆ ಬಾಯಾರಿಕೆ ರೋಗ ರುಜಿನ ಯಾವುದು ಇಲ್ಲದಂತೆ ಜೀವಿಸಿದರು ಎಂಬುದು ಮುಕ್ತಿಯ ಪ್ರತೀಕವಾಗಿದೆ. ಭಗವಂತನ ಆಶ್ರಯ ದೊರೆತರೆ, ಪ್ರಾಕೃತಿಕವಾಗಿ ಆಗುವಂತಹ ಯಾವ ಕಷ್ಟಗಳೂ ಆಗುವುದಿಲ್ಲ ಎಂಬ ತತ್ವ ಅದರಲ್ಲಿ ಅಡಗಿದೆ.

ವಿಷಪೂರಿತ ಮಡುವಿನಲ್ಲಿದ್ದ ಕಾಳಿಂಗನ ಮೇಲೆ ಕುಣಿದಂತಹ ಕೃಷ್ಣ, ನಮ್ಮ ಹೃದಯವೆಂಬ ಮಡುವಿನಲ್ಲಿ ಸೇರಿಕೊಂಡು ಅದನ್ನು ವಿಷಪೂರಿತವನ್ನಾಗಿ ಮಾಡುತ್ತಿರುವ ಅಹಂಕಾರವೆಂಬ ದುಷ್ಟ ಸರ್ಪದ ಮೇಲೆ ನಿಂತು ಕುಣಿಯಲಿ ನಮ್ಮ ಹೃದಯವನ್ನು ನಿಷ್ಕಲ್ಮಶವನ್ನಾಗಿ ಮಾಡಿಸಲಿ ಎಂಬ ಪ್ರಾರ್ಥನೆ ಕಳಿಂಗ ಮರ್ಧನ ಕೃಷ್ಣನ ಕಥೆಯಲ್ಲಿದೆ. ಭಗವಂತನ ರೂಪ ನಮ್ಮ ಅಂತರಂಗದ ಕನ್ನಡಿಗೆ ಕಾಣಿಸಬೇಕಾದರೆ, ಅದು ಪರಿಶುದ್ಧವಾಗಿ ಸ್ವಚ್ಛವಾಗಿರಬೇಕು, ಅಹಂಕಾರ, ಮಮಕಾರ ಎಂಬ ವಿಷ ಭಗವಂತನನ್ನು ಕಾಣಲು ಸಾಧ್ಯವಾಗದಂತೆ ಮಾಡಿಬಿಡುತ್ತದೆ. ಹೇಗೆ ಆ ವಿಷಪೂರಿತ ನೀರನ್ನು ಕುಡಿದು ಗೋವುಗಳೆಲ್ಲ ಮಡಿದವೋ, ಹಾಗೆ ನಾವು ಈ ಶರೀರದಲ್ಲಿ ಬಂದು ಯಾವ ಸಾಧನೆಯೂ ಇಲ್ಲದೆ ಮಡಿದು ಹುಟ್ಟು ಸಾವಿನ ಚಕ್ರದಲ್ಲಿ ಸಿಕ್ಕಿ ಹಾಕಿಕೊಳ್ಳುತ್ತೇವೆ. ಭಗವಂತನು ಅಹಂಕಾರವೆಂಬ ದರ್ಪದ ಸರ್ಪವನ್ನು ತುಳಿಯಲಿ ಎಂಬ ಪ್ರಾರ್ಥನೆ ಈ ಕಥೆಯಲ್ಲಿದೆ.

ಕಾಡುಕಿ ಚ್ಚನ್ನು ನುಂಗಿ ಆ ಕೃಷ್ಣ ಪರಮಾತ್ಮ, ಅಲ್ಲಿ, ಕಾಲಿಂದಿ ಮಡುವಿನ ಬಳಿ ಅವನನ್ನು ನೋಡಲು ಬಂದು ನಿದ್ರಿಸುತ್ತಿದ್ದ ತನ್ನ ಗೆಳೆಯರನ್ನೆಲ್ಲ ಕಾಪಾಡುತ್ತಾನೆ. ಇದು ಅವನು ಏನನ್ನು ಬೇಕಾದರೂ ತಿನ್ನುತ್ತಾನೆ ಎಂಬ ತತ್ವವನ್ನು ಸಾರುತ್ತದೆ. ಲಯಕರ್ತನಾದಾಗ ಪರಮಾತ್ಮ ಪ್ರಳಯ ಕಾಲದಲ್ಲಿ ತಾನು ಸೃಷ್ಟಿಸಿದ ಸರ್ವಸ್ವವನ್ನು ತಾನೇ ಭುಂಜಿಸುತ್ತಾನೆ. ಅವನಿಗೆ ಅಸಾಧ್ಯವಾವುದು? ಇಲ್ಲಿ ಬೆಂಕಿ ನಮ್ಮ ಬಳಿಗೇ ಬರಬೇಕೆಂದಿರುವಂತಹ ಕಷ್ಟಗಳ ಪ್ರತೀಕವಾಗಿದೆ, ಅದನ್ನು ನುಂಗಿ ಕಾಪಾಡುವವನು ಭಗವಂತ

ನಂತರ ಭಗವಂತನೇ ತನ್ನ ಪತಿ ಎಂದು ಸತಿ ಭಾವದಲ್ಲಿ ಭಕ್ತಿಯನ್ನು ಮಾಡುವಂತಹ ಎಲ್ಲ ಭಕ್ತರಿಗೂ ಪ್ರತೀಕಳಾದವಳು ರಾಧೆ. ಆ ರಾಧೆಯಂತೆ ಎಲ್ಲ ಗೋಪಿಕಾ ಸ್ತ್ರೀಯರು ಕೃಷ್ಣನನ್ನು ತಮ್ಮ ಪತಿ ಎಂದು ಭಾವಿಸಿ ಪೂಜಿಸುತ್ತಾರೆ. ನದಿಗಳೆಲ್ಲವೂ ಹರಿದು ಹೋಗುವುದು ಸಮುದ್ರವನ್ನು ಸೇರಲೆಂದು. ಹಾಗೆಯೇ ಭಗವಂತನ ಒಂದು ಪುಟ್ಟ ಅಂಶವಾ ದಂತಹ ನಾವೆಲ್ಲ ಆತ್ಮಗಳು ಕಡೆಗೆ ಸೇರಬೇಕಾಗಿ ರುವುದು ಆ ಪರಮಾತ್ಮನನ್ನೇ. ಆದ್ದರಿಂದ ರಾಧಾ ಕೃಷ್ಣರ ಪ್ರೀತಿ ಅದು ಆತ್ಮ ಪರಮಾತ್ಮರ ಮಿಲನ.

ಕೊಳಲನ್ನು ಕೃಷ್ಣ ಊದುತ್ತಿರುವಾಗ ಪ್ರತಿಯೊಂದು ಜೀವಿ, ಅಳಿಲಿರಬಹುದು ಹುಲಿ ಇರಬಹುದು ಸಿಂಹವಿರಬಹುದು ಅಥವಾ ಗೋಪಿಕೆಯರಿಬಹುದು, ಅಲುಗಾಡದಂತೆ ಏಕಾಗ್ರಚಿತ್ತದಿಂದ ಅವನ ಗಾನ ಸುಧೆದಲ್ಲಿ ತಲ್ಲೀನರಾಗಿರುತ್ತಾರೆ. ಅಲ್ಲಿ ಯಾವ ಜಗಳವಿಲ್ಲ ವೈರತ್ವವಿಲ್ಲ ಕೇವಲ ಪ್ರೀತಿ, ಅಂತರಂಗದ ಪ್ರೀತಿ, ಆನಂದದ ಪ್ರೀತಿ, ಆಧ್ಯಾತ್ಮದ ಪ್ರೀತಿ. ಈ ಪ್ರೀತಿಯೇ ಜಗತ್ತಿನಲ್ಲಿ ನೆಮ್ಮದಿ ಸಂತೋಷ ಸಂಭ್ರಮ ಎಲ್ಲದಕ್ಕೂ ಕಾರಣ. ಹೃದಯ ಸಂತೃಪ್ತವಾಗಿ ಸಂತೋಷವಾಗಿ ಇರಬೇಕಾದರೆ ಅದು ಬೇರೆಯವರಿಗಾಗಿ ತುಡಿಯಬೇಕು. ಎಲ್ಲಿ ತ್ಯಾಗವಿರುತ್ತದೆ, ದಾನವಿರುತ್ತದೆ, ಅಲ್ಲಿ ಆತ್ಮತೃಪ್ತಿ ಇರುತ್ತದೆ, ಆತ್ಮಾನಂದ ವಿರುತ್ತದೆ. ಶ್ರೀ ಕೃಷ್ಣನ ಅವತಾರದಲ್ಲಿ ಅವನು ಗೋವುಗಳನ್ನು ನೋಡಿಕೊಂಡ ಬಗೆಯನ್ನು ಮತ್ತು ಯುದ್ಧದ ಸಮಯದಲ್ಲಿ ಅರ್ಜುನನ ರಥದ ಕುದುರೆಗಳಿಗೆ ಮಾಡಿದ ಆರೈಕೆಯನ್ನು ನೋಡಿದಾಗ ಭಗವಂತ ತಾನು ಸೃಷ್ಟಿಸಿದ ಜೀವಿಗಳ ಬಗ್ಗೆ ಎಷ್ಟು ಕಾಳಜಿ ಎಷ್ಟು ಪ್ರೀತಿ ವಹಿಸುತ್ತಾನೆ ಎಂಬುದು ಸುಸ್ಪಷ್ಟವಾಗುತ್ತದೆ.

ರಾಕ್ಷಸರಿಗೂ ರಾಕ್ಷಸ ಪ್ರವೃತ್ತಿಯವರಿಗೂ ತಿದ್ದಿಕೊಳ್ಳಲು ಅವಕಾಶ ಕೊಡುತ್ತಾನೆ. ಶಿಶುಪಾಲನ 100 ತಪ್ಪುಗಳನ್ನು ಕ್ಷಮಿಸುತ್ತಾನೆ, ಇದು ಅವನ ಕ್ಷಮಾ ಗುಣವನ್ನು ತೋರಿಸುತ್ತದೆ. ಆದ್ದರಿಂದಲೇ ಅವನನ್ನು ಕರುಣಾಮಯಿ ಎಂದು ನಾವು ಕೊಂಡಾಡುತ್ತೇವೆ.

ಕಾಳಜಿ ವಹಿಸಿ ಇಷ್ಟು ಸಂರಕ್ಷಿಸಿದ ಯಾದವರನ್ನು, ಕಡೆಯ ಕಾಲದಲ್ಲಿ ಶಾಪಗ್ರಸ್ತರಾಗಿ ಅವರು ಹೊಡೆದಾಡಿಕೊಂಡು ಸಾಯುತ್ತಿರುವಾಗ , ಸುಮ್ಮನೆ ಮರದ ಕೆಳಗೆ ಕುಳಿತು ನೋಡುತ್ತಾನೆ. ಆಯಾ ಕಾಲಕ್ಕೆ ಏನೇನು ಆಗಬೇಕು ಅದು ಆಗಬೇಕು. ಅದನ್ನು ಅವನು ತಪ್ಪಿಸುವುದಿಲ್ಲ. ಅವರು ತಮ್ಮ ತಮ್ಮ ಸ್ಥಾನಕ್ಕೆ ಹಿಂದಿರುಗುವ ಕಾಲ ಬಂದಾಗ, ಅದಕ್ಕೆ ಅನುವು ಮಾಡಿ ಕೊಟ್ಟು, ಮತ್ತೆ ಹೊಸ ಲೀಲೆಗಳನ್ನು ಮಾಡಲು ಹೊಸ ಅವತಾರವನ್ನು ತಾಳಲು ಸಿದ್ದನಾಗುತ್ತಾನೆ.

ಇಂತಹ ಕೃಷ್ಣ ಪರಮಾತ್ಮ ಭೂಮಿಗೆ ಇಳಿದಂತಹ ದಿನ ಈ ಕೃಷ್ಣ ಜನ್ಮಾಷ್ಟಮಿ ಎಲ್ಲರಿಗೂ ಅಂತರಂಗದ ಆನಂದವನ್ನು ಕೊಡಲಿ, ಅವರಲ್ಲಿರುವ ಅಧ್ಯಾತ್ಮಿಕ ಶಕ್ತಿಯನ್ನು ಹೆಚ್ಚಿಸಲಿ. ಕೃಷ್ಣನು ತಾನು ತೋರಿಸಿ ದಂತಹ ತತ್ವಗಳನ್ನು ಜೀವನದಲ್ಲಿ ಅಳವಡಿಸಿಕೊಳ್ಳುವ ಶ್ರೇಷ್ಠ ಗುಣಗಳು ಬೆಳೆಯಲಿ ಎಂದು ಆಶಿಸುತ್ತೇನೆ.

**- ಶ್ರೀ ಕೃಷ್ಣಾರ್ಪಣಮಸ್ತು**

**ರೂಪಶ್ರೀ ಶಶಿಕಾಂತ್**

# ಸಹಕಾರ ಪಡೆಯಿರಿ, ಅಶಕ್ತರಿಗೆ ನೆರವು ನೀಡಿ

**(1ನೇ ಪುಟದಿಂದ)** ಸಮಾಜದ ಪ್ರತಿಭೆಗಳನ್ನು ಗುರುತಿಸಿ ಪ್ರೋತ್ಸಾಹಿಸಲು ಸಂಘ ಸ್ಥಾಪಿಸಲಾಗಿದೆ ಎಂದರು.

ಹಳೇಬೀಡು ಶ್ರೀ ಪುಷ್ಪಗಿರಿ ಮಹಾ ಸಂಸ್ಥಾನದ ಶ್ರೀ ಸೋಮಶೇಖರ ಶಿವಾಚಾರ್ಯ ಮಹಾಸ್ವಾಮೀಜಿ ಸಾನ್ನಿಧ್ಯ ವಹಿಸಿದ್ದರು.

ಸಂಘದ ಜಿಲ್ಲಾಧ್ಯಕ್ಷ ಡಾ.ಅಶೋಕ್ ಕುಮಾರ್ ವೀ.ಪಾಳೇದ ಅಧ್ಯಕ್ಷತೆ ವಹಿಸಿದ್ದರು. ನಿವೃತ್ತ ನ್ಯಾಯಾಧೀಶ ಎಸ್.ಎಸ್. ಕೆಂಪಗೌಡರ ಹಾಗೂ ಸಂಘದ ಪದಾಧಿಕಾರಿಗಳಾದ ಭವನೇಶ್ವರ ಎಂ.ಸಿ., ರಾಕೇಶ್ ಬಿ.ಸಿ., ಟಿ.ಎ. ಕುಸಗಟ್ಟಿ, ಮೌನೇಶಪ್ಪ ಎಸ್.ಪಿ., ಮಂಜುನಾಥ ಪಾಟೀಲ್, ಸಂತೀಶ್ ಸಣ್ಣಗೌಡ ಹಿಂಡೇರ್, ದಿನೇಶ್ ಕುಮಾರ್ ಎನ್.ಆರ್., ಪ್ರಕಾಶ್ ಎನ್.ಜಿ., ಶಾಂತರಾಜ್ ಕೆ.ಜಿ., ಹನುಮನಗೌಡ ಐ., ಕೆ.ಎಸ್. ನಾಗರಾಜ್, ನಿಜಲಿಂಗಸ್ವಾಮಿ ಬಿ.ಎಸ್., ಚನ್ನಪ್ಪಗೌಡ ಹೆಚ್.ಪಿ. ಇತರರು ಉಪಸ್ಥಿತರಿದ್ದರು. ಜಿ.ಎಂ. ರುದ್ರಗೌಡ ಸ್ವಾಗತಿಸಿದರು.

ಜ್ಯೋತಿ ದೇವರಮನೆ ಪ್ರಾರ್ಥಿಸಿದರು. ಹೆಚ್.ಎಸ್. ಪಾಟೀಲ್ ಸ್ವಾಗತ ಗೀತೆ ಹಾಡಿದರು.

# ಚುನಾವಣೆ : ಸಂದೀಪ್ ಅಣಬೇರು ಆಯ್ಕೆ


**(1ನೇ ಪುಟದಿಂದ)** (741), ನಂಜುಂಡೇಶ ಎನ್. (728), ಸಂಗನಗೌಡ ಪಾಟೀಲ್ (703),ಸೋಮನಾಥ ರೆಡ್ಡಿ (644), ಮಲ್ಲಿಕಾರ್ಜುನಯ್ಯ ಸಿ. (622), ವಿರೂಪಾಕ್ಷಯ್ಯ ಎಸ್. (606), ವಿಜಯಕುಮಾರ್ ಎ.ಪಿ. (604) ಅವರುಗಳು ಆಯ್ಕೆಯಾಗಿದ್ದಾರೆ.

ಕಾರ್ಯನಿರ್ವಾಹಕ ಸಮಿತಿಯು 41 ಜನರನ್ನು ಒಳಗೊಂಡಿದ್ದು, ಈ ಪೈಕಿ ಸಮಿತಿ ಅಧ್ಯಕ್ಷರಾಗಿ ನಿವೃತ್ತ ಹಿರಿಯ ಐಪಿಎಸ್ ಅಧಿಕಾರಿ ಶಂಕರ್ ಬಿದರಿ ಆಯ್ಕೆಯಾಗಿದ್ದು, 13 ಜನರು ಮಹಿಳಾ ಸದಸ್ಯರು ನೇಮಕಗೊಳ್ಳಲಿದ್ದಾರೆ. ಉಳಿದಂತೆ 27 ಸ್ಥಾನಗಳಿಗೆ ಇಂದು ಚುನಾವಣೆ ನಡೆಯಿತು.

ಈ 27 ಸ್ಥಾನಗಳಿಗೆ ರಾಜ್ಯಾದ್ಯಂತ ಒಟ್ಟು 57 ಜನರು ಸ್ಪರ್ಧೆ ಮಾಡಿದ್ದರು. ಇವರಲ್ಲಿ ಶಾಮನೂರು ಶಿವಶಂಕರಪ್ಪ, ಈಶ್ವರ ಖಂಡ್ರೆ ಮತ್ತು ಶಂಕರ್ ಬಿದರಿ ಅವರುಗಳ ನೇತೃತ್ವದಲ್ಲಿ ಸ್ಪರ್ಧಿಸಿದ್ದ ಎಲ್ಲಾ 27 ಜನರು ಆಯ್ಕೆಯಾಗಿದ್ದಾರೆ.

# ಸ್ವಾತಂತ್ರ್ಯ ಹೋರಾಟಗಾರರನ್ನು, ಸೇನಾನಿಗಳನ್ನು ಶಿಸ್ತು ಬದ್ದವಾಗಿ ಸಿದ್ದಗೊಳಿಸುತ್ತಿದ್ದವರು ನಾ.ಸು. ಹರ್ಡೇಕರ್

**ಭಾರತ ಸೇವಾದಳದ ಸಂಸ್ಥಾಪಕ, ಪದ್ಮಭೂಷಣ ನಾ.ಸು. ಹರ್ಡೇಕರ್ ಅವರ 49 ನೇ ಪುಣ್ಯಸ್ಮರಣೆ ಇಂದು**



1923 ನಾಗಪುರದಲ್ಲಿ ಪ್ರಥಮವಾಗಿ ಧ್ವಜ ಸತ್ಯಾಗ್ರಹವು ಕಾಕಿನಾಡ ನಗರದ ಕಾಂಗ್ರೆಸ್ ಕಛೇರಿ ಆವರಣದಲ್ಲಿ ಧ್ವಜ ವನ್ನು ಹಾರಿಸುವ ಕಾರ್ಯಕ್ರಮ ನಡೆಯುತ್ತದೆ. ಈ ಸಮಾರಂಭದಲ್ಲಿ ಶಿಸ್ತು ಮತ್ತು ಸಂಘಟ ನೆಯ ಅಭಾವವು ಎದ್ದು ಕಾಣುತ್ತಿರುತ್ತದೆ. ಮತ್ತು ಬ್ರಿಟಿಷರು ಸ್ವಾತಂತ್ರ್ಯ ಹೋರಾಟ ಗಾರರಿಗೆ ಊಟ ಔಷಧೋಪಚಾರ ಇಲ್ಲದೇ ಕೊಡುತ್ತಿದ್ದ ಶಿಕ್ಷೆಯಿಂದ, ಹೋರಾಟ ಗಾರರು ಮರಳಿ ಹೋರಾಟಕ್ಕೆ ಬರಲು ಹಿಂದೇಟು ಹಾಕುತ್ತಿದ್ದರು. ಇದನ್ನು ಗಮನಿಸಿ, ಹೋರಾಟ ಗಾರರಲ್ಲಿ ಮಾನಸಿಕ ಮತ್ತು ದೈಹಿಕ ಸದೃಢತೆ ಬೆಳೆಸಿ, ಶಿಸ್ತು, ಸಂಯಮವನ್ನು ಕಲಿಸಲು, ಒಂದು ಸಂಘಟನೆಯು ಅವಶ್ಯಕತೆ ಇದೆ ಎಂದು ಸರೋಜಿನಿ ನಾಯ್ಡು, ಮಹಾತ್ಮಾ ಗಾಂಧೀಜಿ, ಜವಾಹರ ಲಾಲ್ ನೆಹರು, ಸುಭಾಷ್ ಚಂದ್ರಬೋಸ್ ಮತ್ತು ಮುಂತಾದ ನಾಯಕರು ಆಲೋಚಿಸಿ, ಒಂದು ಮಂಡಲವನ್ನು ಕಟ್ಟಬೇಕೆಂಬ ಆಲೋಚನೆಗೆ ಬರುತ್ತಾರೆ. ಇದಕ್ಕೆ ಎನ್.ಎಸ್. ಹರ್ಡೇಕರ್ ಅವರೇ ಸೂಕ್ತ ಎಂದು ನಿರ್ಧರಿಸಿ, ಅವರಿಗೆ ಒಂದು ಮಂಡಲವನ್ನು ಕಟ್ಟಲು ನೇಮಿಸುತ್ತಾರೆ. ಅದರಂತೆ ನಾರಾಯಣರವ್ ಸುಬ್ಬರಾವ್ ಹರ್ಡೇಕರ್ ಅವರು ಒಂದು ಮಂಡಲವನ್ನು ಕಟ್ಟುತ್ತಾರೆ. ಆಗ ಅದಕ್ಕೆ ನಾಯಕರೆಲ್ಲರೂ ಕೂಡಿ 'ಹಿಂದೂಸ್ಥಾನ್ ಸೇವಾದಳ' ಎಂದು ಹೆಸರಿಡುತ್ತಾರೆ. ನಂತರ ಕಾಂಗ್ರೆಸ್ ಸೇವಾದಳ ಎಂದು ಹೆಸರಾಗುತ್ತದೆ. ಸ್ವಾತಂತ್ರ್ಯಾ ನಂತರ 16.03.1950 ರಲ್ಲಿ ಸರ್ಕಾರದಿಂದ ಮಾನ್ಯತೆ ಪಡೆದು, ಹಾಸನದ ಬೇಲೂರಿನಲ್ಲಿ ಭಾರತ ಸೇವಾದಳ ಎಂದು ಮರು ನಾಮಕರಣಗೊಳ್ಳುತ್ತದೆ.

ಸೇವಾದಳವು ಶಿಸ್ತು, ಸಂಯಮ, ಧ್ವಜಾರೋಹಣದ ವಿಧಿ ವಿಧಾನಗಳನ್ನು ಕಲಿಸಿಕೊಡುತ್ತದೆ. ಸುಭಾಷ್ ಚಂದ್ರ ಬೋಸ್ ಅವರು 'ಜೈ ಹಿಂದ್' ಎಂಬ ಜಯ ಘೋಷ ಕೊಟ್ಟು, ಪದ ಕವಾಯತ್ ಕಲಿಸಿ, ಹೋರಾಟಗಾರರನ್ನು ಮಿಲಿಟರಿ ಸೈನಿಕರಂತೆ ಸಿದ್ದಪಡಿಸುತ್ತಾರೆ.

ಸೇವಾದಳದಿಂದ ರೂಪಿಸಿದ ಶಿಸ್ತು ಧ್ವಜ ವಂದನೆಯ ವಿಧಿ ವಿಧಾನ ಪದ್ಧತಿಯು ಅಂದಿನಿಂದ ಇಂದಿನವರೆಗೂ ಭಾರತದ ಎಲ್ಲಾ ಭಾಗಗಳಲ್ಲಿಯೂ ಅನುಸರಿಸಲ್ಪಡುತ್ತಿದೆ.

ಧ್ವಜ ವಂದನೆಗೆ ಬೇಕಾದ ಸರ್ವ ಸಾಮಗ್ರಿಗಳು ಸೇವಾದಳದ ಮುಖ್ಯ ಕಚೇರಿಯಾದ ಹುಬ್ಬಳ್ಳಿಯಿಂದ, ಭಾರತದಾದ್ಯಂತ ಎಲ್ಲಾ ಕಡೆ ಪೂರೈಸಲ್ಪಡುತ್ತಿದ್ದವು ಎಂಬುದು ಕನ್ನಡಿಗರು ಹೆಮ್ಮೆಪಡುವ ವಿಚಾರವಾಗಿದೆ.

ಇಂತಹ ಒಂದು ಸಂಘಟನೆಯನ್ನು ಕಟ್ಟಿ, ಸ್ವಾತಂತ್ರ್ಯ ಹೋರಾಟಗಾರರನ್ನು, ಸೇನಾನಿಗಳನ್ನು ಶಿಸ್ತು ಬದ್ದವಾಗಿ ಸಿದ್ದಗೊಳಿಸುತಿದ್ದವರು ನಮ್ಮ ಕರ್ನಾಟಕದ ನಾ.ಸು. ಹರ್ಡೇಕರ್ ಅವರು ಎಂದು ಹೇಳಲು ಹೆಮ್ಮೆಯಾಗುತ್ತದೆ.

ಪದ್ಮಭೂಷಣ ಡಾ. ನಾರಾಯಣರಾವ್ ಸುಬ್ಬರಾವ್ ಹರ್ಡೀಕರ್ ಅವರು 07.05.1889 ರಂದು ಹಾವೇರಿ ಜಿಲ್ಲೆಯ ತಿಳುವಳ್ಳಿ ಗ್ರಾಮದಲ್ಲಿ ಜನಿಸುತ್ತಾರೆ. ತಂದೆ ಸುಬ್ಬರಾವ್ ತಾಯಿ ಯಮುನಾಬಾಯಿ. ಹರ್ಡೀಕರ್ ಅವರು ಸೇವೆಗಾಗಿ ಬಾಳು ಎಂಬ ಧ್ಯೇಯ ಘೋಷಣೆಯನ್ನು ಉಸಿರಾಗಿಸಿಕೊಂಡು ಸ್ವಾತಂತ್ರ್ಯ ಹೋರಾಟವನ್ನು ಮಾಡಿದವರು.

ಈಗಲೂ ಇವರು ಕಟ್ಟಿದ 'ಭಾರತ ಸೇವಾದಳ' ಸಂಸ್ಥೆ ಸರ್ಕಾರದಿಂದ ಮಾನ್ಯತೆ ಪಡೆದು, ಶಾಲಾ-ಕಾಲೇಜು ವಿದ್ಯಾರ್ಥಿಗಳಿಗೆ, ಶಿಕ್ಷಕರಿಗೆ ರಾಷ್ಟ್ರೀಯತೆ, ರಾಷ್ಟ್ರ ಧ್ವಜ ರಾಷ್ಟ್ರಗೀತೆ ಮಾಹಿತಿ, ಶಿಸ್ತು ಸಂಯಮದ ಕುರಿತು ತಿಳಿಸುವ ಕಾರ್ಯದಲ್ಲಿ, ಸಾಮಾಜಿಕ ಸೇವಾ ಚಟುವಟಿಕೆಯಲ್ಲಿ ನಿರತವಾಗಿದೆ. ಕರ್ನಾಟಕದ ಎಲ್ಲಾ ಜಿಲ್ಲೆಗಳಲ್ಲಿ 'ಭಾರತ ಸೇವಾದಾಳ' ಕಚೇರಿಗಳಿವೆ.

ಭಾರತ ಸೇವಾದಳವು 101 ನೇ ವರ್ಷಾಚರಣೆಯಲ್ಲಿದೆ. ಇಂತಹ ಸಂಘಟನೆಯನ್ನು ಕಟ್ಟಿ ಬೆಳೆಸಿದ ಎನ್.ಎಸ್.ಹರ್ಡೇಕರ್‌ವರು 26.08.1975 ರಂದು ನಿಧನರಾಗುತ್ತಾರೆ. ಇಂದಿಗೆ ನಾವು ಅವರನ್ನು ನೆನಸಿಕೊಳ್ಳುವ 49 ನೇ ಪುಣ್ಯಸ್ಮರಣೆಯಲ್ಲಿದ್ದೇವೆ.



**ಅಂಚೆ ಇಲಾಖೆ ;** ಇವರ ಭಾವ ಚಿತ್ರದ ಅಂಚೆ ಚೀಟಿ ಬಿಡುಗಡೆ ಮಾಡಿದೆ. ತಿಳುವಳ್ಳಿ ಗ್ರಾಮದಲ್ಲಿ ವೃತ್ತಕ್ಕೆ ಇವರ ಹೆಸರಿನ್ನಿಟ್ಟು, ವೃತ್ತದಲ್ಲಿ ಪ್ರತಿಮೆಯ ನಿಟ್ಟು ಗೌರವಿಸಿದ್ದಾರೆ.

**- ಶಿವಪ್ರಸಾದ ಕರ್ಜಗಿ, ದಾವಣಗೆರೆ.**


**REQUIREMENT**
Receptionist
Age : 20-25
Salary: 10000 - 12000
Hairpoint Hair & beauty lounge, MCC `B' block, 7th main, 3rd cross, Davanagere.
9738664400, 08192220755

**TUITIONS**
ಗುರುದತ್ತ ಬಿ. ನಾಡಿಗೇರ್
Class 6 ಇಂದ Class 10
CBSE / ICSE Boards,
NEET / IIT - JEE / Olympiads
Memory Techniques + Hand Writing
97398 65711, 94822 44114

**TUITIONS**
ಗುರುದತ್ತ ಬಿ. ನಾಡಿಗೇರ್
PUC I / PUC II / Longterm / PCMB
NEET / IIT - JEE / KCET / CLAT - Printed Notes + Study Materials
97398 65711, 94822 44114

**ನೀರಾವರಿ ಜಮೀನು ಮಾರಾಟಕ್ಕಿದೆ**
ದಾವಣಗೆರೆಯಿಂದ 6 ಕಿ.ಮೀ. ಹತ್ತಿರದ ಪುಟಗನಾಳ ಗ್ರಾಮಕ್ಕೆ ಹೊಂದಿಕೊಂಡಿರುವ ಕೆಂಪು ಮಸಾರಿ ಹೊಲ, ಅಡಿಕೆ ಗಿಡ ಹಾಕಲು ಸೂಕ್ತವಾದ 4 ಎಕರೆ 16 ಸೇಂಟ್ಸ್ ಜಮೀನಿದೆ. 1 ಬೋರ್ ಇದೆ.
90084 15137, 63609 35608

**FLAT FOR LEASE**
3 BHK, Sqft :1888
AM Apartment
Nainika Prime Rose
Vidyanagar last city bus stop Davanagere.
89519 38228, 80502 22181

**Job Opportunities**
Required Lab Chemist. (Male Only) For Aradhya Chemicals & Fertilizers (Only BSc., Agri, Candidates Can Apply)
73537 70016
Email : acfdvg@gmail.com

**1 BHK ಮನೆ ಬಾಡಿಗೆ/ ಲೀಜ್‌ಗೆ ಇದೆ**
1ನೇ ಮಹಡಿ ಮನೆ, #758/1, ಕಾವೇರಮ್ಮ ಶಾಲೆ ಹಿಂಭಾಗ, 4ನೇ ಮುಖ್ಯ ರಸ್ತೆ, 13ನೇ ಕ್ರಾಸ್, ಕೆ.ಬಿ. ಬಡಾವಣೆ, ದಾವಣಗೆರೆ-2.
ಮಧ್ಯವರ್ತಿಗಳಿಗೆ ಅವಕಾಶವಿಲ್ಲ.
99648 66713, 99025 78036

**ಸೈಟು ಮಾರಾಟಕ್ಕಿದೆ**
ಎಂ.ಸಿ.ಸಿ. ಬಿ ಬ್ಲಾಕ್ ನ ಹಾರ್ಟ್ ಹಾಸ್ಪಿಟಲ್ ರಸ್ತೆಗೆ ಪೂರ್ವ ಮುಖವಾಗಿ 47x60 ಅಡಿ ಅಳತೆ ಇದ್ದು, ಸೊತ್ತಿನ ದಾಖಲೆಯಲ್ಲಿ ಕಡಿಮೆ ಇರುತ್ತದೆ. ದಾಖಲೆಯಲ್ಲಿ ತೋರಿಸಿದ ಅಳತೆಗೆ ವ್ಯಾಪಾರಕ್ಕೆ ಕೊಡಲಾಗುತ್ತದೆ.
Mohan Real Estate Agencies
97424 34049

**ತಕ್ಷಣ ಬೇಕಾಗಿದ್ದಾರೆ**
DTDC ಕೋರಿಯರ್ ಆಫೀಸ್‌ನಲ್ಲಿ ಕೆಲಸ ಮಾಡಲು ಕಂಪ್ಯೂಟರ್ ಜ್ಞಾನವಿರುವ ಹಿಂದಿ ಮಾತನಾಡಬಲ್ಲ ಪುರುಷರು ಬೇಕಾಗಿದ್ದಾರೆ.
97385 23711

**ಸೈಟುಗಳು ಮಾರಾಟಕ್ಕಿವೆ**
ಕರ್ನಾಟಕ ಗೃಹ ಮಂಡಳಿಯಲ್ಲಿ
50x80 East, 40x60 East, 40x60 South, 30x50 North, 30x40 East, 30x50 West. ಪಾರ್ಕ್ ಎದುರುಗಡೆ
ಐನಳ್ಳಿ ಚನ್ನಬಸಪ್ಪ ಏಜೆಂಟ್
99166 12110

**ಹೋಂ ನರ್ಸಿಂಗ್ ಸರ್ವೀಸ್**
ಹೆಲ್ತ್‌ಕೇರ್ ಮಹಿಳೆಯರು ಮತ್ತು ಪುರುಷರಿಗೆ ಸ್ನಾನ, ಡೈಪರ್ ಚೇಂಜ್, ವಾಕ್ 1/2 ಗಂಟೆ 1, 2 ಗಂಟೆ ಕೆಲಸಕ್ಕೆ ಬೇಕಾಗಿದ್ದಾರೆ. ಬೆಳಿಗ್ಗೆ 9 ರಿಂದ ಸಂಜೆ 6ರವರೆಗೆ ಕೆಲಸಕ್ಕೆ ಸಿಗುತ್ತಾರೆ. ಬೇಕಾದವರು ಕರೆ ಮಾಡಿ. ವಯಸ್ಸಾದ ಜೆಂಟ್ಸ್ ಲೇಡಿಸ್ ಇವರಿಗೆ ಬೇಕಾದರೆ ಕರೆ ಮಾಡಿ. ಕೆಲಸಕ್ಕೆ ಬೇಕಾದರೆ ಈ ನಂಬರಿಗೆ ಕರೆ ಮಾಡಿ.
ಶಿಲ್ಪಾ 91644 93271

**WANTED**
Sales supervisor Required
Contact :
Devi Industry
Davanagere
99164 29793

**ಮನೆ ಬಾಡಿಗೆಗೆ / ಲೀಸ್‌ಗಿದೆ**
# 679 ಕಸ್ತೂರಬಾ ಬಡಾವಣೆ, 9ನೇ ರಸ್ತೆ, ದಾವಣಗೆರೆ. 1 BHK
(ಸಸ್ಯಹಾರಿಗಳಿಗೆ ಮಾತ್ರ)
94800 00417

**ಅನುಭವವಿರುವ ಕಂಪ್ಯೂಟರ್ ಆಪರೇಟರ್ ಬೇಕಾಗಿದ್ದಾರೆ**
ಕೆಎಸ್‌ಎಸ್ ಸಲ್ಯೂಷನ್ ಸಿಎಸ್‌ಸಿ ಸೇವಾ ಸಿಂಧು
SS ಲೇಔಟ್, ಬಿ ಬ್ಲಾಕ್, ಇಂಡೋರ್ ಸ್ಟೇಡಿಯಂ ಹತ್ತಿರ, ದಾವಣಗೆರೆ.
ಬೆ. 9 ರಿಂದ ಸಂಜೆ 6ರವರೆಗೆ Resume ನೊಂದಿಗೆ ಸಂಪರ್ಕಿಸಿ :
72045 42910
kssdvg01@gmail.com

**Avoid Mosquitoes**
Mosquito Nets for doors & windows
Sri Gowri Enterprises
#7C2, 4th cross Near Shaneshwara Temple Karur Industrial Area, P.B Road, Davanagere -577006
72049 94628

**ಪ್ರವೇಶ ಪ್ರಕಟಣೆ**
ಡಿಪ್ಲೋಮಾ ಇನ್ ಪೇಷೆಂಟ್ ಕೇರ್ ನರ್ಸಿಂಗ್ - 2 ವರ್ಷ
ವಿದ್ಯಾರ್ಹತೆ: PUC ಪಾಸ್/ಫೇಲ್, SSLC PASS
ತರಬೇತಿ ನಂತರ ಖಾಸಗಿ ಆಸ್ಪತ್ರೆ, ನರ್ಸಿಂಗ್ ಹೋಂಗಳಲ್ಲಿ ನರ್ಸ್‌ಗಳಾಗಿ ಕೆಲಸ ಮಾಡಬಹುದು.
ಮಾನಸ ಕಮ್ಯೂನಿಟಿ ಕಾಲೇಜ್ (ರಿ)
LK ಕಾಂಪ್ಲೆಕ್ಸ್, 1ನೇ ಮಹಡಿ, ಅಶೋಕ ರಸ್ತೆ, 1ನೇ ಕ್ರಾಸ್, ಆಹಾರ್ 2000 ಹಿಂಭಾಗ ರಸ್ತೆ , ದಾವಣಗೆರೆ-577002.
97402 58276

**ಕೆಲಸಕ್ಕೆ ಬೇಕಾಗಿದ್ದಾರೆ**
ಶ್ರೀ ಸಾಯಿ ಎಗ್ ಸೆಂಟರ್, ಶಿವಪ್ಪಯ್ಯ ಸರ್ಕಲ್, ದಾವಣಗೆರೆ.
ಕೆಲಸಕ್ಕೆ ಹುಡುಗರು ಮತ್ತು ಡ್ರೈವರ್ ಬೇಕಾಗಿದ್ದಾರೆ.
ವಿದ್ಯಾರ್ಹತೆ : SSLC ಉತ್ತೀರ್ಣ.
96860 22969

ಜನ ಆಶಾ ಸೌತ್ ನಿಧಿ ಲಿಮಿಟೆಡ್
**ಪಿಗ್ಮಿ ಏಜೆಂಟರು ಬೇಕಾಗಿದ್ದಾರೆ**
RBI Approved
ಜನ ಆಶಾ ಸ್ಮಾರ್ಟ್ ಬ್ಯಾಂಕ್ H.O. ಮೈಸೂರು
ದಾವಣಗೆರೆ ಶಾಖೆಯಲ್ಲಿ ನಗರ ವಲಯದಲ್ಲಿ ಕೆಲಸ ಮಾಡಲು ಬೇಕಾಗಿದ್ದಾರೆ.
Salary, Incentive & PF, Health Insurance ಸೌಲಭ್ಯವಿರುತ್ತದೆ
99720 42558, 96864 12409

**ಮಳಿಗೆಗಳು ಬಾಡಿಗೆಗೆ ಇವೆ**
ಪಿ.ಬಿ. ರಸ್ತೆ, ಗಾಂಧಿ ಸರ್ಕಲ್ ಹತ್ತಿರ, ಶ್ರೀ ಕಲ್ಲೇಶ್ವರ ಬಿಲ್ಡಿಂಗ್, 1ನೇ ಮಹಡಿ, 2ನೇ ಮಹಡಿ, ಸೆಲ್ಲರ್ ಮಹಡಿ, 1100 Sq.ft., ಲಿಫ್ಟ್ ಸೌಲಭ್ಯ, ATMಗೆ ಜಾಗ
99646 99096

ರಕ್ತ ದಾನ ಶ್ರೇಷ್ಠ ದಾನ

**WE ARE HIRING**
PRIMARY SCHOOL Teachers for, Science, Social & English
Qualification : Any Degree
70199 82115
70194 66178

**ಸೋಲಾರ್ & ವಾಟರ್ ಫಿಲ್ಟರ್ ಸರ್ವೀಸ್**
ಸೋಲಾರ್ ವಾಟರ್ ಹೀಟರ್ ಹಾಗೂ ವಾಟರ್ ಫಿಲ್ಟರ್ ಸರ್ವೀಸ್ & ರಿಪೇರಿ ಮಾಡಲು ಸಂಪರ್ಕಿಸಿ.
84315 30052, 87228 39869

**ತಕ್ಷಣ ಬೇಕಾಗಿದ್ದಾರೆ**
ದಾವಣಗೆರೆ SS ಆಸ್ಪತ್ರೆ, ಬಾಪೂಜಿ ಆಸ್ಪತ್ರೆ ಹಾಗೂ ಕಲ್ಲೇಶ್ವರ ಮಿಲ್‌ನಲ್ಲಿ 08 ಗಂಟೆ ಹಾಗೂ 12 ಗಂಟೆ ಕೆಲಸ ಮಾಡಲು ಸೆಕ್ಯೂರಿಟಿ ಗಾರ್ಡ್ಸ್ ತಕ್ಷಣ ಬೇಕಾಗಿದ್ದಾರೆ. ಸಂಪರ್ಕಿಸಿ :
ಅಸೋಸಿಯೇಟೆಡ್ ಎಂಟರ್‌ಪ್ರೈಸಸ್
ಗಣೇಶ್ ಲೇಔಟ್, ದಾವಣಗೆರೆ.
90605 45500, 99169 29713
74111 13888, 97390 89022

**ಲೀಸ್‌ಗೆ /ಬಾಡಿಗೆಗಿದೆ**
ವಿಜಯನಗರ RTO ಆಫೀಸ್ ಹತ್ತಿರ, ದಾವಣಗೆರೆ. 1ನೇ ಮಹಡಿ 40x40, 10x15ರ ಒಟ್ಟು 9 ರೂಂಗಳು, ದಕ್ಷಿಣ ಬಾಗಿಲು. 2ನೇ ಮಹಡಿ 40x40, 20x20ರ ಒಟ್ಟು 4 ರೂಂಗಳು. ನರ್ಸಿಂಗ್ ಹೋಂ/ಪಿಜಿ ಹಾಸ್ಟೆಲ್ / ಆಶ್ರಮ / ಕಂಪ್ಯೂಟರ್ / ಟೈಲರಿಂಗ್‌ಗೆ ಯೋಗ್ಯ. ದೇವರಾಜ ಅರಸ್ ಬಡಾವಣೆ, ಎ ಬ್ಲಾಕ್, ದಾವಣಗೆರೆ. 2BHK ಮನೆ, ದಕ್ಷಿಣ ಬಾಗಿಲು, ಬಾಡಿಗೆ 6k, 2BHK ಮನೆ, ಪೂರ್ವ ಬಾಗಿಲು ಲೀಸ್‌ಗೆ 5.5 ಲಕ್ಷ, ಬೋರ್ ವೆಲ್, ಕಾರ್ಪೋರೇಷನ್ ನೀರು, ಪಾರ್ಕಿಂಗ್ ಇದೆ.
99022 99961, 97417 46205
73493 97287, 84312 55250

**ಉತ್ತಮ ಅಡಿಕೆ ಸಸಿಗಳು ಮಾರಾಟಕ್ಕಿವೆ**
ನಮ್ಮಲ್ಲಿ ಉತ್ತಮವಾದ ಅಡಿಕೆ ಸಸಿಗಳು ಮಾರಾಟಕ್ಕಿವೆ. 2ಕೆಜಿ ಚೀಲಗಳು ರೂ. 25/- ಸ್ಥಳ : ದೊಡ್ಡಬಾತಿ
88920 08800

**ಮನೆ ಲೀಸ್‌ಗೆ ಇದೆ**
ಮೊದಲನೇ ಮಹಡಿಯಲ್ಲಿ ಬೋರ್‌ವೆಲ್ ಮುನ್ಸಿಪಲ್ ನೀರಿನ ಸೌಲಭ್ಯವಿರುವ 3 BHK ಮನೆ ಲೀಸ್‌ಗೆ ಇದೆ. #1299/49 ಬಿಜೆಎಂ ಸ್ಕೂಲ್ ಹಿಂಭಾಗ, ವಿಜಯ ನಗರ ಬಡಾವಣೆ, ಕೊಂಡಜ್ಜಿ, ದಾವಣಗೆರೆ.
78924 85581, 74064 14528

**ಟ್ಯಾಂಕ್ ಕ್ಲೀನಿಂಗ್**
ಮನೆಯ ನೀರಿನ ತೊಟ್ಟಿ, ಟ್ಯಾಂಕ್‌ಗಳು ಗಲೀಜಾಗಿದ್ದರೆ ಯಂತ್ರಗಳನ್ನು ಬಳಸಿ ನಾವು ಕ್ಲೀನ್ ಮಾಡುತ್ತೇವೆ.
ಅತ್ಯುತ್ತಮ ಸೇವೆಗೆ ಸಂಪರ್ಕಿಸಿ
99863 61250
80739 48857

**ಬೇಕಾಗಿದ್ದಾರೆ**
ಬಟ್ಟೆ ಅಂಗಡಿಯಲ್ಲಿ ಕೆಲಸ ಮಾಡಲು ಅನುಭವವಿರುವ ಸೇಲ್ಸ್ ಗರ್ಲ್ಸ್ ಮತ್ತು ಸೇಲ್ಸ್ ಬಾಯ್ಸ್ ಬೇಕಾಗಿದ್ದಾರೆ.
ಎಸ್.ಎಸ್. ಹೈಟೆಕ್ ಆಸ್ಪತ್ರೆ ರೋಡ್, ಜಯನಗರ, ಬಿ ಬ್ಲಾಕ್, ದಾವಣಗೆರೆ.
99861 62462

**ಓದುಗರ ಗಮನಕ್ಕೆ**
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ - ವಸ್ತು ಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

**ವಾಟರ್ ಲೀಕೇಜ್ (ವಾಟರ್ ಪ್ರೂಫಿಂಗ್)**
ನಿಮ್ಮ ಮನೆ ಮತ್ತಿತರೆ ಕಟ್ಟಡಗಳ ಬಾತ್‌ರೂಂ, ಬಾಲ್ಕನಿ, ಟೆರೇಸ್, ನೀರಿನ ತೊಟ್ಟಿ, ಗೋಡೆ ಬಿರುಕು, ನೀರಿನ ಟ್ಯಾಂಕ್, ಎಲ್ಲಾ ರೀತಿಯ ನೀರಿನ ಲೀಕೇಜ್‌ಗಳಿಗೆ ಸಂಪರ್ಕಿಸಿ:
95387 77582
ಕೆಲಸ 100% ಗ್ಯಾರಂಟಿ.

**ಮನೆ ಕ್ಲೀನಿಂಗ್ ಮಾಡಿಕೊಡಲಾಗುವುದು**
ಮನೆ ಕ್ಲೀನಿಂಗ್ ಮತ್ತು ಹಳೆಮನೆ ಬಾಡಿಗೆ ಕೊಡುವ ಮನೆಗಳನ್ನು ಕ್ಲೀನಿಂಗ್ ಮಾಡಿಕೊಡಲಾಗುವುದು. ಹಾಗೂ ಬಾತ್ ರೂಂ ಆಸಿಡ್ ವಾಶ್ ಮಾಡಿಕೊಡಲಾಗುವುದು.
99863 61250, 80730 24690

**KAIDB**
Furniture Factory for Rent, Davanagere. 4000 Sqft.
98459 77475

**ಸೈಟುಗಳು ಮಾರಾಟಕ್ಕೆ ಇವೆ**
ಹರಿಹರದ ವಿನಾಯಕ ಬಡಾವಣೆಗೆ ಹೊಂದಿಕೊಂಡು ಇರುವ ಲೇಔಟ್ ನಲ್ಲಿ ಸೈಟುಗಳು ಮಾರಾಟಕ್ಕೆ ಇವೆ. ಹರಿಹರದ ರಿಯಲ್ ಎಸ್ಟೇಟ್ ಏಜೆಂಟ್ ಗಳು ಸಹ ವ್ಯವಹಾರ ಮಾಡಬಹುದು. ಆಕರ್ಷಕ ಕಮೀಷನ್ ಕೊಡಲಾಗುವುದು. ಸಂಪರ್ಕಿಸಿ.
Mohan Real Estate Agencies.
97424 34049

**ಸೈಟುಗಳು ಮಾರಾಟಕ್ಕಿವೆ**
ಶಾಮನೂರು ಹತ್ತಿರ ಡಾಲರ್ಸ್ ಕಾಲೋನಿಯಲ್ಲಿ 80x40 North, 40x60 North, 40x60 ಅಕ್ಕಪಕ್ಕ, 30x50 North, 30x45 East, 30x44 North,
ಐನಳ್ಳಿ ಚನ್ನಬಸಪ್ಪ ಏಜೆಂಟ್
99166 12110

**ಮನೆಗಳು ಮಾರಾಟಕ್ಕಿವೆ**
ಮೂರು ಬೆಡ್ ರೂಮ್ ಮನೆ ಅಪಾರ್ಟ್‌ಮೆಂಟ್‌ನಲ್ಲಿ ಎಂ.ಸಿ.ಸಿ. 'ಎ' ಬ್ಲಾಕ್‌ನಲ್ಲಿ 30x40 West ಡುಪ್ಲೆಕ್ಸ್30x50 North ಡುಪ್ಲೆಕ್ಸ್ ವಿವೇಕಾನಂದ ಬಡಾವಣೆಯಲ್ಲಿ.
ಐನಳ್ಳಿ ಚನ್ನಬಸಪ್ಪ ಏಜೆಂಟ್
99166 12110

# ಶೋಷಿತ ಸಮುದಾಯಗಳ ಮಹಾ ಒಕ್ಕೂಟದಿಂದ 'ನಾಳೆ ರಾಜಭವನ ಚಲೋ'

ದಾವಣಗೆರೆ, ಆ. 25- ಸಿಎಂ ಸಿದ್ಧರಾಮಯ್ಯ ಅವರನ್ನು ತೇಜೋವಧೆ ಮಾಡುತ್ತಿರುವ ಬಿಜೆಪಿ ಮತ್ತು ಜೆಡಿಎಸ್ ಪಕ್ಷಗಳ ಹಾಗೂ ಬಿಜೆಪಿ, ಕೇಂದ್ರ ಸರ್ಕಾರದ ಕೈಗೊಂಬೆಯಾಗಿರುವ ರಾಜ್ಯಪಾಲರ ನಡೆ ಖಂಡಿಸಿ ಕರ್ನಾಟಕ ಶೋಷಿತ ಸಮುದಾಯಗಳ ಮಹಾ ಒಕ್ಕೂಟದ ವತಿಯಿಂದ ನಾಡಿದ್ದು ದಿನಾಂಕ 27 ರಂದು ಬೆಳಿಗ್ಗೆ 11 ಗಂಟೆಗೆ ಬೆಂಗಳೂರಿನ ಫ್ರೀಡಂ ಪಾರ್ಕ್ ನಿಂದ ರಾಜಭವನ ಚಲೋ ಕಾರ್ಯಕ್ರಮ ಹಮ್ಮಿಕ್ಕೊಳ್ಳಲಾಗಿದೆ ಎಂದು ಒಕ್ಕೂಟದ ಮುಖಂಡ ಹೊದಿಗೆರೆ ರಮೇಶ್ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಶೋಷಿತ ಸಮುದಾಯಗಳ ನಾಯಕ ಸಿದ್ಧರಾಮಯ್ಯ ಅವರ ತೇಜೋವಧೆಗೆ ಬಿಜೆಪಿ ಮತ್ತು ಜೆಡಿಎಸ್ ಮುಖಂಡರು ಮುಂದಾಗಿರುವುದು ಸರಿಯಲ್ಲ. ಚುನಾವಣೆಯಲ್ಲಿ ಬಹುಮತದಿಂದ ಆರಿಸಿ ಬಂದ ಕಾಂಗ್ರೆಸ್ ಸರ್ಕಾರವನ್ನು ಅಸ್ಥಿರಗೊಳಿಸಲು ರಾಜ್ಯಪಾಲರ ಮೂಲಕ ಷಡ್ಯಂತ್ರ ರೂಪಿಸಿದ್ದಾರೆ. ಇದನ್ನು ವಿರೋಧಿಸಿ ರಾಜ್ಯ ಹಿಂದುಳಿದ ಜಾತಿಗಳ ಒಕ್ಕೂಟಗಳ ಸಹಯೋಗದಲ್ಲಿ ಪ್ರತಿಭಟನಾ ಮೆರವಣಿಗೆ ಹಮ್ಮಿಕ್ಕೊಳ್ಳಲಾಗಿದೆ ಎಂದರು.

ಸಿಎಂ ಸಿದ್ದರಾಮಯ್ಯ ತಮ್ಮ 40 ವರ್ಷಗಳ ದೀರ್ಘಾವಧಿ ರಾಜಕೀಯ ಜೀವನದಲ್ಲಿ ಯಾವುದೇ ಕಪ್ಪು ಚುಕ್ಕೆ ಇಲ್ಲದಂತೆ ಅಧಿಕಾರ ನಡೆಸಿದ್ದಾರೆ. ದೇವರಾಜ ಅರಸು ನಂತರ ಹಿಂದುಳಿದ ವರ್ಗಗಳ ಪ್ರಶ್ನಾತೀತ ನಾಯಕನಾಗಿ ಸರ್ವ ಸಮುದಾಯಗಳ ಅಭಿವೃದ್ಧಿಗಾಗಿ ಶ್ರಮಿಸುತ್ತಾ ಬಂದಿದ್ದಾರೆ ಎಂದು ಹೇಳಿದರು.

ಎರಡನೇ ಅವಧಿಗೆ ಮುಖ್ಯಮಂತ್ರಿಯಾಗಿ ಅನೇಕ ಜನಪರ ಯೋಜನೆಗಳನ್ನು ಅನುಷ್ಠಾನಕ್ಕೆ ತರುವ ಮೂಲಕ ಜನರ ಮೆಚ್ಚುಗೆಗೆ ಪಾತ್ರರಾಗಿದ್ದಾರೆ. ಇದನ್ನು ಸಹಿಸದ ಬಿಜೆಪಿ ಮತ್ತು ಜೆಡಿಎಸ್ ಪಕ್ಷಗಳು ಸಿದ್ದರಾಮಯ್ಯ ಅವರನ್ನು ಅಧಿಕಾರದಿಂದ ಕೆಳಗಿಳಿಸುವ ಕುತಂತ್ರವನ್ನು ಶೋಷಿತ ಸಮುದಾಯಗಳು ಸಹಿಸುವುದಿಲ್ಲ ಎಂದು ಕಿಡಿಕಾರಿದರು.

ಈ ಬೃಹತ್ 'ರಾಜಭವನ ಚಲೋ' ಕಾರ್ಯಕ್ರಮದಲ್ಲಿ ಶೋಷಿತ ಸಮುದಾಯಗಳ ಪ್ರತಿನಿಧಿಗಳು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಳ್ಳುವಂತೆ ಹೊದಿಗೆರೆ ರಮೇಶ್ ಕರೆ ನೀಡಿದರು.

ಸುದ್ದಿಗೋಷ್ಠಿಯಲ್ಲಿ ಕರ್ನಾಟಕ ತಾಂಡಾ ಅಭಿವೃದ್ಧಿ ನಿಗಮದ ಅಧ್ಯಕ್ಷ ಎನ್. ಜಯದೇವನಾಯ್ಕ, ಹರಿಹರ ಮಾಜಿ ಶಾಸಕ ಎಸ್. ರಾಮಪ್ಪ, ಚಲವಾದಿ ಸಮಾಜದ ಜಿಲ್ಲಾಧ್ಯಕ್ಷ ಎನ್. ರುದ್ರಮುನಿ, ನಗರಸಭೆ ಮಾಜಿ ಅಧ್ಯಕ್ಷ ಬಿ. ವೀರಣ್ಣ, ಮಹಾನಗರ ಪಾಲಿಕೆ ಸದಸ್ಯ ಕೆ.ಚಮನ್‌ಸಾಬ್, ಮುಖಂಡರಾದ ಎಸ್.ಎಸ್. ಗಿರೀಶ್, ಲಿಯಾಖತ್ ಅಲಿ, ಕವಿತಾ ಚಂದ್ರಶೇಖರ್, ಸಲ್ಮಾಬಾನು ಮತ್ತಿತರರು ಉಪಸ್ಥಿತರಿದ್ದರು.

## ಹರಪನಹಳ್ಳಿ ತಾಲ್ಲೂಕು ಘಟಕದಿಂದ ಕರೆ

ಹರಪನಹಳ್ಳಿ, ಆ. 25 - ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ವಿರುದ್ಧ ರಾಜ್ಯಪಾಲರು ಪ್ರಾಸಿಕ್ಯೂಷನ್‌ಗೆ ಅನುಮತಿ ನೀಡಿರುವುದನ್ನು ವಿರೋಧಿಸಿ ನಾಡಿದ್ದು ದಿ. 27 ರಂದು ರಾಜಭವನ ಮುತ್ತಿಗೆ ಹಾಕಲು ರಾಜ್ಯ ಶೋಷಿತ ಸಮುದಾಯಗಳ ಮಹಾ ಒಕ್ಕೂಟ ನಿರ್ಧರಿಸಿದೆ ಎಂದು ಒಕ್ಕೂಟದ ರಾಜ್ಯ ಮುಖಂಡ ಕೋಡಿಹಳ್ಳಿ ಭೀಮಪ್ಪ ತಿಳಿಸಿದ್ದಾರೆ.

ಅಂದು ರಾಜ್ಯದ ಎಲ್ಲಾ ಶೋಷಿತ ಸಮುದಾಯಗಳ ಶಕ್ತಿಯನ್ನು ವೃದ್ದಿಸಿಕೊಂಡು ರಾಜ ಭವನ ಮುತ್ತಿಗೆ ಹಾಕುವ ಮೂಲಕ ರಾಜ್ಯಪಾಲರು ಕನ್ನಡ ನಾಡಿನಿಂದ ವಾಪಸ್ ಹೋಗುವವರೆಗೂ ನಿರಂತರವಾಗಿ ಹೋರಾಟ ಮುಂದುವರೆಸುತ್ತೇವೆ ಎಂದು ಶೋಷಿತ ಸಮುದಾಯಗಳ ಮಹಾ ಒಕ್ಕೂಟದ ಮುಖಂಡರುಗಳಾದ ಎಂ.ವಿ. ಅಂಜಿನಪ್ಪ, ಎಚ್.ಕೆ. ಹಾಲೇಶ್, ಎಚ್.ಬಿ.ಪರಶುರಾಮಪ್ಪ, ಇರ್ಫಾನ್ ಮುದುಗಲ್, ತೆಲಿಗಿ ಮಂಜುನಾಥ್, ಬಿ.ಬಿ. ಹೊಸೂರಪ್ಪ, ವಸಂತಪ್ಪ, ಉದ್ದಾರ ಗಣೇಶ, ಹುಲಿಕಟ್ಟೆ ಚಂದ್ರಪ್ಪ, ಒ.ರಾಮಪ್ಪ, ವೆಂಕಟೇಶ ರೆಡ್ಡಿ, ಅಗ್ರಹಾರ ಅಶೋಕ, ಹಲಗೇರಿ ಮಂಜಪ್ಪ, ಚಲುವಾದಿ ಪರಶುರಾಮ್, ಎಲ್.ಪ್ರಕಾಶ್ ನಾಯ್ಕ, ಎಲ್.ಮಂಜಾನಾಯ್ಕ, ಮೋತಿನಾಯ್ಕ, ಗೋಣಿಬಸಪ್ಪ ತಿಳಿಸಿದ್ದಾರೆ.

## ಪವರ್ ಲಿಫ್ಟಿಂಗ್ ಸ್ಪರ್ಧೆಯಲ್ಲಿ ಯುಬಿಡಿಟಿಗೆ ಚಿನ್ನ, ಬೆಳ್ಳಿ



ದಾವಣಗೆರೆ, ಜು. 25- ಬೆಂಗಳೂರಿನ ನ್ಯೂ ಹಾರಿಜನ್ ಮಹಾವಿದ್ಯಾಲಯದಲ್ಲಿ ನಡೆದ ವಿ.ಟಿ.ಯು ರಾಜ್ಯ ಮಟ್ಟದ ಪವರ್ ಲಿಫ್ಟಿಂಗ್ ಸ್ಪರ್ಧೆಯಲ್ಲಿ ನಗರದ ಯುಬಿಡಿಟಿ ಇಂಜಿನಿಯರಿಂಗ್ ಮಹಾವಿದ್ಯಾಲಯದ ವಿದ್ಯಾರ್ಥಿಗಳು ಭಾಗವಹಿಸಿ ಉತ್ತಮ ಸಾಧನೆ ಮಾಡಿದ್ದಾರೆ.

ಕಾಲೇಜಿನ ಎಂ.ಬಿ.ಎ. ಪ್ರಥಮ ವರ್ಷದ ವಿದ್ಯಾರ್ಥಿ ಎಂ. ಮಂಜುನಾಥ್ 66 ಕೆ.ಜಿ. ವಿಭಾಗದಲ್ಲಿ ಚಿನ್ನದ ಪದಕ ಗಳಿಸಿದರೆ, ಇಂಡಸ್ಟ್ರಿಯಲ್ ಆ್ಯಂಡ್ ಪ್ರೊಡಕ್ಷನ್ ಇಂಜಿನಿಯರಿಂಗ್‌ನ ವಿದ್ಯಾರ್ಥಿ ಮೊಹಮ್ಮದ್ ಕಾಸಿಂ ಬೆಳ್ಳಿ ಪದಕ ಪಡೆದು, ವಿಟಿಯುನ ಬಲಾಢ್ಯ ಮನುಷ್ಯ ಆಗಿ ಹೊರಹೊಮ್ಮಿದ್ದಾರೆ.

## ಬಾಲಕರ ಬಾಲ್‌ಬ್ಯಾಡ್‌ಮಿಂಟನ್ ವಿಶ್ವಚೇತನ ಪ. ಪೂ. ಕಾಲೇಜು ತಾಲ್ಲೂಕಿಗೆ ದ್ವಿತೀಯ



ದಾವಣಗೆರೆ, ಆ. 25- ನಗರದ ವಿಶ್ವಚೇತನ ವಿದ್ಯಾನಿಕೇತನ ವಸತಿಯುತ ಪದವಿ ಪೂರ್ವ ಕಾಲೇಜಿನ ವಿದ್ಯಾರ್ಥಿಗಳು ಪದವಿ ಪೂರ್ವ ಶಿಕ್ಷಣ ಇಲಾಖೆ ವತಿಯಿಂದ ನಗರದಲ್ಲಿ ಏರ್ಪಡಿಸಿದ್ದ ಬಾಲಕರ ಬಾಲ್ ಬ್ಯಾಡ್ ಮಿಂಟನ್ ಪಂದ್ಯಾವಳಿಯಲ್ಲಿ ವಿಜೇತರಾಗಿ ದಾವಣಗೆರೆ ತಾಲ್ಲೂಕಿಗೆ ದ್ವಿತೀಯ ಸ್ಥಾನ ಪಡೆದಿದ್ದಾರೆ.

ಡಿ.ಹು. ಸುಮೀತ್, ಹೆಚ್. ದೊರೆತೀರ್ಥರಾಜ್ ಮತ್ತು ಬಿ.ಎಲ್. ರುದ್ರೇಶ್ ಇವರುಗಳು ಜಿಲ್ಲಾ ಮಟ್ಟಕ್ಕೆ ಆಯ್ಕೆಯಾಗಿರುತ್ತಾರೆ. ಇವರಿಗೆ ಕಾಲೇಜು ಸಂಸ್ಥಾಪಕ ಅಧ್ಯಕ್ಷರಾದ ಡಾ. ವಿಜಯಲಕ್ಷ್ಮಿ ವೀರಚಮಾನೇನಿ, ಪ್ರಾಂಶುಪಾಲ ಜಿ. ವಿನೋದ್, ದೈಹಿಕ ಶಿಕ್ಷಕ ಚೌಡಪ್ಪ, ನಟರಾಜ್ ಅಭಿನಂದಿಸಿದ್ದಾರೆ.

## ಸೆ.2 ರಂದು ಹರಿಹರ ನಗರಸಭೆ ಅಧ್ಯಕ್ಷ, ಉಪಾಧ್ಯಕ್ಷ ಸ್ಥಾನಗಳಿಗೆ ಚುನಾವಣೆ




ಹರಿಹರ, ಅ. 25 - ಹರಿಹರ ನಗರಸಭೆ ಅಧ್ಯಕ್ಷ ಮತ್ತು ಉಪಾಧ್ಯಕ್ಷ ಸ್ಥಾನಕ್ಕೆ ಬರುವ ಸೆಪ್ಟೆಂಬರ್ 2 ರಂದು ಚುನಾವಣೆ ನಡೆಯಲಿದೆ ಎಂದು ಚುನಾವಣಾಧಿಕಾರಿ ತಿಳಿಸಿದ್ದಾರೆ.

ನಗರಸಭೆ ಅಧ್ಯಕ್ಷೆ ನಿಂಬಕ್ಕ ಚಂದಪೂರ್ ಮತ್ತು ಉಪಾಧ್ಯಕ್ಷ ಕೆ.ಜಿ. ಸಿದ್ದೇಶ್ ರವರಿಂದ ತೆರವಾದ ಸ್ಥಾನಕ್ಕೆ ಸರ್ಕಾರ ನಗರಸಭೆಯ ಅಧ್ಯಕ್ಷ ಸ್ಥಾನವನ್ನು ಪರಿಶಿಷ್ಟ ಪಂಗಡ ಮಹಿಳೆ (ಎಸ್ಟಿ) ಮತ್ತು ಉಪಾಧ್ಯಕ್ಷ ಸ್ಥಾನಕ್ಕೆ ಸಾಮನ್ಯ ವರ್ಗದವರಿಗೆ ಮೀಸಲಾತಿ ಘೋಷಣೆ ಮಾಡಿದ್ದು, ಅದರ ಅನ್ವಯದಂತೆ ಸೆಪ್ಟೆಂಬರ್ 2 ರಂದು ಚುನಾವಣೆ ನಡೆಯಲಿದೆ.

## ಆರ್.ಎಲ್. ಹನುಮಂತಪ್ಪ ಟ್ರಸ್ಟ್‌ನಿಂದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ

ದಾವಣಗೆರೆ, ಆ. 25 - ನಗರದ ಆರ್.ಎಲ್. ಹನುಮಂತಪ್ಪ ಚಾರಿಟಬಲ್ ಟ್ರಸ್ಟ್ ವತಿಯಿಂದ 2023-24ನೇ ಸಾಲಿನಲ್ಲಿ ಎಸ್ಸೆಸ್ಸೆಲ್ಸಿ, ದ್ವಿತೀಯ ಪಿಯುಸಿಯಲ್ಲಿ ಶೇ. 85ರಷ್ಟು ಅಂಕ ಗಳಿಸಿದ ಕುರುಹಿನಶೆಟ್ಟಿ ಸಮಾಜದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ನೀಡಲಾಗುವುದು.

ಅರ್ಜಿ ಸಲ್ಲಿಸಲು ಇದೇ ದಿನಾಂಕ 31 ಕೊನೆ ದಿನವಾಗಿದೆ. ಅರ್ಹ ವಿದ್ಯಾರ್ಥಿಗಳು ಶ್ರೀ ನೀಲಕಂಠೇಶ್ವರ ದೇವಸ್ಥಾನ, ಕುರುಹಿನಶೆಟ್ಟಿ ಸಮಾಜ, ಕೆ.ಟಿ.ಜೆ. ನಗರ, 14ನೇ ಕ್ರಾಸ್, 4ನೇ ಮೇನ್, ದಾವಣಗೆರೆ, ಮೊ : 94492 93249 ಅಥವಾ 86604 60744 ಕ್ಕೆ ಸಂಪರ್ಕಿಸಬಹುದು.

## ಗುಜರಾತ್‌ನಲ್ಲಿ ಧಾರಾಕಾರ ಮಳೆ

(1ನೇ ಪುಟದಿಂದ) ಜನಜೀವನ ಅಸ್ತವ್ಯಸ್ತವಾಗಿದೆ ಹಾಗೂ ಸಂಚಾರಕ್ಕೆ ಸಮಸ್ಯೆಯಾಗಿದೆ.

ವಲ್ಸದ್ ಜಿಲ್ಲೆಯ ವಾಪಿ ತಾಲ್ಲೂಕಿನಲ್ಲಿ 24 ಗಂಟೆಗಳಲ್ಲಿ 326 ಮಿ.ಮೀ. ಮಳೆಯಾಗಿದೆ. ನವ್ಸಾರಿಯ ಖೇರ್ಗಾಮ್‌ನಲ್ಲಿ 248 ಮಿ.ಮೀ. ಮಳೆಯಾಗಿದೆ.

## ಸಾಲ ಸೌಲಭ್ಯಕ್ಕಾಗಿ ಅರ್ಜಿ ಆಹ್ವಾನ

ದಾವಣಗೆರೆ, ಜು. 25 - ರಾಜ್ಯ ಆರ್ಯ ವೈಶ್ಯ ಸಮುದಾಯ ಅಭಿವೃದ್ಧಿ ನಿಗಮದಿಂದ ಪ್ರಸಕ್ತ ಸಾಲಿನಲ್ಲಿ ವಿವಿಧ ಯೋಜನೆಗಳಡಿ ಸಾಲ-ಸೌಲಭ್ಯಕ್ಕಾಗಿ ಅರ್ಜಿ ಆಹ್ವಾನಿಸಲಾಗಿದೆ. ಈ ವೆಬ್‌ಸೈಟ್ ಮೂಲಕ kacdc.karnataka.gov.in ಅರ್ಜಿ ಸಲ್ಲಿಸಬಹುದಾಗಿದ್ದು, ಆ.31 ಅರ್ಜಿ ಸಲ್ಲಿಸಲು ಕೊನೆ ದಿನವಾಗಿದೆ. ಮಾಹಿತಿಗಾಗಿ 081 92230934 ಸಂಪರ್ಕಿಸಿ.

## ನಗರದಲ್ಲಿ ಇಂದು ಮಡಿವಾಳ ಮಾಚಿದೇವರ ಸಂಸ್ಮರಣೋತ್ಸವ

ಜಿಲ್ಲಾ ಶ್ರೀ ಮಡಿವಾಳ ಮಾಚಿದೇವ ಸಂಘ, ಮಹಿಳಾ ಸಂಘ ಹಾಗೂ ಮಡಿಕಟ್ಟೆ ಸಮಿತಿ ಇವರ ವತಿಯಿಂದ ಶ್ರೀ ಮಡಿವಾಳ ಮಾಚಿದೇವರ ಶ್ರಾವಣ ಮಾಸದ ಸಂಸ್ಮರಣೋತ್ಸವ ಹಾಗೂ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ಕಾರ್ಯಕ್ರಮವನ್ನು ಮಾಚಿದೇವ ಸಮುದಾಯ ಭವನದಲ್ಲಿ ಹಮ್ಮಿಕ್ಕೊಳ್ಳಲಾಗಿದೆ.

ಬೆಳಿಗ್ಗೆ 7 ರಿಂದ ಶ್ರೀ ವಿನಾಯಕ, ಶ್ರೀ ಈಶ್ವರ, ಶ್ರೀ ನಂದೀಶ ಮತ್ತು ಶ್ರೀ ಆಂಜನೇಯ ಸ್ವಾಮಿ ಹಾಗೂ ಶ್ರೀ ಮಡಿವಾಳ ಮಾಚಿದೇವಸ್ವಾಮಿಗೆ ರುದ್ರಾಭಿಷೇಕ ಹಾಗೂ ವಿಶೇಷ ಅಲಂಕಾರದೊಂದಿಗೆ ಪೂಜೆಯನ್ನು ನೆರವೇರಿಸಲಾಗುವುದು ಹಾಗೂ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ಸಹ ನಡೆಸಲಾಗುವುದು.

ಚಿತ್ರದುರ್ಗ ಮಾಚಿದೇವ ಮಹಾಮಠದ ಶ್ರೀ ಬಸವ ಮಾಚಿದೇವ ಸ್ವಾಮೀಜಿ ಮತ್ತು ಮೂಡಬಿದಿರೆಯ ಶ್ರೀ ಕ್ಷೇತ್ರ ಕರಿಂಜೆಯ ಮುಕ್ತಾನಂದ ಸ್ವಾಮೀಜಿ ಸಾನ್ನಿಧ್ಯದಲ್ಲಿ ಬೆಳಿಗ್ಗೆ 11.30 ರಿಂದ ನಡೆಯುವ ಸಭಾ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸಂಘದ ಜಿಲ್ಲಾಧ್ಯಕ್ಷ ಎಂ. ನಾಗೇಂದ್ರಪ್ಪ ವಹಿಸಲಿದ್ದಾರೆ.

ಸಚಿವ ಎಸ್. ಎಸ್. ಮಲ್ಲಿಕಾರ್ಜುನ್ ಕಾರ್ಯಕ್ರಮ ಉದ್ಘಾಟಿಸಲಿದ್ದು, ಮುಖ್ಯ ಅತಿಥಿಗಳಾಗಿ ಶಾಸಕ ಶಾಮನೂರು ಶಿವಶಂಕರಪ್ಪ, ಸಂಸದೆ ಡಾ. ಪ್ರಭಾ ಮಲ್ಲಿಕಾರ್ಜುನ್, ಮಾಜಿ ಸಚಿವ ಎಸ್.ಎ. ರವೀಂದ್ರನಾಥ್, ಮಾಜಿ ಸಚೇತಕ ಡಾ. ಹೆಚ್ ಶಿವಯೋಗಿಸ್ವಾಮಿ, ಮೇಯರ್ ವಿನಾಯಕ ಪೈಲ್ವಾನ್, ಯಶೋಧ ಯಗ್ಗಪ್ಪ, ದೂಡಾ ಅಧ್ಯಕ್ಷ ದಿನೇಶ್ ಕೆ. ಶೆಟ್ಟಿ, ವಾಣಿಜ್ಯ ತೆರಿಗೆ ಇಲಾಖೆ ಜಂಟಿ ಆಯುಕ್ತ ಎಸ್. ಮಹಾಂತೇಶ್ ಸೇರಿದಂತೆ ಮತ್ತಿತರರು ಪಾಲ್ಗೊಳ್ಳಲಿದ್ದಾರೆ.

ವಿಶೇಷ ಆಹ್ವಾನಿತರಾಗಿ ಪಾಲಿಕೆ ವಿಪಕ್ಷ ನಾಯಕ ಕೆ. ಪ್ರಸನ್ನ ಕುಮಾರ್, ಸದಸ್ಯ ಎ. ನಾಗರಾಜ್, ವರದಿಗಾರರ ಕೂಟದ ಪ್ರಧಾನ ಕಾರ್ಯದರ್ಶಿ ಎಂ. ವೈ ಸತೀಶ್, ಸಂಘದ ಗೌರವಾಧ್ಯಕ್ಷ ಎಂ.ಎ ಬಸವರಾಜಪ್ಪ ಸೇರಿದಂತೆ ಮತ್ತಿತರರು ಭಾಗವಹಿಸಲಿದ್ದಾರೆ.

## ನಾಗತಿ ಕಟ್ಟೆ ತಾಂಡದಲ್ಲಿ ಇಂದು, ನಾಳೆ ಧಾರ್ಮಿಕ ಆಚರಣೆ, ಜಾನಪದ ಕಲಾ ಉತ್ಸವ

ಶ್ರೀಕೃಷ್ಣ ದೇವಸ್ಥಾನ ಟ್ರಸ್ಟ್, ಕಲಾ ಉತ್ಸವ ಸಮಿತಿ, ಯುವಕರ ಸಂಘ ಹಾಗೂ ಪೂಜಾರ ವಂಶಸ್ಥರು ಇವರ ವತಿಯಿಂದ ಹರಪನಹಳ್ಳಿ ತಾಲ್ಲೂಕಿನ ಶ್ರೀ ಕ್ಷೇತ್ರ ನಾಗತಿ ಕಟ್ಟೆ ತಾಂಡದಲ್ಲಿ ಶ್ರೀಕೃಷ್ಣ ಜನ್ಮಾಷ್ಠಮಿ ಪ್ರಯುಕ್ತ ಇಂದು ಮತ್ತು ನಾಳೆ ಧಾರ್ಮಿಕ ಆಚರಣೆ ಮತ್ತು ವಿವಿಧ ಪೂಜಾ ಕಾರ್ಯಕ್ರಮಗಳನ್ನು ಆಯೋಜಿಸಲಾಗಿದೆ.

ಇಂದು ಸಂಜೆ 6ಕ್ಕೆ ಸ್ವಾಮಿಯ ಅಭಿಷೇಕ, ಅಲಂಕಾರ, ಮಂಗಳಾರತಿ ಪೂಜಾ ಕಾರ್ಯಕ್ರಮ ರಾತ್ರಿ 12 ಗಂಟೆಗೆ 9ನೇ ದಿನದ ಉಪವಾಸದೊಂದಿಗೆ ಪ್ರಥಮ ಹೋಮ, (ದಾಳ್ ಬೋಗ್) ಪ್ರಸಾದ ವಿತರಣೆ ನಡೆಯಲಿದೆ.

ನಾಳೆ ಮಂಗಳವಾರ ಬೆಳಿಗ್ಗೆ ಸ್ವಾಮಿಯ ಐತಿಹಾಸಿಕ ಚಿರಸ್ವರೂಪಿ ದೇವರ ದಿವ್ಯ ದರ್ಶನ ಮತ್ತು ತೊಟ್ಟಿಲು ಪೂಜಾ ಕಾರ್ಯಕ್ರಮ. ಬೆಳಗ್ಗೆ 11 ಗಂಟೆಗೆ ನಡೆಯಲಿರುವ ಶ್ರೀ ಕೃಷ್ಣ ರಥೋತ್ಸವ ಮತ್ತು ಗ್ರಾಮೀಣ ಜನಪದ ಕಲಾ ಮೇಳವನ್ನು ಶಾಸಕಿ ಲತಾ ಮಲ್ಲಿಕಾರ್ಜುನ್ ಉದ್ಘಾಟಿಸಲಿದ್ದು, ಸಂಜೆ 5.30ಕ್ಕೆ ಮಹಾಹೋಮ (ದಾಳ್ ಬೋಗ್) ಮತ್ತು ಮಹಾಮಂಗಳಾರತಿ ಹಾಗೂ ಸರ್ವ ಭಕ್ತಾದಿಗಳಿಗೆ ಅನ್ನ ಸಂತರ್ಪಣೆ ನಡೆಯಲಿದೆ. ರಾತ್ರಿ 8.30ಕ್ಕೆ ರಸ ಮಂಜರಿ ಕಾರ್ಯಕ್ರಮ ಜರುಗಲಿದೆ.

ಆ.27 ರಂದು ನಡೆಯಲಿರುವ ಬೆಳಿಗ್ಗೆ 11ಕ್ಕೆ ನಡೆಯಲಿರುವ ಕಲಾ ಉತ್ಸವದಲ್ಲಿ ಭಾಗವಹಿಸಲಿಚ್ಚಿಸುವ ಕಲಾ ತಂಡಗಳಿಗೆ ಊಟ, ವಸತಿ ವ್ಯವಸ್ಥೆ ಕಲ್ಪಿಸಲಾಗಿದ್ದು, ಭಾಗವಹಿಸುವವರು ಕೃಷ್ಣಾನಾಯ್ಕ್ ಮೊ: 9901241448 ಗೆ ಸಂಪರ್ಕಿಸಬಹುದಾಗಿದೆ.

## ಕಂಕಣ ತೊಡುವುದೇ ರಕ್ಷಾಬಂಧನ

(1ನೇ ಪುಟದಿಂದ) ಅಥಿತಿಗಳಾಗಿ ಪಾಲ್ಗೊಂಡಿದ್ದರು.

ದಂತವೈದ್ಯೆ ಹಾಗೂ ಲೇಖಕಿ ಡಾ. ರೂಪಶ್ರೀ ಶಶಿಕಾಂತ್ ಉಪನ್ಯಾಸ ನೀಡಿದರು.

ಜಿಲ್ಲಾ ವರದಿಗಾರರ ಕೂಟದ ಅಧ್ಯಕ್ಷ ನಾಗರಾಜ್ ಬಡದಾಳ್, ಕೂಟದ ಖಜಾಂಚಿ ಪವನ್ ಐರಣಿ, ಸಾರ್ವಜನಿಕ ಸಂಪರ್ಕಾಧಿಕಾರಿ ಪಿ.ಎಸ್. ಲೋಕೇಶ್ ಹಾಗೂ ಜಿಲ್ಲಾ ವರದಿಗಾರರ ಕೂಟದ ನೂತನ ಪದಾಧಿಕಾರಿಗಳಿಗೆ ಗೌರವ ರಕ್ಷೆ ನೀಡಲಾಯಿತು.

ಕಾರ್ಯನಿರತ ಪತ್ರಕರ್ತರ ಸಂಘದ ಜಿಲ್ಲಾಧ್ಯಕ್ಷ ಇ.ಎಂ.ಮಂಜುನಾಥ ಸ್ವಾಗತಿಸಿದರು. ಡಾ. ಸಿದ್ದೇಶ್ ಕಾರ್ಯಕ್ರಮ ನಿರೂಪಿಸಿದರು. ರಾಜಯೋಗ ಶಿಕ್ಷಕಿ ಬ್ರಹ್ಮಾಕುಮಾರಿ ಶಾಂತಾ ವಂದಿಸಿದರು.

## ಕರ್ತವ್ಯನಿರತ ವೈದ್ಯರ ಮೇಲೆ ಹಲ್ಲೆ

(1ನೇ ಪುಟದಿಂದ) ಬಳಿಕ ಬಾಲಕಿಯ ಆರೋಗ್ಯದಲ್ಲಿ ತೀವ್ರ ಏರುಪೇರು ಕಾಣಿಸಿಕೊಂಡಿತ್ತು. ಚಿ

ಕಿತ್ಸೆ ನೀಡುತ್ತಿರುವಾಗ ಐಸಿಯುಗೆ ನುಗ್ಗಿದ ರವಿಕುಮಾರ್, ವೈದ್ಯರ ಮೇಲೆ ಹಲ್ಲೆ ನಡೆಸಿ ಅವಾಚ್ಯ ಶಬ್ದಗಳಿಂದ ನಿಂದಿಸಿದ್ದಾರೆ ಎಂದು ಠಾಣೆಗೆ ನೀಡಿದ ದೂರಿನಲ್ಲಿ ವೈದ್ಯರು ತಿಳಿಸಿದ್ದಾರೆ.

## ವಚನಾಮೃತ ಬಳಗದಿಂದ ಅಕ್ಕನಾಗಮ್ಮ ಮತ್ತು ನುಲಿಯ ಚಂದಯ್ಯ ಜಯಂತ್ಯೋತ್ಸವ




ದಾವಣಗೆರೆ, ಆ. 25- ವಚನಾಮೃತ ಬಳಗದವರಿಂದ ಹುಣ್ಣಿಮೆ ಕಾರ್ಯಕ್ರಮದ ಪ್ರಯುಕ್ತ ಶರಣೆ ಅಕ್ಕನಾಗಮ್ಮ ಮತ್ತು ಶರಣ ನುಲಿಯ ಚಂದಯ್ಯ ಅವರ ಜಯಂತ್ಯೋತ್ಸವವನ್ನು ಆಚರಿಸಲಾಯಿತು.

ವಚನಾಮೃತ ಬಳಗದ ಸೌಮ್ಯ ಸತೀಶ್ ಕಾರ್ಯಕ್ರಮ ಆಯೋಜಿಸಿದ್ದು, ಕಾರ್ಯಕ್ರಮದಲ್ಲಿ ವಚನಾಮೃತ ಬಳಗದವರಿಗೆ.. ನುಲಿಯ ಚಂದಯ್ಯ ಅವರ ವಚನವನ್ನು ಗುರು ರೇವಣಸಿದ್ದಪ್ಪ ಹೇಳಿಕೊಟ್ಟರು.

ಅಕ್ಕನಾಗಮ್ಮ ಮತ್ತು ನುಲಿಯ ಚಂದಯ್ಯ ಅವರ ಪರಿಚಯ ಹಾಗೂ ವಿಸ್ತಾರವಾಗಿ ಮಮತ ನಾಗರಾಜ್ ಅವರು ತಿಳಿಸಿಕೊಟ್ಟರು.

ನಂತರ ಸದಸ್ಯರೆಲ್ಲರಿಗೂ ಸ್ಪರ್ಧೆಯನ್ನು ಏರ್ಪಡಿಸಲಾಗಿತ್ತು.

ಸ್ಪರ್ಧೆಯಲ್ಲಿ ನೂತನ ಸದಸ್ಯರಾಗಿ ಆಗಮಿಸಿದ ಸೌಮ್ಯ ಬಸವರಾಜ್ ಬಹುಮಾನ ಪಡೆದರು.

ಕಾರ್ಯಕ್ರಮದಲ್ಲಿ ತನುಜಾ ಬೆಳ್ಳುಳ್ಳಿ, ರತ್ನ ಕಾಟ್ವೆ, ಸುಮಾ, ಗೀತಾ, ಸರೋಜ, ಜ್ಯೋತಿ, ದೀಪ ಕಿರಣ್, ನಿರ್ಮಲ, ಇನ್ನು ಮುಂತಾದವರು ಭಾಗವಹಿಸಿದ್ದರು. ಶಾಂತ ಶಿವಶಂಕರ್ ಕಾರ್ಯಕ್ರಮ ನಿರ್ವಹಿಸಿದರು.

## ಯುವಕರ ನೆರವಿಗೆ ಸಂಘಟಿತ ಪ್ರಯತ್ನ

(1ನೇ ಪುಟದಿಂದ) ನೆರವಾಗಬಲ್ಲೆವು ಎಂದು ತಿಳಿಸಿದ್ದಾರೆ. ಇಂತಹ ಪ್ರಯತ್ನಗಳಿಂದ ನಮ್ಮ ಪ್ರಜಾಪ್ರಭುತ್ವ ಬಲವಾಗುತ್ತದೆ ಎಂದು ಪ್ರಧಾನಿ ಹೇಳಿದರು.

ಸಂಘಟಿತ ಪ್ರಯತ್ನದಿಂದಾಗಿ, ರಾಜಕೀಯ ಹಿನ್ನೆಲೆ ಹೊಂದಿರದ ಯುವಕರೂ ಸಹ ರಾಜಕೀಯಕ್ಕೆ ಬರಲು ಸಾಧ್ಯವಾಗಲಿದೆ. ಅವರ ಅನುಭವ ದೇಶಕ್ಕೆ ಉಪಯುಕ್ತವಾ ಗಲಿದೆ ಎಂದು ಮೋದಿ ವಿಶ್ವಾಸ ವ್ಯಕ್ತಪಡಿಸಿದರು. ಸ್ವಾತಂತ್ರ್ಯ ಹೋರಾಟದ ಸಮಯದಲ್ಲೂ ರಾಜಕೀಯ ಹಿನ್ನೆಲೆ ಹೊಂದಿರದವರು, ಮುಂದೆ ಬಂದಿದ್ದರು.

ಅವರು ದೇಶದ ಸ್ವಾತಂತ್ರ್ಯ ಹೋರಾಟಕ್ಕೆ ಶ್ರಮಿಸಿದ್ದರು. ಮತ್ತೊಮ್ಮೆ ಅದೇ ಸ್ಫೂರ್ತಿಯಿಂದ ಮುನ್ನಡೆದು ವಿಕಸಿತ ಭಾರತದ ಗುರಿ ತಲುಪಬೇಕಿದೆ ಎಂದು ಪ್ರಧಾನಿ ಹೇಳಿದರು.

## ಕೊಮಾರನಹಳ್ಳಿ ಹೊಸೂರು ಶಾಲೆಗೆ ಆಯ್ಕೆ



ಮಲೇಬೆನ್ನೂರು, ಆ. 25 - ಕೊಮಾರನಹಳ್ಳಿ ಗ್ರಾಮದ ಹೊಸೂರಿನ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಯ ಎಸ್‌ಡಿಎಂಸಿ ನೂತನ ಅಧ್ಯಕ್ಷರಾಗಿ ಜಿ.ಆರ್. ಹಾಲೇಶ್ ಮತ್ತು ಉಪಾಧ್ಯಕ್ಷರಾಗಿ ಶಿಲ್ಪ ಅವರು ಆಯ್ಕೆಯಾಗಿದ್ದಾರೆ. ಸದಸ್ಯರಾಗಿ ಕೆ.ಹೆಚ್. ಪರಶುರಾಮ್, ಎಂ. ಮಂಜುನಾಥ್, ಲಕ್ಷ್ಮಿ, ರೇಖಾ, ಕೆ.ಎನ್. ತಿಪ್ಪೇಶ್, ಮಾಲಾ ರಂಜಿತಾ, ಕೆ.ಎನ್. ಸಂತೋಷ್ ಕುಮಾರ್, ಉಮೇಶ್, ಕೆ.ಎಂ. ಮಹೇಶ್, ನಾಗರಾಜ್, ಸೌಭಾಗ್ಯ, ಐ. ಎನ್. ರಂಗನಾಥ್, ಸೌಮ್ಯಶ್ರೀ, ಬಿ.ಸಿ. ರೇಖಾ, ಐ.ಸಿ. ರಂಜಿತಾ ಇವರುಗಳು ಆಯ್ಕೆಯಾಗಿದ್ದಾರೆ.

## ನಗರದ ಲೇಬರ್ ಕಾಲೋನಿಯಲ್ಲಿ ಇಂದು ಶ್ರೀ ಕರಿಬಸವೇಶ್ವರ ಸ್ವಾಮಿಗೆ ಮಹಾರುದ್ರಾಭಿಷೇಕ



ಲೇಬರ್ ಕಾಲೋನಿ 6ನೇ ಕ್ರಾಸ್‌ನಲ್ಲಿರುವ ಶ್ರೀ ಗುರು ಕರಿಬಸವೇಶ್ವರ ಸ್ವಾಮಿ ದೇವಸ್ಥಾನದಲ್ಲಿ ಇಂದು ಬೆಳಿಗ್ಗೆ 6 ಗಂಟೆಗೆ ಮಹಾರುದ್ರಾಭಿಷೇಕ, 8 ಗಂಟೆಗೆ ಮಹಾಮಂಗಳಾರತಿ ಹಾಗೂ ಸಂಜೆ 7.30ಕ್ಕೆ ಪ್ರಸಾದ ವಿನಿಯೋಗವಿರುತ್ತದೆ. ದೇವಸ್ಥಾನದ ವ್ಯವಸ್ಥಾಪಕ ಪಿ.ಎನ್.ಲೋಕೇಶಪ್ಪ (97393-94846) ಇವರನ್ನು ಸಂಪರ್ಕಿಸುವುದು.

## ಕಬಡ್ಡಿ : ಮೋತಿವೀರಪ್ಪ ಕಾಲೇಜು ಪ್ರಥಮ

ದಾವಣಗೆರೆ, ಆ. 25 - ನಿಟುವಳ್ಳಿಯ ಶ್ರೀ ಮಂಜುನಾಥ ಸ್ವಾಮಿ ಸ್ವತಂತ್ರ ಪದವಿ ಪೂರ್ವ ಕಾಲೇಜಿನಿಂದ ಆಯೋಜಿಸಿದ್ದ ಕಬಡ್ಡಿ ಕ್ರೀಡಾ ಕೂಟದಲ್ಲಿ ಮೋತಿವೀರಪ್ಪ ಸರ್ಕಾರಿ ಪದವಿ ಪೂರ್ವ ಕಾಲೇಜು ಪ್ರಥಮ ಸ್ಥಾನ ಮತ್ತು ಬಾಲಕರ ಸರ್ಕಾರಿ ಪದವಿ ಪೂರ್ವ ಕಾಲೇಜು ದ್ವಿತೀಯ ಸ್ಥಾನವನ್ನು ಪಡೆದುಕೊಂಡಿದೆ.


## ನಗರದ ಗೌರಮ್ಮಾಜಿ ಅಧ್ಯಾತ್ಮ ಮಂದಿರದಲ್ಲಿ ಸಪ್ತಾಹ



ವರ್ತುಲ ರಸ್ತೆಯಲ್ಲಿರುವ ಶ್ರೀ ಸ.ಸ. ಮಾತೋಶ್ರೀ ಗೌರಮ್ಮಾಜಿ ಅಧ್ಯಾತ್ಮ ಮಂದಿರದಲ್ಲಿ ಶ್ರಾವಣ ಸಾಧನ ಸಪ್ತಾಹವು ನಡೆಯುತ್ತಿದೆ.

ಇಂದು ರಾತ್ರಿ 12 ಗಂಟೆಗೆ ಶ್ರೀ ಕೃಷ್ಣ ಜನ್ಮಾಷ್ಟಮಿ, ನಾಳೆ ಮಂಗಳವಾರ ಜಾಗರಣೆ ಮತ್ತು 28ರ ಬುಧವಾರ ಮಧ್ಯಾಹ್ನ 12 ಗಂಟೆಗೆ ಪುಷ್ಪವೃಷ್ಟಿಗೈಯ್ಯುವ ಕಾರ್ಯಕ್ರಮ ನಂತರ ಮಹಾಪ್ರಸಾದ ಕಾರ್ಯಕ್ರಮ ಜರುಗಲಿದೆ.

## ಹರಿಹರ : ವಿವಾಹ ಮಹೋತ್ಸವ ಸರಳೀಕರಣಕ್ಕೆ ಇಸ್ಲಾಂ ಧರ್ಮದ ಬೆಂಬಲ



ಹರಿಹರ, ಆ. 25 - ವಿವಾಹ ಮಹೋತ್ಸವಗಳ ಸರಳೀಕರಣಕ್ಕೆ ಇಸ್ಲಾಂ ಧರ್ಮ ಬೆಂಬಲ ನೀಡುತ್ತದೆ ಎಂದು ಮೌಲಾನಾ ಖಾಜಿ ಸೈಯದ್ ಶಂಷುದ್ದೀನ್ ಬರ್ಕಾತಿ ಹೇಳಿದರು.

ಹಿಂದೂಸ್ಥಾನ್ ಟ್ರೇಡರ್ಸ್ ವೆಲ್ಫೇರ್ ಕಮಿಟಿ, ಲಾರಿ ಮಾಲೀಕರು ಮತ್ತು ಚಾಲಕರ ಸಂಘದಿಂದ ನಗರದ ಭಾಗೀರಥಿ ಕಲ್ಯಾಣ ಮಂಟಪದಲ್ಲಿ ಇಂದು ಆಯೋಜಿಸಿದ್ದ ಮುಸ್ಲಿಂ ಸಮುದಾಯದವರ ಸಾಮೂಹಿಕ ವಿವಾಹ ಮಹೋತ್ಸವದ ಸಾನ್ನಿಧ್ಯ ವಹಿಸಿ ಅವರು ಮಾತನಾಡಿದರು.

ವಿವಾಹ ಸೇರಿದಂತೆ, ಕುಟುಂಬದ ಇತರೆ ಶುಭ ಮಹೋತ್ಸವಗಳನ್ನು ಸರಳವಾಗಿ ಆಚರಿಸಿದವರಿಗೆ ಪುಣ್ಯ ಪ್ರಾಪ್ತಿಯಾಗುತ್ತದೆ. ಪ್ರವಾದಿ ಮೊಹಮ್ಮದ್ ರವರೂ ಕೂಡ ತಮ್ಮ ಕುಟುಂಬದ ಸದಸ್ಯರ ವಿವಾಹಗಳನ್ನು ಅತ್ಯಂತ ಸರಳವಾಗಿ ಆಚರಿಸಿ, ನಮಗೆಲ್ಲ ಮಾದರಿಯಾಗಿದ್ದಾರೆಂದರು.

ಕಾಂಗ್ರೆಸ್ ಮುಖಂಡ ನಂದಿಗಾವಿ ಶ್ರೀನಿವಾಸ್ ಮಾತನಾಡಿ, ವಿವಾಹಕ್ಕೆ ಮಾಡಬೇಕಿದ್ದ ಖರ್ಚನ್ನು ನಿಮ್ಮ ಮಕ್ಕಳ ವಿದ್ಯಾಭ್ಯಾಸಕ್ಕೆ ಮೀಸಲಿಡಿ, ಆದರ್ಶ ಜೀವನ ನಡೆಸಿರಿ ಎಂದು ನವದಂಪತಿಗಳಿಗೆ ಕಿವಿ ಮಾತು ಹೇಳಿದರು.

ಸಮರ್ಥ ಎಸ್.ಎಸ್. ಮಲ್ಲಿಕಾರ್ಜುನ ಮಾತನಾಡಿ, ಮಕ್ಕಳ ವಿವಾಹಗಳನ್ನು ನೆರವೇ ರಿಸಿದ ಕುಟುಂಬದವರು ಹಲವು ವರ್ಷಗಳ ಕಾಲ ಆರ್ಥಿಕ ಸಂಕಷ್ಟಕ್ಕೆ ಈಡಾಗುತ್ತಾರೆ. ವಿವಾಹಗಳನ್ನು ಸರಳವಾಗಿ ಆಚರಿಸುವ ಪರಂಪರೆ ಸಮಾಜದಲ್ಲಿ ಬೆಳೆಯಬೇಕೆಂದರು.

ಅಂಜುಮನ್ ಸಂಸ್ಥೆ ಅಧ್ಯಕ್ಷ ಸೈಯದ್ ಏಜಾಜ್ ಮಾತನಾಡಿ, ಈ ಸಾಮೂಹಿಕ ವಿವಾಹ ಮಹೋತ್ಸವದಲ್ಲಿ 8 ಜೋಡಿ ನವದಂಪತಿಗಳಿಗೆ ತಲಾ ಒಂದೂವರೆ ಲಕ್ಷಕ್ಕಿಂತ ಹೆಚ್ಚಿನ ಮೌಲ್ಯದ ದಿನ ನಿತ್ಯದ ವಸ್ತುಗಳನ್ನು ಆಯೋಜಕರು ನೀಡಿರುವುದು ಶ್ಲಾಘನೀಯ ಎಂದರು.

ಹಿಂದೂಸ್ಥಾನ್ ಟ್ರೇಡರ್ಸ್ ವೆಲ್ಫೇರ್ ಕಮಿಟಿ ಮುಖಂಡ ಅಬು ತುರಾಬ್ ಮಾತನಾಡಿ, ಎಲ್ಲಿಯೂ ದೇಣಿಗೆ ಎತ್ತದೆ ಲಾರಿ ಮಾಲೀಕರು, ಚಾಲಕರು ಹಾಗೂ ಕೆಲವು ವ್ಯಾಪಾರಿಗಳು ಪರಸ್ಪರ ಹಣ ಹಾಕಿ ಈ ಮಹೋತ್ಸವ ಆಯೋಜಿಸಿದೆ. ಇಂತಹ ಮಹೋತ್ಸವಗಳಲ್ಲಿ ಮದುವೆಯಾದ ದಂಪತಿಗಳಿಗೆ ವಕ್ಫ್ ಅಥವಾ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯಿಂದ ಪ್ರೋತ್ಸಾಹ ಧನ ನೀಡುವ ಯೋಜನೆಯನ್ನು ಸರ್ಕಾರ ಜಾರಿ ಮಾಡಬೇಕೆಂದರು.

ಅಂಜುಮನ್ ಸಂಸ್ಥೆ ಕಾರ್ಯದರ್ಶಿ ಆಸಿಫ್ ಜುನೈದಿ, ನಗರಸಭಾ ಸದಸ್ಯರಾದ ಎಂ.ಎಸ್. ಬಾಬುಲಾಲ್, ಸೈಯದ್ ಅಲೀಂ, ಲಾರಿ ಮಾಲೀಕರ ಸಂಘದ ಅಧ್ಯಕ್ಷ ಸೈಯದ್ ಯೂಸುಫ್, ಕಾರ್ಯದರ್ಶಿ ಜಕಾಉಲ್ಲಾ, ಪದಾಧಿಕಾರಿಗಳಾದ ಜಪಾನ್ ರಫೀಕ್, ಮೊಹ್ಮದ್ ರಫೀಕ್, ಫಯಾಜ್ ಅಹ್ಮದ್, ಸೈಯದ್ ಅಬೂಜರ್, ಕರೀಂ ಸಾಬ್, ಸೈಯದ್ ಇಸ್ಮಾಯಿಲ್, ಮಹಬೂಬ್ ಸಾಬ್, ಬಿಸ್ಮಿಲ್ಲಾ ರಫೀಕ್, ಅಸ್ಲಂ, ಮೊಹ್ಮದ್ ರಫೀಕ್, ಶಶಿನಾಯ್ಕ್, ದೋಸ್ತಾನಾ ಖಲೀಲ್ ಸಾಬ್, ಹಾಜಿ ಅಲಿ, ಸೈಯದ್ ಸನಾಉಲ್ಲಾ, ಗುತ್ತೂರು ನಾಸಿರ್ ಪೈಲ್ವಾನ್, ಕೆ. ರಿಯಾಜ್ ಅಹ್ಮದ್, ಸೈಯದ್ ಜಬಿಉಲ್ಲಾ, ಗೌಸ್‌ಪೀರ್, ಸೈಯದ್ ಮುಜಾಮ್ಮಿಲ್, ಆಸಿಫ್ ಅಖ್ತರ್, ರಹಮಾನ್ ಸಾಬ್, ಅಬು ಸೈಯದ್, ಅಬು ಸ್ವಾಲೇಹಾ, ದಾದಾಪೀರ್ ಭಾನುವಳ್ಳಿ ಇದ್ದರು.


under RBI Licence

IREP Credit Capital Pvt Ltd

opened in Davanagere





on 9th Aug 2024

1st Branch in karanataka

IREP credit capital is a Non Deposit taking NBFC headqaurted in Mumbai offering secured business loan to MSME

Contcat : #288-1 & 3C, 2nd Floor Near Vidyarthi Bahvan, Davanagere - 577002

M : +91 90196 90918

# ಉತ್ತಮ ಜೀವನಕ್ಕೆ ವಚನ ಸಾಹಿತ್ಯ ಸಹಕಾರಿ

## ತಾಲ್ಲೂಕು ಕಸಾಪ ಕಾರ್ಯಕ್ರಮದಲ್ಲಿ ಶಸಾಪ ಕಾರ್ಯದರ್ಶಿ ಭರಮಣ್ಣ ಮೈಸೂರು



ದಾವಣಗೆರೆ, ಆ. 25 - ತಾಲ್ಲೂಕು ಕಸಾಪ, ಎ.ಆರ್.ಜಿ. ಪದವಿಪೂರ್ವ ಕಾಲೇಜು, ಹಿರಿಯ ನಾಗರಿಕರ ಸಹಾಯವಾಣಿ ಇವರ ಸಹಯೋಗ ದಲ್ಲಿ ಕಾಲೇಜಿನ ಆವರಣದಲ್ಲಿ ಈಚೆಗೆ ಶಾಲಾ-ಕಾಲೇಜು ಅಂಗಳದಲ್ಲಿ ಸಾಹಿತ್ಯೋತ್ಸವದ ಅಂಗ ವಾಗಿ ದತ್ತಿ ಉಪನ್ಯಾಸ ಕಾರ್ಯಕ್ರಮ ನಡೆಯಿತು.

'ಉತ್ತಮ ವ್ಯಕ್ತಿತ್ವ ರೂಪಿಸುವಲ್ಲಿ ವಚನ ಸಾಹಿತ್ಯದ ಪಾತ್ರ' ವಿಷಯ ಕುರಿತು ಮಾತನಾಡಿದ ಜಿಲ್ಲಾ ಶರಣ ಸಾಹಿತ್ಯ ಪರಿಷತ್ತಿನ ಕಾರ್ಯದರ್ಶಿ ಭರಮಣ್ಣ ಮೈಸೂರು ಅವರು, ಉತ್ತಮ ಜೀವನ ರೂಪಿಸಿಕೊಳ್ಳಲು ವಚನ ಸಾಹಿತ್ಯವು ಸಹಕಾರಿಯಾಗಿದೆ. 12ನೇ ಶತಮಾನದಲ್ಲೇ ಶರಣರು ವಚನಗಳ ಮೂಲಕ ಸಮಾಜವನ್ನು ತಿದ್ದಿದ್ದಾರೆ ಎಂದು ಹೇಳಿದರು.

ತಾಲ್ಲೂಕು ಕಸಾಪ ಅಧ್ಯಕ್ಷೆ ಸುಮತಿ ಜಯಪ್ಪ ಪ್ರಾಸ್ತಾವಿಕ ಮಾತನಾಡಿದರು. ಉಪ ನ್ಯಾಸಕ ಬಸವರಾಜ್ ಕಲ್ಕಟ್ಟಿ ಸ್ವಾಗತಿಸಿದರು. ಉಪನ್ಯಾಸಕಿ ಜಯಶೀಲ ನಿರೂಪಿಸಿದರು.

ತಾಲ್ಲೂಕು ಕಸಾಪ ನಿರ್ದೇಶಕ ಷಡಾಕ್ಷರಪ್ಪ ಎಂ. ಬೇತೂರು ವಂದಿಸಿದರು. ರಕ್ಷಿತಾ ಪ್ರಾರ್ಥಿಸಿದರು.

ಎ.ಆರ್.ಜಿ. ಪದವಿಪೂರ್ವ ಕಾಲೇಜಿನ ಪ್ರಾಚಾರ್ಯ ಕೆ. ಬೊಮ್ಮಣ್ಣ, ಜಿಲ್ಲಾ ಶರಣ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಪರಮೇಶ್ವರಪ್ಪ, ಉಪನ್ಯಾಸಕ ವೈ.ಜಿ. ಪ್ರದೀಪ್ ಹಾಗೂ ಡಿ.ಬಿ. ಬಸವರಾಜ್ ಉಪಸ್ಥಿತರಿದ್ದರು.

# ಮಹಿಳೆಯರ ಮೇಲಿನ ಅಪರಾಧ ಕ್ಷಮಿಸಲಾಗದ ಪಾಪ : ಮೋದಿ

ಜಲಗಾಂವ್ (ಮಹಾರಾಷ್ಟ್ರ), ಆ. 25 - ಮಹಿಳೆಯರ ಮೇಲೆ ಅಪರಾಧ ಎಸಗುವುದು ಕ್ಷಮಿಸಲಾಗದ ಪಾಪ. ತಪ್ಪು ಮಾಡಿದವರನ್ನು ಬಿಡಲಾಗದು ಎಂದು ಪ್ರಧಾನ ಮಂತ್ರಿ ನರೇಂದ್ರ ಮೋದಿ ಹೇಳಿದ್ದಾರೆ.

ಮಹಾರಾಷ್ಟ್ರದ ಜಲಗಾಂವ್‌ನಲ್ಲಿ ಆಯೋಜಿಸಲಾಗಿದ್ದ ಲಖಪತಿ ದೀದಿ ಸಮ್ಮೇಳನದಲ್ಲಿ ಮಾತನಾಡಿದ ಅವರು, ಮಹಿಳೆಯರ ಸುರಕ್ಷತೆಗೆ ಆದ್ಯತೆ ನೀಡಬೇಕಿದೆ ಎಂದರು. ಕೆಂಪು ಕೋಟೆಯಲ್ಲಿ ಸ್ವಾತಂತ್ರ್ಯೋತ್ಸವದ ಸಂದರ್ಭದಲ್ಲಿ ಮಾತನಾಡುವಾಗ ಈ ವಿಷಯ ಪದೇ ಪದೇ ಪ್ರಸ್ತಾಪಿಸಿದ್ದೇನೆ. ದೇಶದ ಯಾವುದೇ ರಾಜ್ಯವಿರಲಿ, ಸಹೋದರಿಯರು ಹಾಗೂ ಹೆಣ್ಣು ಮಕ್ಕಳ ನೋವು ಮತ್ತು ಆಕ್ರೋಶ ಅರ್ಥವಾಗುತ್ತದೆ ಎಂದರು.

ಮಹಿಳೆಯರ ವಿರುದ್ಧ ಅಪರಾಧ ಎಸಗಲು ನೆರವಾಗುವವರನ್ನೂ ಬಿಡ ಬಾರದು. ಆಸ್ಪತ್ರೆಯೇ ಇರಲಿ, ಶಾಲೆಯೇ ಇರಲಿ, ಸರ್ಕಾರಿ ಕಚೇರಿಯೇ ಇರಲಿ, ಪೊಲೀಸ್ ಠಾಣೆಯೇ ಇರಲಿ, ಯಾವುದೇ ಹಂತದಲ್ಲೂ ನಿರ್ಲಕ್ಷ್ಯವಾದರೂ ಪ್ರತಿಯೊಬ್ಬರ ವಿರುದ್ಧ ಕ್ರಮವಾಗಬೇಕು ಎಂದು ಮೋದಿ ಹೇಳಿದರು.

# ನಿರ್ಮಾಪಕ ರಣಜಿತ್ ರಾಜೀನಾಮೆ

ತಿರುವನಂತಪುರಂ, ಆ. 25 - ಬಂಗಾಳಿ ನಟಿ ಜೊತೆ ಅನುಚಿತ ವರ್ತನೆ ತೋರಿದ ಆರೋಪದ ಹಿನ್ನೆಲೆಯಲ್ಲಿ ಮಲಯಾಳಂ ಚಿತ್ರ ನಿರ್ಮಾಪಕ ರಣಜಿತ್ ಅವರು ಕೇರಳ ಚಲನಚಿತ್ರ ಅಕಾಡೆಮಿ ಅಧ್ಯಕ್ಷ ಸ್ಥಾನಕ್ಕೆ ರಾಜೀನಾಮೆ ನೀಡಿದ್ದಾರೆ. ನಟಿ ಆರೋಪಗಳನ್ನು ರಣಜಿತ್ ತಳ್ಳಿ ಹಾಕಿದ್ದರು. ಈ ಪ್ರಕರಣದಲ್ಲಿ ನಾನೇ ನಿಜವಾದ ಸಂತ್ರಸ್ತ ಎಂದೂ ಹೇಳಿದ್ದರು. ಆದರೆ, ಮಾಧ್ಯಮದವರೂ ಸೇರಿದಂತೆ ಹಲವು ವ್ಯಕ್ತಿಗಳು ಸತ್ಯ ಅರ್ಥ ಮಾಡಿಕೊಳ್ಳದೇ ನನ್ನ ಮೇಲೆ ವಾಗ್ದಾಳಿ ನಡೆಸುತ್ತಿದ್ದಾರೆ. ಈ ಹಿನ್ನೆಲೆಯಲ್ಲಿ ನಾನು ಹುದ್ದೆಯಿಂದ ಕೆಳಗಿಳಿಯುತ್ತಿದ್ದೇನೆ ಎಂದು ರಣಜಿತ್ ತಿಳಿಸಿದ್ದಾರೆ.

# ಕೇಂದ್ರ ಗ್ರಂಥಾಲಯದಿಂದ ಸೌಭಾಗ್ಯ ಬೀಳಗಿಮಠ್‌ಗೆ ಸನ್ಮಾನ



ದಾವಣಗೆರೆ, ಆ.25- ಇಲ್ಲಿನ ಕೇಂದ್ರ ಗ್ರಂಥಾಲಯದಿಂದ ನಗರದ ಸಿಲ್ವರ್ ಜ್ಯೂಬಿಲಿ ಶಾಖಾ ಗ್ರಂಥಾಲಯದಲ್ಲಿ ಐ.ಎ.ಎಸ್ ಪರೀಕ್ಷೆಯಲ್ಲಿ 101ನೇ ರ್‍ಯಾಂಕ್ ಪಡೆದಿರುವ ಸೌಭಾಗ್ಯ ಬೀಳಗಿ ಮಠ ಅವರನ್ನು ಸನ್ಮಾನಿಸಲಾಯಿತು.

ಸನ್ಮಾನ ಸ್ವೀಕರಿಸಿ ಮಾತನಾಡಿದ ಸೌಭಾಗ್ಯ ಬೀಳಗಿ ಮಠ ಅವರು, ಸ್ಪರ್ಧಾತ್ಮಕ ಪರೀಕ್ಷೆಗೆ ತಯಾರಿ ನಡೆಸುವ ವಿದ್ಯಾರ್ಥಿಗಳು ಸಮಯ ಪರಿಪಾಲನೆ, ಶಿಸ್ತಿನ ಓದು, ವಿಷಯ ಗ್ರಹಿಕೆ ಮತ್ತು ಓದಿದ ವಿಚಾರ ಪುನರಾವರ್ತನೆ ಮಾಡಿಕೊಳ್ಳಬೇಕು ಎಂದು ಹೇಳಿದರು.

ದಿನ ನಿತ್ಯ ಓದಿನ ಸಮಯವನ್ನು ಪೂರ್ವ ನಿಯೋಜಿತವಾಗಿ ಸಜ್ಜುಗೊಳಿಸಿಕೊಳ್ಳಬೇಕು ಎಂದು ಗ್ರಂಥಾಲಯದಲ್ಲಿನ ಸ್ಪರ್ಧಾತ್ಮಕ ಪರೀಕ್ಷೆಗೆ ತಯಾರಿ ನಡೆಸುವ ವಿದ್ಯಾರ್ಥಿಗಳಿಗೆ ತಿಳಿಸಿದರು.


ಈ ವೇಳೆ ಗ್ರಂಥಾಲಯದ ಉಪ ನಿರ್ದೇಶಕ ಪಿ.ಆರ್. ತಿಪ್ಪೇಸ್ವಾಮಿ, ಶರಣಯ್ಯ ಬೀಳಗಿ ಮಠ, ಪತ್ರಕರ್ತ ಎಚ್.ಬಿ. ಮಂಜುನಾಥ, ಗ್ರಂಥಾಲಯ ಸಿಬ್ಬಂದಿಗಳಾದ ಬಿ.ಇ. ಮಹಾಸ್ವಾಮಿ, ಕೆ. ಗೋಪಾಲ, ಸಂಗಣ್ಣ ಬೆಳಗಲ್ಲ, ಮಂಜುನಾಥ ಎಸ್.ಬಗರಿ, ಎಂ.ಆರ್. ಪರಶುರಾಮಪ್ಪ ಇತರರಿದ್ದರು.

# ಶ್ರೀ ಕ್ಷೇತ್ರ ಆನೆಕೊಂಡದಲ್ಲಿ ಇಂದು ಬಸವೇಶ್ವರ ಸ್ವಾಮಿ ಕಾರಣಿಕ, ಜಾತ್ರೆ



ಸಮೀಪದ ಆನೆಕೊಂಡದ ಶ್ರೀ ಬಸವೇಶ್ವರ ಸ್ವಾಮಿ ದೇವಸ್ಥಾನದ ಜಾತ್ರಾ ಮಹೋತ್ಸವವು ಇಂದು ಶ್ರಾವಣದ ಕಡೇ ಸೋಮವಾರ ನಡೆಯಲಿದೆ. ಇಂದು ಸಂಜೆ 4 ಗಂಟೆಯಿಂದ ಶ್ರೀ ಕ್ಷೇತ್ರ ಆನೆಕೊಂಡದ ಶ್ರೀ ಬಸವೇಶ್ವರ ಮತ್ತು ನೀಲಾನಹಳ್ಳಿ ಶ್ರೀ ಆಂಜನೇಯ ಸ್ವಾಮಿ ಹಾಗೂ ನಿಟ್ಟುವಳ್ಳಿ ಶ್ರೀ ದುರ್ಗಾಂಬಿಕಾದೇವಿ ಹಾಗೂ ಸುತ್ತ ಮುತ್ತಲಿನ ಗ್ರಾಮದ ದೇವರುಗಳ ನ್ನೊಳ ಗೂಡಿ ಗ್ರಾಮದ ಪ್ರಮುಖ ಬೀದಿಗಳಲ್ಲಿ ವಿಜೃಂಭಣೆಯಿಂದ ಮೆರವಣಿಗೆಯ ಮೂಲಕ ಸಂಚರಿಸಿ ಸಂಜೆ 6 ಗಂಟೆಗೆ ಕಾರಣಿಕ ನಡೆಯಲಿದೆ ಎಂದು ಶ್ರೀ ಬಸವೇಶ್ವರ ದೇವಸ್ಥಾನದ ಕನ್ವೀನರ್ ಗೌಡ್ರ ಅಜ್ಜಪ್ಪ ತಿಳಿಸಿದ್ದಾರೆ.

# ನಗರದಲ್ಲಿ ಇಂದು ಕೋಟೇಶ್ವರ ದೇವರಿಗೆ ಬೆಳ್ಳಿ ಮುಖ ಕವಚ ಸಮರ್ಪಣೆ



ಪಿಬಿ. ರಸ್ತೆಯ ರಿಲಯನ್ಸ್ ಮಾರ್ಕೆಟ್ ಪಕ್ಕದಲ್ಲಿರುವ ಶ್ರೀ ಕೋಟೇಶ್ವರ ದೇವಸ್ಥಾನದ ದೇವರಿಗೆ ಇಂದು ಬೆಳಿಗ್ಗೆ 6.30ರಿಂದ 10 ರವರೆಗೆ ಬೆಳ್ಳಿ ಮುಖಕವಚ ಸಮರ್ಪಣೆ ಮತ್ತು ಪೂಜಾ ಕಾರ್ಯಕ್ರಮ ನಡೆಯಲಿದೆ. ಮಧ್ಯಾಹ್ನ ಭಕ್ತರಿಗೆ ಪ್ರಸಾದ ವ್ಯವಸ್ಥೆ ಇದೆ ಎಂದು ದೇವಸ್ಥಾನದ ಆಡಳಿತ ಮಂಡಳಿ ತಿಳಿಸಿದೆ.

# ಖರ್ಗೆ ಕುಟುಂಬದ ಟ್ರಸ್ಟ್‌ಗೆ ಕೆಐಎಡಿಬಿ ಜಮೀನು; ಬಿಜೆಪಿ ಆಕ್ಷೇಪ

ಬೆಂಗಳೂರು, ಆ. 25 – ಕೆ.ಐ.ಎ.ಡಿ.ಬಿ. (ಕರ್ನಾಟಕ ಕೈಗಾರಿಕಾ ಪ್ರದೇಶ ಅಭಿವೃದ್ಧಿ ಮಂಡಳಿ) ಮೂಲಕ ಕಾಂಗ್ರೆಸ್ ಪಕ್ಷದ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರ ಕುಟುಂಬದವರಿಗೆ ಜಮೀನು ನೀಡಿರುವುದನ್ನು ಪ್ರಶ್ನಿಸಿರುವ ಬಿಜೆಪಿ ನಾಯಕ ಹಾಗೂ ರಾಜ್ಯಸಭಾ ಸದಸ್ಯ ಲೆಹರ್ ಸಿಂಗ್ ಸಿರೋಯ, ಖರ್ಗೆ ಅವರ ಕುಟುಂಬ ಯಾವಾಗ ವೈಮಾನಿಕ ವಲಯದ ಉದ್ಯಮಿಗಳಾಗಿದ್ದಾರೆ? ಎಂದು ಕೇಳಿದ್ದಾರೆ.

ಇದು ಅಧಿಕಾರದ ದುರ್ಬಳಕೆ, ಪಕ್ಷಪಾತ ಹಾಗೂ ಹಿತಗಳ ಸಂಘರ್ಷವಲ್ಲವೇ? ಎಂದು ಪ್ರಶ್ನಿಸಿದ್ದಾರೆ.

ಮಲ್ಲಿಕಾರ್ಜುನ ಖರ್ಗೆ ಅವರ ಕುಟುಂಬ ನಡೆಸುವ ಸಿದ್ಧಾರ್ಥ ವಿಹಾರ ಟ್ರಸ್ಟ್‌ಗೆ ಕೆ.ಐ.ಎ.ಡಿ.ಬಿ. ಮೂಲಕ 5 ಎಕರೆ ಜಮೀನು ನೀಡಲಾಗಿದೆ. ಬೆಂಗಳೂರು ಬಳಿ ಇರುವ ಹೈಟೆಕ್ ರಕ್ಷಣಾ ವೈಮಾನಿಕ ವಲಯ ಪಾರ್ಕ್‌ನಲ್ಲಿ ಪರಿಶಿಷ್ಟ ಜಾತಿಯವರ ಕೋಟಾದಲ್ಲಿ ಈ ಜಾಗ ನೀಡಲಾಗಿದೆ ಎಂದು ಸಿರೋಯಾ ಹೇಳಿದ್ದಾರೆ.

ಈ ಟ್ರಸ್ಟ್‌ನಲ್ಲಿ ಮಲ್ಲಿಕಾರ್ಜುನ ಖರ್ಗೆ, ಅವರ ಪತ್ನಿ ರಾಧಾಬಾಯಿ ಖರ್ಗೆ, ಅಳಿಯ ಹಾಗೂ ಕಲಬುರಗಿ ಸಂಸದ ರಾಧಾಕೃಷ್ಣ ದೊಡ್ಡಮನಿ, ಮಗ ಹಾಗೂ ಕರ್ನಾಟಕ ಸಚಿವ ಪ್ರಿಯಾಂಕ್ ಖರ್ಗೆ, ಇನ್ನೋರ್ವ ಪುತ್ರ ರಾಹುಲ್ ಖರ್ಗೆ ಮತ್ತಿತರರು ಸದಸ್ಯರಾಗಿದ್ದಾರೆ. ಇದು ಅಧಿಕಾರಗಳ ದುರ್ಬಳಕೆ ಅಲ್ಲವೇ? ಎಂದು ಸಿರೋಯ ಕೇಳಿದ್ದಾರೆ.

# ಮಹಾರಾಷ್ಟ್ರ ಉದ್ಯೋಗಿಗಳಿಗೂ ಯುಪಿಎಸ್

ಮುಂಬೈ, ಆ. 25 - ಮಹಾರಾಷ್ಟ್ರ ಸರ್ಕಾರ ತನ್ನ ಸರ್ಕಾರಿ ಉದ್ಯೋಗಿಗಳಿಗೆ ಏಕೀಕೃತ ಪಿಂಚಣಿ ಯೋಜನೆ (ಯುಪಿಎಸ್) ಜಾರಿಗೆ ತರಲು ನಿರ್ಧರಿಸಿದೆ.

ಕೇಂದ್ರ ಸರ್ಕಾರ ನಿನ್ನೆ ಈ ಯೋಜನೆಯನ್ನು ಪ್ರಕಟಿಸಿತು.

ಯು.ಪಿ.ಎಸ್. ಮೂಲಕ ನೌಕರರಿಗೆ ಕೊನೆಯ 12 ತಿಂಗಳ ಮೂಲವೇತನದ ಶೇಕಡ 50ರಷ್ಟು ಪಿಂಚಣಿಯಾಗಿ ನೀಡುವುದನ್ನು ಖಾತರಿಗೊಳಿಸಲಾಗಿದೆ.

ನಂತರದಲ್ಲಿ ಮಹಾರಾಷ್ಟ್ರ ಸರ್ಕಾರ ಸಹ ಇದೇ ಯೋಜನೆಗೆ ಸೇರ್ಪಡೆಯಾಗಲು ನಿರ್ಧರಿಸಿದೆ. ಈ ವರ್ಷ ಮಾರ್ಚ್ ತಿಂಗಳಿನಿಂದ ಅನ್ವಯವಾಗುವ ರೀತಿಯಲ್ಲಿ ಯುಪಿಎಸ್ ಜಾರಿಗೆ ತರಲಾಗುವುದು.













KA/SK/DVG-028/2024-2026. O/P @ B.V. Nagar P.O. **JANATHAVANI** - Published, Owned and Printed by M.S. Vikas, at Jayadhara Offset Printers, # 605, Hadadi Road, Davangere - 5, Published from # 605, Hadadi Road, Davangere - 5. Editor: M.S. Vikas